

ಅಂಬಿಕಾತನಯದತ್ತರ

ಗಂಗಾವತರಣ



ಸಂಪಾದಕರು:

ಡಾ|| ವಾಮನ ಬೇಂದ್ರೆ



ಅಂಬಿಕಾತನಯದತ್ತರ

ಗಂಗಾವತರಣ

(ಕವನ ಸಂಕಲನ)

ಅಂಬಿಕಾತನಯದತ್ತರ ಕಾವ್ಯ
(ವರಕವಿ ಡಾ|| ದ. ರಾ. ಬೇಂದ್ರೆ)

ಗಂಗಾವತರಣ

(ಕವನ ಸಂಕಲನ)

ಸಂಪಾದಕರು :

ಡಾ|| ವಾಮನ ಬೇಂದ್ರೆ
ಸಹ-ನಿರ್ದೇಶಕರು,
ಬೇಂದ್ರೆ ಸಂಶೋಧನ ಸಂಸ್ಥೆ

ಪ್ರಕಾಶಕರು :
ಡಾ|| ಕೆ. ಎಸ್. ಶರ್ಮಾ,
ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ
ಶ್ರೀಮಾತಾ ಪ್ರಕಾಶನ,
ಅಂಬಿಕಾತನಯದತ್ತ ವೇದಿಕೆ
"ವಿಶ್ವಶ್ರಮ ಚೇತನ", ಗೋಕುಲ ರಸ್ತೆ ಹುಬ್ಬಳ್ಳಿ - ೫೮೦ ೦೩೦.
ಕರ್ನಾಟಕ ರಾಜ್ಯ

ಗಂಗಾವತರಣ (ಕವನ ಸಂಕಲನ)

★

ಕವಿ : 'ಅಂಬಿಕಾತನಯದತ್ತ' (ವರಕವಿ ಡಾ|| ದ. ರಾ. ಬೇಂದ್ರೆ)

★

ಸಂಪಾದಕರು : ಡಾ|| ವಾಮನ ಬೇಂದ್ರೆ,
ಸಹ ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ ಹುಬ್ಬಳ್ಳಿ

★

ಪ್ರಕಾಶಕರು :
ಡಾ|| ಕೆ. ಎಸ್. ಶರ್ಮಾ, ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ ಹುಬ್ಬಳ್ಳಿ
ಶ್ರೀಮಾತಾ ಪ್ರಕಾಶನ,
ಅಂಬಿಕಾತನಯದತ್ತ ವೇದಿಕೆ, 'ವಿಶ್ವಶ್ರಮ ಚೇತನ', ಗೋಕುಲ ರಸ್ತೆ ಹುಬ್ಬಳ್ಳಿ - 580 030.

★

★

ಬೆಲೆ : ರೂ. 80-00

★

ಮುದ್ರಣ : 27-10-2008

★

ಆಕಾರ : 1/8 ಡೆಮ್ಮಿ

★

ಕಲೆ : ಶ್ರೀ ಸುರೇಶ ಕುಲಕರ್ಣಿ, ಧಾರವಾಡ

★

ಹೊರಹೊದಿಕೆ ವಿನ್ಯಾಸ : ಶ್ರೀ ರವೀಂದ್ರ, ಶಿರೋಳಕರ, ಧಾರವಾಡ

★

ಪುಟ ವಿನ್ಯಾಸ/ಡಿಟಿಪಿ : ಶ್ರೀ ಈರಣ್ಣ ನೂಲ್ವಿ, ಡಾ|| ಕೆ. ಎಸ್. ಶರ್ಮಾ ಐ.ಟಿ.ಸಿ., ಹುಬ್ಬಳ್ಳಿ

★

ಮುದ್ರಕರು :
ಶರ್ಮಾ ಮುದ್ರಕರು,
4, ಪತ್ರಕರ್ತರ ಕಾಲನಿ, ಹುಬ್ಬಳ್ಳಿ - 580 032.

★

ಕೃತಿಗಳಿಗಾಗಿ ಬರೆಯಿರಿ :
ಶ್ರೀಮಾತಾ ಪ್ರಕಾಶನ,
'ವಿಶ್ವಶ್ರಮ ಚೇತನ', ಗೋಕುಲ ರಸ್ತೆ ಹುಬ್ಬಳ್ಳಿ - 580 030. ದೂರವಾಣಿ : (0836) 2330466.

ರವೀಂದ್ರ ಪುಸ್ತಕಾಲಯ,
ಚಾಮರಾಜಪೇಟೆ, ಸಾಗರ - 577 401, ಶಿವಮೊಗ್ಗ ಜಿಲ್ಲೆ ದೂರವಾಣಿ : 08183-228616 (ಕ).

ಅರ್ಪಣ

"ಜಲೇ ದೈವಂ ಸ್ಥಲೇ ದೈವಂ

ಪಾವಕೇ ಪವನೇ ತಥಾ

ಆಕಾಶೇ ಹೃದಯೇ ದೈವಂ

ದೈವ ಗರ್ಭೇ ಮಹಾಮ್ಯಹಂ"

ಎಂಬ ಶ್ರುತಿ ಕಳುಹಿದ ದೈವಕ್ಕೆ

ರಚನೆ : ಮೇಲಕೋಟೆ - ೧೯೪೨

ದ. ರಾ. ಬೇಂದ್ರೆ

ಪರಿವಿಡಿ

ಭಾಗ - ಈ : ದೇಶ : ಸಮಾಜ ಕವನಗಳು :

ಭಾಗ - ಉ : ಪ್ರೇಮ ಗೀತಗಳು :

ಭಾಗ - ಊ : ತತ್ವ : ಸೃಷ್ಟಿ ಕವನಗಳು :

ಆವೃತ್ತಿಗಳು
೧ನೇ ಆವೃತ್ತಿ : ೧೯೫೧
೨ನೇ ಆವೃತ್ತಿ : ೧೯೫೫
೩ನೇ ಆವೃತ್ತಿ : ೧೯೫೮
೪ನೇ ಆವೃತ್ತಿ : ೧೯೬೪
೫ನೇ ಆವೃತ್ತಿ : ೧೯೭೧
೬ನೇ ಆವೃತ್ತಿ : ೧೯೮೨
೭ನೇ ಆವೃತ್ತಿ : ೧೯೮೯
೮ನೇ ಆವೃತ್ತಿ : ೨೦೦೧
೯ನೇ ಆವೃತ್ತಿ : ೨೦೦೮

ಮುನ್ನುಡಿ

ಈ ಸಂಗ್ರಹ ಪ್ರಕಟವಾಗಿ ಬಹಳ ವರ್ಷವಾಗಬೇಕಾಗಿತ್ತು. ಹಾಗಾಗಲಿಲ್ಲ. ಆಗ ಜೀವಿಸಿದ್ದ ನನ್ನ ಹಿರಿಯ ಮಗ ಚಿ. ರಾಮಚಂದ್ರ ಇದರ ಅರ್ಧಪ್ರತಿ ಮಾಡಿದ. ಮುಂದೆ ಅವನು ಗತಿಸಿದ ಮೇಲೆ ಈ ಸಂಗ್ರಹ ಅರ್ಧ ಸ್ಥಿತಿಯಲ್ಲಿಯೇ ಉಳಿದಿತು. ನಾನೇ ಇದನ್ನು ಪ್ರಕಟಿಸಬೇಕೆಂದೂ ಪ್ರಯತ್ನ ಮಾಡಿದೆ. ಪ್ರಕಟನೆ ಕೊಟ್ಟೆ. ಇಡೀ ಕರ್ನಾಟಕದಿಂದ ಮುಂಗಾಣಿಕೆ ಎಂದು ಎಂಟು ಹತ್ತು ಜನರಿಂದ ಮಾತ್ರ ಹಣ ಬಂತು. ಆ ಮಿತ್ರರ ಹಣ ಅವರಿಗೆ ತಿರುಗಿ ಸಲ್ಲಿಸಿದ್ದೇನೆ. ಆದರೂ ನನ್ನ ಧನ್ಯವಾದಗಳು. ಈಗ ಈ ಸಂಗ್ರಹವನ್ನು ನನ್ನ ಮಿತ್ರರು ನನ್ನ ಬೇರೆ ಪುಸ್ತಕಗಳನ್ನು ಪ್ರಕಾಶಿಸಿದವರು ಆದ ಶ್ರೀ ಗೋವಿಂದಾಚಾರ್ಯ ಜೋಶಿ (ಜಿ. ಬಿ. ಜೋಶಿ) ಯವರೇ ಪ್ರಕಟಿಸುತ್ತಿದ್ದಾರೆ. ಇದಕ್ಕಾಗಿ ಪ್ರತಿಯನ್ನು ನನ್ನ ತರುಣಮಿತ್ರರು ಚಿ. ವಸಂತ ದಿವಾಣಜಿ ಇವರು ಮಾಡಿದ್ದಾರೆ. ಈ ಪ್ರಕಟಣೆ ಬೇಗ ಬರಬೇಕೆಂದು ಒತ್ತಾಯಪಡಿಸಿದ ಮಿತ್ರರು ಅನೇಕರು. ಅವರೆಲ್ಲರಿಗೂ ನಾನು ಋಣಿ. ಇದನ್ನು ಮುದ್ದಾಗಿ ಮುದ್ರಿಸಿದವರಿಗೂ, ತಿದ್ದುಪಡೆ ಮೊದಲಾದವುಗಳಲ್ಲಿ ಸಹಾಯ ಮಾಡಿದ ಮಿತ್ರರಿಗೂ ನಾನು ಕೃತಜ್ಞನಾಗಿದ್ದೇನೆ.

ಇದರಲ್ಲಿ ಬಂದ ಕೆಲವು ಕವನಗಳು ಈ ಪೂರ್ವದಲ್ಲಿ ಅಪ್ರಕಾಶಿತವಾದವುಗಳು. ಈ ಮಧ್ಯಕಾಲದಲ್ಲಿ ಪ್ರಕಾಶಿತವಾದ ಎಲ್ಲ ಕವನಗಳನ್ನೇನೂ ಈ ಸಂಗ್ರಹದಲ್ಲಿ ಸಂಗ್ರಹಿಸಿಲ್ಲ. ಮುಂದಿನ ಸಂಗ್ರಹಗಳಲ್ಲಿ ಅವು ಬರುವವು. ಈವರೆಗೂ ಈ ಕವನಗಳನ್ನು ಬರಮಾಡಿಕೊಂಡ ರಸಿಕವೃಂದವು ಇದನ್ನೂ, ಇನ್ನು ಬೇಗನೇ ಬರಲಿರುವ ಸಂಗ್ರಹಗಳನ್ನೂ ಸಹೃದಯತೆಯಿಂದ ಸ್ವೀಕರಿಸುವರು ಎಂದು ನಂಬಿದ್ದೇನೆ.

೮-೭-೧೯೫೧
ಸೊಲ್ಲಾಪುರ

- ದ. ರಾ. ಬೇಂದ್ರೆ

ಸಂಪಾದಕರ ಭೂಮಿಕೆ

ಉಪಾಸಕ ಕವಿ - ಅಂಬಿಕಾತನಯದತ್ತ

೧೯೪೪ರ ಪೂರ್ವದಲ್ಲಿಯೇ ರಚನೆಗೊಂಡು, ಮುದ್ರಣ ಪ್ರತಿಯೂ ಸಿದ್ಧವಾಗಿ, ಕೌಟುಂಬಿಕ ರೌದ್ರ ಸನ್ನಿವೇಶದ ಮೂಲಕ ಪ್ರಕಟಣೆ ವಿಲಂಬವಾದ ಮಾತನ್ನು ದ. ರಾ. ಬೇಂದ್ರೆಯವರು ಮುನ್ನುಡಿಯಲ್ಲಿ ಸೂಚಿಸಿದ್ದಾರೆ. ೧೯೪೪ರ ಪೂರ್ವದ ಜೀವನವೇ 'ಗಂಗಾವತರಣ' ಕವನ ಸಂಗ್ರಹದ ಪ್ರೇರಕಶಕ್ತಿ. ಪ್ರಥಮ ಮುದ್ರಣಗೊಂಡದ್ದು-೧೯೫೧ರಲ್ಲಿ.

'ಗಂಗಾವತರಣ'ವು ಕೆಲವು ಸಲ ಪಠ್ಯ ಪುಸ್ತಕವಾಗುವ ಸಂದರ್ಭ ಬಂದಿದೆ. ಆರ್.ಜಿ. ಕುಲಕರ್ಣಿಯವರು ತಾವು 'ಗಂಗಾವತರಣ' ವನ್ನು ಕಲಿಸುವಾಗ ಮಾಡಿದ ಅಭ್ಯಾಸ ಮತ್ತು ಚಿಂತನವನ್ನು ಆಧರಿಸಿ 'ಜೋಗಿಯ ನಾದಧ್ವನಿ' ಎಂಬ ಪುಸ್ತಕವನ್ನು ೧೯೭೯ರಲ್ಲಿ ಪ್ರಕಟಪಡಿಸಿದ್ದಾರೆ. 'ಗಂಗಾವತರಣ'ದಲ್ಲಿಯ ಕವನಗಳನ್ನು ಮೆಚ್ಚಿ ಬರೆದ ಕೆಲವು ಲೇಖನಗಳೂ ಇವೆ.

'ಗಂಗಾವತರಣ'ದ ನಾದಮಾಧುರ್ಯ; 'ಬಾರೊ ಸಾಧನಕೇರಿಗೆ'ಯಲ್ಲಿಯ ಕವಿಯ ವಾಸಸ್ಥಾನದ ವರ್ಣನೆ; ಧ್ವನಿಮುದ್ರಣಗೊಂಡ 'ಒಂದೇ ಕರ್ನಾಟಕ ಒಂದೇ';'ಅನ್ನಯಜ್ಞ'ದಲ್ಲಿಯ ಅನ್ನದ ಬೆಲೆ, ನೆಲೆ; 'ಗಮಗಮಾ ಗಮಾಡಸತಾವಮಲ್ಲಿಗೆ' ಎಂಬುದರಲ್ಲಿಯ ನಾಟಕೀಯತೆ, 'ಜೋಗಿ'ಯಲ್ಲಿಯ ಅದ್ಭುತ ನಿಗೂಢತೆ; 'ತುಂಬಿ' ಪದ್ಯದ ಛಂದಸ್ಸು ಇವುಗಳನ್ನು ಅನೇಕರು ಮೆಚ್ಚಿಕೊಂಡಿದ್ದಾರೆ.

ಶ್ರೀ ಬೇಂದ್ರೆಯವರಿಗೆ ಋಷಿಗಳು, ದಾರ್ಶನಿಕರು, ವಿಚಿತ್ರ ಕವಿ, ಗಾರುಡಿಗ ಎಂದು ಸಂಬೋಧಿಸಿದ್ದು ಕೆಲವರಿಗೆ ಸೇರಿಕೆಯಾಗಿಲ್ಲ, ಬೇಂದ್ರೆಯವರು ತಮ್ಮ ಕವನಗಳನ್ನು ಹಾಡಿ ತೋರಿಸುವುದು, ಅದೇ ಕಾಲದಲ್ಲಿ ಅಭಿನಯಪೂರ್ಣ ಭಾವವ್ಯಂಜನೆ ಮಾಡುವುದು ಇನ್ನು ಕೆಲವರಿಗೆ ಹಿಡಿಸುವುದಿಲ್ಲ ಎಂಬುದನ್ನೂ ಅವರು ವ್ಯಕ್ತಪಡಿಸಿದ್ದಾರೆ. 'ಗಂಗಾವತರಣ' ಪದ್ಯದಲ್ಲಿಯ ನಾದಮಾಧುರ್ಯವೂ ಕೆಲವರಿಗೆ ಸೇರಿಕೆಯಾಗಿಲ್ಲವಂತೆ. ಕವನದ ವೈಚಾರಿಕತೆ, ನಾದಮಾಧುರ್ಯ, ಅಲಂಕಾರಗಳ ಸೊಬಗು, ಶಬ್ದಗಳ ಬಳಕೆ - ಇತ್ಯಾದಿ ಘಟಕಗಳಲ್ಲಿ ಓದುಗರು ತಮ್ಮ ಅಭಿರುಚಿಯಂತೆ ತಮಗೆ ಬೇಕಾದ ಘಟಕಗಳನ್ನು ಮೆಚ್ಚುವುದು, ಬಿಡುವುದು, ಸಹಜವೇ ಆಗಿದೆ.

ಬೇಂದ್ರೆಯವರ ಕಾವ್ಯ ಬೇಂದ್ರೆಯವರಿಗಾಗಿಯೆ ಇದೆ. ಅವರು ತಮಗೆ ಹೇಳಲ್ಪಟ್ಟ, ತಮ್ಮಿಂದ ಬರೆಸಲ್ಪಟ್ಟ ಕವನಗಳನ್ನು ಮತ್ತೆ ಮತ್ತೆ ಓದಿ, ಆನಂದಪಟ್ಟು; ಅವುಗಳಲ್ಲಿಯ ಬೋಧವನ್ನು ಸ್ವೀಕರಿಸುತ್ತಿದ್ದರು. ಅವರು ಋಷಿಗಳಲ್ಲ, ಮನೆಮಾಡಿದ ಸಭ್ಯಾಗ್ನಿ ಸಾಧಕರು. ಅವರು ಗುರುಗಳಲ್ಲ, ಏಕೆಂದರೆ ಅವರು ಯಾರ ಕಷ್ಟವನ್ನು ಹೊರಲಾರರು, ನಿವಾರಿಸಲಾರರು. ಉಪದೇಶ ಮಾಡಿ ಗುರುಪೀಠ ನಡೆಸಬೇಕಾಗಿಲ್ಲ. ಅವರಿಗೆ ಒಂದು ರೀತಿಯ ಕವಿದೃಷ್ಟಿ, ಋಷಿಶ್ರುತಿ ಇದೆ. ಆ ಶ್ರುತಿ, ದರ್ಶನಗಳ ಉಪಾಸನೆಯಲ್ಲಿ ಮೂಡಿದ ಶೋಧವನ್ನು ಕೃತಿಯಾಗಿ ರಚಿಸಿ ಅವರು ಸುಖಪಟ್ಟರು.

'ಗಂಗಾವತರಣ' ಸಂಗ್ರಹದ ಪ್ರಾರಂಭ ಮತ್ತು ಕೊನೆಗೆ ಸೇರಿಸಿದ ಎರಡೂ ಪ್ರಾರ್ಥನೆಗಳು ಬೇಂದ್ರೆಯವರ ಜೀವನದ ಒಲವಿನ ನಿದರ್ಶಕಗಳಾಗಿವೆ. ಇವುಗಳಲ್ಲಿ ವಿಶ್ವ ಸಂದೇಶ ಅಡಗಿದೆ. 'ಕಿವಿಯಿಂದ ಲೇಸನ್ನು ಕೇಳಿ, ನಾಲಿಗೆಯಿಂದ ಲೇಸನ್ನೆ ನುಡಿದು, ಕಣ್ಣಿನಿಂದ ಲೇಸನ್ನೆ ನೋಡಿ, ಕೈಯಿಂದ

ಲೇಸನ್ನೇ ಮಾಡಿದರೆ ಸಾಕು' ಎಂಬುದು ಸುಲಭವಾಗಿ ತೋರಿದರೂ ಕಠೋರವಾದ ಸಾಧನೆ. ಈ ಸಾಧನೆಯ ಉಪಾಸಕರು ಬೇಂದ್ರೆಯವರು. ಅದರಂತೆ ಯಾವುದೇ ಕಾರ್ಯ ಇಬ್ಬರು, ಮೂವರು ಜೊತೆಗೂಡಿ ಮಾಡುವುದು ಬೇಂದ್ರೆಯವರಿಗೆ ಎಷ್ಟು ಸಹಜವೋ, ಪ್ರಿಯವೋ ಅಷ್ಟು ಅವರೊಬ್ಬರಿಂದ ಆಗುವುದು ಕಠಿಣ. ಕೂಡಿ ಬಾಳುವುದೇ ಅತ್ಯಂತ ಕಠಿಣ ಸಮಸ್ಯೆ. ಅದನ್ನೂ ಸಾಧನೆಯಿಂದಲೇ ಸಾಧಿಸಬೇಕಾಗುತ್ತದೆ. ಕೂಡಿ ಬಾಳಲು ಮಾಡಬೇಕಾದ ಉಪಾಸನೆಯನ್ನು ಅವರು ಸಾಕಷ್ಟು ಮಾಡಿದ್ದರು. ಬೇಂದ್ರೆಯವರ ಆತ್ಮೀಯತೆ, ಪೃಥ್ವಿ , ಆಪ್, ತೇಜ, ವಾಯು, ಆಕಾಶ ಈ ಪಂಚಮಹಾಭೂತಗಳ ಉಪಾಸನೆಯೊಂದಿಗೆ ಎಂಬುದು ಅವರ 'ಗಂಗಾಷ್ಟಕ', 'ಗಂಗಾವತರಣ', 'ಸರಸ್ವತಿ ಸೂಕ್ತ', 'ಒಂದೇ ಕರ್ನಾಟಕ ಒಂದೇ', 'ನೀವಾರಲಾ', 'ಅಗ್ನಿಸೂಕ್ತ ', 'ಹಂಸದ ಹಾಡು', 'ತುಂಬಿ' ಈ ಪದ್ಯಗಳಲ್ಲಿ ವ್ಯಕ್ತವಾವುಗುತ್ತದೆ. ಮನುಷ್ಯನ ಎಚ್ಚರ, ನಿದ್ದೆ, ಸ್ವಪ್ನ ಶುದ್ಧವಾಗಿದ್ದಷ್ಟೂ ಅವನಿಗೆ ಜೀವನೋಪಾಸನೆಯಲ್ಲಿ ಅನುಕೂಲ. ಬೇಂದ್ರೆಯವರು ಎಚ್ಚರದಲ್ಲಿ ರಸಿಕ ಮಾತುಗಾರರು; ನಿದ್ದೆಯಲ್ಲಿ -ಸ್ವಪ್ನ ವಿಜ್ಞಾನ ಆರಾಧಕರು. 'ಮನಸಿನಲ್ಲಿದ್ದುದು ಕನಸಿನಲ್ಲಿ ಕಾಣುತ್ತದೆ,' ಎಂಬ ಒಂದು ಸಾಮಾನ್ಯ ಮಾತಿದೆ. ಆದರೆ ಅವರು ಸ್ವಪ್ನದಲ್ಲಿ ಕಂಡದ್ದು ಮನಸ್ಸಿನಲ್ಲಿ ಏಕೆ, ಕನಸುಮನಸಿನಲ್ಲೂ ಬಯಸದ್ದು, ಅವರ್ಣನೀಯ ಅಪರಂಪಾರ ಕಂಡಿದ್ದಾರೆ. ಅನೇಕ ಮಂತ್ರೋಪದೇಶಗಳನ್ನು ಶ್ರವಣಮಾಡಿದ ಆರಾಧಕರಾಗಿದ್ದಾರೆ. 'ತೇಲಾಡುವಾಗ', 'ನೀವಾರಲಾ', 'ಅಪರೂಪ ರಾಗ'ದಂತೆ ಅನೇಕ ಕವನಗಳ ಸೃಷ್ಟಿ ಬೇಂದ್ರೆಯವರ ಸ್ವಪ್ನದಲ್ಲಿ ಗರ್ಭತಾಳಿ, ಎಚ್ಚರದಲ್ಲಿ ಜನ್ಮಪಡೆದಿವೆ.

''ನಿನ್ನಂಥ ಪುಣ್ಯವಂತಿಯ ಕಂಡು ಮೌನದಿಂದಿಹುದೊಂದು ಪಾಪವೆಂದು ಬಾಯಿ ತೆರೆದೆನೆ: ಬಂದ ಸ್ವಚ್ಛಂದ ಗೀತವೆ ಸಂತಾಪ ಹರಿಸಲೆಂದು '' ಎಂದು ಗಂಗಾಷ್ಟಕ ಬರೆದ ಕವಿ 'ಗಂಗಾವತರಣದಲ್ಲಿ' ಪತನ , ಅಧಃಪತನ ಎಂಬ ಶಬ್ದಗಳ ಸೂಕ್ಷ್ಮವನ್ನು ವಿವರಿಸುತ್ತಾನೆ. ಪತನ ಅವನತಿಯ ಹಾದಿಯಾದರೆ, ಅಧಃಪತನ ಉದ್ಧಾರಕ ಅವತರಣ. ಆದುದರಿಂದ ಉಪಾಸಕ ಬೇಂದ್ರೆ ಗಂಗೆಯಲ್ಲಿ ಹೀಗೆ ಬೇಡಿಕೊಳ್ಳುತ್ತಾನೆ-

''ನನ್ನ ತಲೆ[1]ಯೊಳಗೆ
ನನ್ನ ಬೆಂಬಳಿಗೆ
ನನ್ನ ಒಳಕೆಳಗೆ
ನುಗ್ಗಿ ಬಾ;
ಕಣ್ಣ ಕಣ[2] ತೊಳಸಿ
ಉಸಿರ ಎಳೆ ಎಳಸಿ
ನುಡಿಯ ಸಸಿ ಮೊಳೆಸಿ
ಹಿಗ್ಗಿ ಬಾ.
ಎದೆಯ ನೆಲೆ[3]ಯಲ್ಲಿ ನೆಲಿಸಿ ಬಾ
ಜೀವ ಜಲ[4]ದಲ್ಲಿ ಚಲಿಸಿ ಬಾ
ಮೂಲ ಹೊಲ[5]ದಲ್ಲಿ ನೆಲಿಸಿ ಬಾ

(೧) ತಲೆ=ಸಹಸ್ರ ದಲ ಚಕ್ರ. (೨) ಕಣ್ಣ ಕಣ=ಆಜ್ಞಾ ಚಕ್ರ. (೩) ಎದೆಯ ನೆಲೆ=ಅನಾಹತ ಚಕ್ರ.
(೪) ಜೀವ ಜಲ=ಸ್ವಾಧಿಷ್ಠಾನ ಚಕ್ರ. (೫) ಮೂಲ ಹೊಲ= ಮೂಲಾಧಾರ ಚಕ್ರ.

ಇಳಿದು ಬಾ ತಾಯಿ ಇಳಿದು ಬಾ''

ಮೂಲಾಧಾರದಲ್ಲಿಯ ಚಕ್ರದಿಂದ ಶಿರಸ್ಸಿನಲ್ಲಿರುವ ಚಕ್ರದವರೆಗೆ ಶುದ್ಧಿಯನ್ನು ಪಡೆಯುವುದು 'ಷಟ್‌ಚಕ್ರ ಉಪಾಸನೆ'ಯ ಮಾರ್ಗವಾಗಿದೆ.

ದ.ರಾ. ಬೇಂದ್ರೆ ಕುಟುಂಬವತ್ಸಲ ಗೃಹಸ್ಥರಾಗಿದ್ದಾರೆ. ಅವರು ತಮ್ಮ ವಾಸಸ್ಥಾನವಾದ ಸಾಧನಕೇರಿಯ ನಿಸರ್ಗರಮಣೀಯ ವಾತಾವರಣವನ್ನು 'ನಂದನದ ತುಣುಕೊಂದು ಬಿದ್ದಿದೆ, ನೋಟ ಸೇರದು ಯಾರಿಗೆ?' ಎಂದು ಕೇಳಿದ್ದಾರೆ.

''ಮೋಡಗಳ ನೆರಳಾಟವು
ಅಡವಿ ಹೂಗಳ ಕೂಟವು
ಕೋಟಿ ಜೇನ್ನೊಣ ಕೂಟವು
ಯಕ್ಷಿ ಮಾಡಿದ ಮಾಟವು
ನೋಡು ಬಾ ಗುಂಪಾಗಿ ಪಾತರ
ಗಿತ್ತಿ ಕುಣಿಯುವ ತೋಟವು''

ಎಂಬ ವರ್ಣನೆ ಈಗ ಬದಲಾಗುತ್ತ ಹೊರಟಿದ್ದರೂ, ಬಾಳೆ, ತೆಂಗು, ವಿವಿಧ ಪುಷ್ಪಲತೆಗಳಿಂದ 'ನಂದನದ ತುಣುಕೊಂದು ಬಿದ್ದಿದೆ' ಎಂಬ ಕವಿಯ ಆಶಯವನ್ನು ಕಾಯ್ದುಕೊಂಡೇ ಹೋಗುವುದೋ ಇಲ್ಲವೋ ಎಂಬುದು ಕಾದು ನೋಡಬೇಕು.

''ಹೃದಯಾರವಿಂದದಲ್ಲಿರುವ ನಾರಾಯಣನೆ
ತಾನಾಗಿ ದತ್ತನರನು
ವಿಶ್ವದೊಳನುಡಿಯಾಗಿ ಕನ್ನಡಿಸುತಿಹನಿಲ್ಲಿ
ಅಂಬಿಕಾತನಯನಿವನು''
''ಅಂತೆ ಕೂಸುತನದ ಗೊಂಬೆಯಲ್ಲಿ ಮುದ್ದು ಬಿಂಬಿಸೆ
ನೀನು ಅದನು ಚುಂಬಿಸೆ
ನಿನ್ನ ಮನದ ಮೂಸೆಯಲ್ಲಿ ಭಾವವಾಗಿ ಕರಗಿತು
ಜೀವವಾಗಿ ಮಿರುಗಿತು.''

ಎಂಬ ಈ ಎರಡು ಅಭಿವ್ಯಕ್ತಿಗಳು ವಿಚಿತ್ರವೆಂದು ತೋರಿದರೂ, ಕವಿಯ ಜೀವ ತನ್ನ ತಾನರಿತುಕೊಳ್ಳುವುದರಲ್ಲಿ ಮಗ್ನವಾಗಿದೆ ಎಂಬುದರ ಸಾಕ್ಷಿಯಾಗಿದೆ. ಬೇಂದ್ರೆಯವರಿಗೆ ತಾಯಿಯ ಬಗ್ಗೆ, ತಾಯಂದಿರ ಬಗ್ಗೆ ಅನಂತ ಆದರ. ಎಂಥ ಹೊಯ್ದಾಟದ ಸ್ಥಿತಿಯಲ್ಲಿಯೂ ತಾಯಿಯೆ ಆಧಾರ. ಅವಳ ಧ್ವನಿ, ಮಾತು ಎಂದರೆ 'ಸ್ವಾತಿ ಮಳೆಯ ಹನಿ ಚಿಪ್ಪಿನಲ್ಲಿ ಬಿದ್ದು ಮುತ್ತು' ಆದಂತೆ ಎಂದು 'ತೀಲಾಡುವಾಗ' ಎಂಬ ಪದ್ಯದಲ್ಲಿ ವಿವರಿಸಿದ್ದನ್ನು ನೋಡಬಹುದು.

ಅಗ್ನಿ ಸಾಕ್ಷಿಯಾಗಿ ಪತಿ-ಪತ್ನಿಯರಾದ ಮೇಲೆ, ಒಬ್ಬರನ್ನೊಬ್ಬರು ಹೊಂದಿಕೊಳ್ಳುವುದು ಬಿಡದ 'ಗೃಹಸ್ಥ ಧರ್ಮ' ಎಂಬುದನ್ನು

''ಬರುವುದೇನೆ ನೆಪ್ಪಿಗೆ
ಕೂಡಿದೊಂದ ತಪ್ಪಿಗೆ

ಏನೋ ಏನೋ ನೂತೆವು
ಬದುಕಿನೆಳೆಗೆ ಜೋತೆವು''

ಎಂಬಲ್ಲಿ ಕವಿ ವರ್ಣಿಸಿದ್ದಾರೆ. ಪತಿ-ಪತ್ನಿ ಯೋಗ ಸಾಮಾನ್ಯವಲ್ಲ. ಅದೂ ಒಂದು ಸಾಧನೆಯೆ ಎಂಬ ಮಾತನ್ನು 'ಘಜಾರಗಟ್ಟಿ ಮುಟ್ಟೋಣು ಬಾ' ಎಂಬ ಪದ್ಯದಲ್ಲಿ ಹೀಗೆ ನಿರೂಪಿಸಿದ್ದಾರೆ-

''ಗುರುವಿನಂಗಳದ ಗಿಡಾ ಬಳ್ಳಿಯಾಗಿ
ಹೊಸಾ ಹೂವು ನಾವು ಸುರಿಸೋಣ ಬಾ
ತಾಯಿ ಪಾದದಾನಂದ ಗಂಧ ಉಂಡು
ಬೆಂದವರ ಜೀವ ಬೆರಸೋಣ ಬಾ''

ದ. ರಾ. ಬೇಂದ್ರೆಯವರಿಗೆ ಮೂರು ಮಂದಿ ಹೆಣ್ಣು ಮಕ್ಕಳು, ಲಲಿತಾ ಮತ್ತು ಪ್ರೇಮಾಳನ್ನು ಕಳೆದುಕೊಂಡ ಕವಿಜೀವ, ಮಂಗಲೆಯನ್ನು ಪಡೆದಾಗ, ಆದ ಆನಂದ, ಉಂಟಾದ ಭಯ, ಬಯಸುವ ಶುಭ ಭಾವನೆ ಇತ್ಯಾದಿಗಳೆಲ್ಲ 'ಮಂಗಲಾ', 'ಕನಸಿನ ಕಥೆ', 'ಸಂಜೀಯ ಜಾವಿಗೆ' ಎಂಬ ಮೂರು ಪದ್ಯಗಳಾಗಿ ರೂಪ ತಾಳಿವೆ.

''ಹಿಡಿ ಹಿಡಿಯುತಿರಲು ನಾ ಹುಡುಗನಾದೆ
ನನ್ನ ಕೈಯೊಳಗಿತ್ತು ಬಾಲಬೋಧೆ''

ಎಂಬ 'ಕನಸಿನ ಕಥೆ'ಯಲ್ಲಿಯ ಸಾಲುಗಳು ಬೇಂದ್ರೆಯವರ ಜೀವನದ ಒಂದು ವಿಶಿಷ್ಟ ರೀತಿಯ ಸೂಚಕವಾಗಿವೆ. ಅವರು ಯಾವುದೆ ಶಾಸ್ತ್ರ, ಮತವನ್ನು, ವಿಜ್ಞಾನವನ್ನು ಅಭ್ಯಸಿಸಿದರೂ, ಅವರ ದೃಷ್ಟಿ ಮುಖ್ಯ ತತ್ತ್ವಗಳ ತಳಹದಿಯನ್ನು ಕಂಡುಹಿಡಿಯುವದರಲ್ಲಿ ತೊಡಗಿರುತ್ತದೆ-ಅದೇ ಬಾಲಬೋಧೆ. ತತ್ತ್ವಗಳೇ ಸಂಖ್ಯೆಗಳಾಗಿ, ಸಂಖ್ಯಾ ವಿಜ್ಞಾನ ಸಿದ್ಧಾಂತದ ಬಾಲಬೋಧೆ ಕವನ ಸಂಗ್ರಹ ರೂಪತಾಳಿದ್ದು ಬಹಳ ವರ್ಷಗಳ ಅನಂತರದಲ್ಲಿ.

'ಅಲ್ಲಿರುವ ನಲಿವೊಲವು, ಇಲ್ಲಿರುವ ಬಲಚೆಲುವು ಮಿಕ್ಕಿ ಸೂಸುವ ಹಾಗೆ ಜಗಕೆ ಸಾರು', 'ವಿಷನುಂಗೆ ಶ್ರೀಕಂಠ, ಬೇರೆ ಭೂಷಣ ಬೇಕೆ', 'ಕನ್ನಡ ಸವಿನುಡಿಯ ಬಾನ ಬೆಳಗುವ ಸೂರ್ಯ', 'ನೀನು ಅಗಿಯದ ನರಕವಿಲ್ಲ, ಮುರಿಯದ ಕಟ್ಟೆ ದಿತಿಯ ಸಂತತಿಯಿಂದ ಆಯ್ತು ಮೂರಾಬಟ್ಟೆ ಅಲ್ಲಿಯೂ ನಿನ್ನ ವಿಜಯಸ್ತಂಭ ನೀನೆಟ್ಟೆ', ಬುದ್ಧನ ಸಮಾಧಿಯದು ಮಾನವನ ಹೃದಯ. ಅದುವೆ ಕಾಯುತ್ತಲಿದೆ ಕಲ್ಕಿ ಉದಯ' ಎಂಬ ಈ ಎಲ್ಲ ಉಕ್ತಿಗಳಲ್ಲಿ ಅನುಕ್ರಮವಾಗಿ ಬೇಂದ್ರೆಯವರು - ತಂಗಿ ಜಾನಕಮ್ಮ, ಶ್ರೀಕಂಠಯ್ಯ, ಪಂಪ, ಗಾಂಧಿ ಮತ್ತು ಬುದ್ಧ ಈ 'ಗಣ್ಯ ವ್ಯಕ್ತಿಗಳಲ್ಲಿ ಕಂಡ ಹಿರಿಮೆಯನ್ನು ಕಂಡರಿಸಿದ್ದಾರೆ. ಸಮಕಾಲೀನ ಮತ್ತು ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ವ್ಯಕ್ತಿಗಳನ್ನು ಕುರಿತು ನೂರಾರು ಕಡೆಗೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. ಇಂಥ ಸಂದರ್ಭಗಳಲ್ಲಿ ಮಾಸ್ತಿ, ಗೋಕಾಕರ ರೀತಿಯೆ ಬೇರೆ.

'ನೀವಾರಲಾ ?' ನೀವಾರಲಾ? ಎಂದು ಕೇಳಾಡುತ್ತ 'ಯಾರಿಗೆ ಯಾರೋ' ಎಂಬಂತೆ ವರ್ತಿಸುವುದು ಒಂದೇ ದೇಶದಲ್ಲಿರುವವರ ಲಕ್ಷಣವಲ್ಲ. ಸೀಮಾವಾದ, ಭಾಷಾವಾದ, ಮತೀಯ ವಾದಗಳನ್ನು ಬೆಳಸದೆ, ತಮಿಳರು, ತೆಲುಗರು, ಮಹಾರಾಷ್ಟ್ರೀಯರು, ನೆರೆಹೊರೆಯವರು; ಕೊಂಕಣ, ಕೊಡಗು, ತುಳು ದೇಶದವರು; ತೊದವ ಕುರುಂಬಾದಿಗಳೆಲ್ಲ ಒಂದು, ಎಂಬ ಭಾವನೆ ಕರ್ನಾಟಕದವರಲ್ಲಿ ನೆಲೆ ನಿಲ್ಲಲಿ ಎಂದು ಕವಿಯ ಆಶೆ. ನಮ್ಮ ದೇಶವು ವಿಶ್ವ ಮೈತ್ರಿಯ

ಕ್ಷೇತ್ರವಾಗಬೇಕು ಎಂಬ ಬಯಕೆಯೂ ಕವಿಗಿದೆ. ಹಾಗೆ ಕವಿಯು ಸೊನ್ನಲಿಗೆಯ ಸಿದ್ಧರಾಮನಲ್ಲಿ ಪ್ರಾರ್ಥಿಸಿಕೊಂಡಿದ್ದಾನೆ.

ಕಂಸನ ಸಂಹಾರವಾಗಿ, ಕೃಷ್ಣನ ತಂದೆ ತಾಯಿಯವರ ಬಂಧ ವಿಮೋಚನೆಗೆ ಕಾರಣವಾದ ಶ್ರಾವಣಮಾಸವು, ನಮ್ಮ ಭಾರತದೇಶವನ್ನೂ ಆಂಗ್ಲರ ದಬ್ಬಾಳಿಕೆಯಿಂದ ಮುಕ್ತಮಾಡಿ, ಸ್ವತಂತ್ರ ರಾಷ್ಟ್ರವನ್ನಾಗಿ ಮಾಡೀತು ಎಂಬ ಶ್ರದ್ಧೆ ಕವಿಗಿತ್ತು, ಆ ಶ್ರದ್ಧೆಯಿಂದ ಕವಿ ಮಾಡಿದ ಪ್ರಾರ್ಥನೆ - 'ಬಂದಿಕಾರ ಶ್ರಾವಣಾ' ಎಂಬ ಪದ್ಯ. ಮುಂದೆ ಅದು ನಿಜವಾಗಿ, ೧೫, ಆಗಸ್ಟ ೧೯೪೭ಕ್ಕೆ ದೇಶ ಸ್ವತಂತ್ರವಾಯಿತು.

ದೇಶದಲ್ಲಿ ಅನ್ನಕ್ಕೆ ಕೊರತೆ ಇಲ್ಲ . ಅನ್ನ ನೀಡುವವರ ಕೊರತೆ ಇದೆ. 'ಹೊನ್ನ ನೆಕ್ಕಿ ಬಾಳ್ವರಿಲ್ಲ ಅನ್ನ ಸೂರೆಮಾಡಿರಿ. ಅಣ್ಣಗಳಿರಾ ಅನ್ನದಲ್ಲಿ ಮಣ್ಣ ಕಲಿಸಬೇಡಿರಿ' ಎಂಬ ಎಚ್ಚರಿಕೆ ಮೂಡುವುದು ಅವಶ್ಯವಿದೆ. ಸಮಾಜದಲ್ಲಿ ನರ್ಸಿನ ಪಾತ್ರದ ಉದಾರ ಸ್ನೇಹದ ಚಿತ್ರ 'ನರ್ಸ' ಪದ್ಯದಲ್ಲಿ ರೂಪ ತಾಳಿದೆ.

ಅಂಬಿಕಾತನಯದತ್ತರ ಪ್ರೇಮ ಕವನಗಳನ್ನು ಮೆಚ್ಚಿದವರು ಅನೇಕರು. ಆ ಕವನಗಳಲ್ಲಿದ್ದ ಕಾವು ಇನ್ನುಳಿದ ಕವನಗಳಲ್ಲಿ ಇಲ್ಲ ಎಂದೂ ಅಭಿಪ್ರಾಯವಿದೆ. 'ಗಂಗಾವತರಣ'ದಲ್ಲಿಯ ಪ್ರೇಮ ಕವನಗಳ ರೀತಿ ವಿಶಿಷ್ಟವಾಗಿದೆ. ಪ್ರೇಮ ಕಾವು ಆಗಬಾರದು, ಜ್ಯೋತಿಯಾಗಬೇಕು. 'ಆಳವನರಿಯದ ಹುಸಿಯೊಲವು, ಊಳದ ಬಿತ್ತದ ಬರಿ ಹೊಲವು' ಎಂಬಲ್ಲಿ ಪ್ರೇಮದ ಆಳ ಅಗಮ್ಯವಾಗಿದೆ ಎಂಬುದನ್ನು ಸೂಚಿಸಿ; ಶಿವಶಕ್ತಿ ಪ್ರೇಮವನ್ನು 'ಶಿವದೃಷ್ಟಿ' ಕವನದಲ್ಲಿ ಚಿತ್ರಿಸಿದ್ದಾರೆ. ಇದು ದೇವಕಾಮ. ದೇಹಕಾಮಕ್ಕೆ ವಿರಹವೇದನೆಯೂ ಹೆಚ್ಚು- 'ಕೊಲ್ಲುವವನೆ ಕಾವ, ತಾಳೆನೆ ನೋವ, ಇಂದಿಗೇ ಜೀವ ಬರಿ ಹೆಸರು'. ಆದುದರಿಂದ ದೇಹಕಾಮವು, ಹಾಳಿಪಟದಂತೆ ಗಾಳಿಯಲ್ಲಿ ತೇಲಾಡುವಷ್ಟು ಹಗುರಾಗಿರಬೇಕೆ ಹೊರತು, ಜಡವಾಗಿ ನೆಲಕ್ಕೆ ಅಂಟಿಕೊಳ್ಳಬಾರದು ಎಂಬ ವಿಚಾರವನ್ನು 'ಅಪರೂಪ ರಾಗ' ದಲ್ಲಿ ಮಂಡಿಸಿದ್ದಾರೆ. ಮಾನವನು ಹೃದಯದಲ್ಲಿ 'ತಾಜಮಹಲ' ಕಟ್ಟಬೇಕೆ ಹೊರತು ಕಲ್ಲಿನಿಂದ ತಾಜಮಹಲ ಕಟ್ಟಿದರೆ ಏನು ಬಂತು? ಎಂದು ಕವಿ ಪ್ರಶ್ನಿಸುತ್ತಾನೆ. ಹೃದಯದ ಮಾತು ಶಾಶ್ವತ, ಹೊರಗಿನ ಎಂಥ ಭದ್ರ ವಸ್ತುವೂ ಕಾಲದಲ್ಲಿ ಅಶಾಶ್ವತ. 'ತಾಜಮಹಲ' ಇದು ಪ್ರೇಮದ ಸಂಕೇತ. ಹೃದಯವೇ ತಾಜಮಹಲವಾಗಬೇಕಾದರೆ, ಒಂದು ಹೊಸ ಸೂಕ್ಷ್ಮತೆ, ಆಳ ಮೂಡಬೇಕಾಗುತ್ತದೆ. ಕೃಷ್ಣ ಗೋಪಿ ಪ್ರೇಮವು ಆ ಜಾತಿಯದು. 'ಸೂಜಿ ಹಿಂದ ಧಾರಧಾಂಗ, ಕೊಳ್ಳದೊಳಗ ಜಾರಿಧಾಂಗ ಹೋತಽ ಹಿಂದ ಬಾರಧಾಂಗ' ಎಂಬ ಸ್ಥಿತಿ ಪ್ರಾಪ್ತವಾದಾಗ ಒಂದು 'ಜೀವ ನಯನ' ಪ್ರಾಪ್ತವಾಗುತ್ತದೆ. ಆ ನಯನ ಪ್ರಾಪ್ತವಾದಾಗ ದೇಹ ಕಾಮ, ದೇವಕಾಮಕ್ಕಿಂತ ಕಾಮದೇವ ಶ್ರೇಷ್ಠ ಎಂಬ ಅರಿವು ಮೂಡುತ್ತದೆ. ಆಗ ಕಾಮ ವಿಕಾರವಾಗದೆ 'ಎದೆಯ ಒಲವೆ, ಅವನ ಕುಲುಮೆ, ಬೇರೆ ಒಲುಮೆ ಹಾಳು' ಎಂಬ ಪ್ರಜ್ಞೆ ಮೂಡುತ್ತದೆ. ಕಾಮ-ಪ್ರೇಮ-ಭಕ್ತಿ-ಸರ್ವಾರ್ಪಣಭಾವ ಈ ಸೂತ್ರಕ್ಕೆ ಬೇಂದ್ರೆಯವರ ಪ್ರೇಮ ಕವನಗಳು ಹುರಿಹಾಕುತ್ತವೆ ಎಂದು ತೋರುತ್ತದೆ. ಮೇಘದೂತದ ಕಾವ್ಯಮಯ 'ಪೀಠಿಕೆ' ಅದು.

ದವನ-ಕವನ ಇವು ಬರಿ ಪ್ರಾಸದ ಶಬ್ದಗಳಲ್ಲ. ಅವುಗಳಲ್ಲಿ ಒಂದು ಪ್ರಾಸ ಇರುವಂತೆ, ಅಸಾಮಾನ್ಯ ಗುಣಗಳ ಸಾಮ್ಯವೂ ಇದೆ. 'ಬಾಡದಂತೆ ಬದುಕುವಂಥ ಬಾಳನೆಲೆ'ಯನ್ನು ಅವು ತೋರಿಸುತ್ತಿವೆ ಎಂದು ಅಂಬಿಕಾತನಯದತ್ತರು ಕಂಡಿದ್ದಾರೆ.

'ತತ್ತ್ವ ಸೃಷ್ಟಿ' ಎಂಬ ವಿಭಾಗದಲ್ಲಿ 'ಮಲ್ಲಿಗೆ', 'ಹೂವೆ', 'ನಸುಕು ಬಂತು' ಎಂಬ ಮೂರೂ ಪದ್ಯಗಳಲ್ಲಿ ಸೃಷ್ಟಿವೈಚಿತ್ರ್ಯವಾದ ಹೂವಿನ ವಿಷಯವೇ ಬರುತ್ತದೆ. 'ಮಲ್ಲಿಗೆ' ರಮಣೀಯ ಶುಭ್ರಕಾಂತಿಯ ಮೃದು ಸುಗಂಧಪುಷ್ಪ. ಇಂಥ ಸುಗಂಧಪುಷ್ಪಗಳಿಗೆ ಕವಿ ಬೇಡಿಕೊಳ್ಳುವುದು ಹೀಗೆ - 'ಗಂಧವತಿ ಪೃಥ್ವಿಯಿಂದ ಮೂಡಿಬಂದ ಹೂವುಗಳೇ, ನಿಮ್ಮ ಕಂಪಿನಿಂದ ಇಲ್ಲಿಯ ಮಣ್ಣು ಕೂಡ ಕಂಪು ಉಳ್ಳದ್ದಾಗಲಿ', 'ಬೆಳಕು ಹೂತು ಅತು ಬಿಸಿಲು, ನಸುಕು ಬಂತು' ಎಂಬಲ್ಲಿ ಬೆಳಕು ಕೂಡ ಹೂವಿನಂತೆ ಅರಳುವಿಕೆ, ಮುಚ್ಚುವಿಕೆಯ ಆಟವನ್ನು ಆಡುತ್ತದೆ ಎಂದು ಕವಿ ಕಂಡಿದ್ದಾರೆ.

ಗೆಳೆಯರ ಬಳಗದವರು ಮೌನ, ಧ್ಯಾನ, ಜಪ ಇತ್ಯಾದಿಗಳಲ್ಲಿ ನಂಬಿಕೆ ಉಳ್ಳವರಾಗಿದ್ದರು. ಆದುದರಿಂದ ಅವರು ಮೌನವಾರಗಳನ್ನು ಆಚರಿಸುತ್ತಿದ್ದರು. ಮೌನವಾರದಲ್ಲಿ ಬಂದ ಅನುಭವಗಳೂ ಕವನ ರೂಪತಾಳಿವೆ.

ನಾಮಜಪದ ತಾದಾತ್ಮ್ಯದ ಒಂದು ಅನುಭವ 'ಜೋಗಿ' ಪದ್ಯದ ಸ್ಥಾಯಿಭಾವ. ಇಲ್ಲಿ ಭಕ್ತ ಒಂದು ಹೆಣ್ಣು ಜೀವ, ಭಗವಂತ ಜೋಗಿ ಎಂದು ಹೇಳಬಹುದು. ಭಕ್ತ-ಭಗವಂತ ಮಾರ್ಗ ಸುಲಭ ರಮಣೀಯವೂ ಹೌದು-'ಅತ್ತಿಗಿಡಕ ಹತ್ತ್ಯಾವ ಹಲಸಿನ್ಹಂಗ ಬುಡಕ ಕೆಂಪು ಹಣ್ಣು, ಜೇನು ತುಂಬಿ, ತೊಟಗುಟ್ಟತಾವ ಅದ ಬಯಸತಾವ ಕಣ್ಣು ಈ ತೋಪಿನ್ಯಾಗ ಬೆಳೆದsದ ಹ್ಯಾಂಗೋ ಮೂಲ್ಯಾಗ ತಪ್ಪಿ ಮಾವು'. ಆದರೆ ಅದು ಕಠಿಣ ಹಾದಿ-'ದಿಕ್ಕು ತಪ್ಪತಾರ ತಪ್ಪಿ ಹೊಕ್ಕರs ಕಕ್ಕಾಬಿಕ್ಕಿಯಾಗಿ, ಇರುಳು ಅಂತನs ಹಗಲs ಗೂಕತಾವ ಅಲ್ಲಿ ಜೋಡಗೂಗಿ' ಅದರಡಿಗೆ ಹುತ್ತ ಅದರಾಗ ಐತೆ ಒಂದೇಳ ಹೆಡೆಯ ಹಾವು.' ನಾಮ ಜಪದ ಮಾರ್ಗದಲ್ಲಿ ಸರಿಯಾಗಿ ಸಾಗಿದರೆ, ಭಗವಂತ-ಜೋಗಿ ಭಕ್ತನತ್ತ ಹೊರಳಿ ಸಹಾಯ ಹಸ್ತ ನೀಡಿ ಜಗ್ಗಿಕೊಂಡು ಬಿಟ್ಟರೆ, ಒಂದು ಹೊಸ ಜಗತ್ತಿಗೆ ಕಾಲಿಟ್ಟಂತೆ ಎಂಬ ಮಾತನ್ನು ಕವಿಗಳು ಹೀಗೆ ವರ್ಣಿಸಿದ್ದಾರೆ-

"ಬಂದೆ ಜೋಗಿ ಬಾ, ಬಾರೊ ಜೋಗಿ ಬಾ, ಏನು ಹೊತ್ತು ಬಂದಿ
ನೀನೆ ಹೇಳಿದಾ ನಾಮ ಜಪಿಸುವಾಗ ಬಂತೊ ಸುಗ್ಗಿ ಸಂಧಿ.
ತಲೆಯ ಯಾವದೋ ನಾಡಿಯೊಳಗ (ದಶಮಕೇಂದ್ರ) ಸುರುವಾತು ಸುಗ್ಗಿ ಸೊಲ್ಲು
ಮುಂದ ಕೇಳಿದರ ಅದs ತುಂಬಿತೋ ಮೂಲೆಮೂಲೆಯಲ್ಲು"

'ಜೋಗಿ' ಇದು ಶಬ್ದಶಃ ಭಾವಗೀತ. ಇದರ ಅರ್ಥ ಭಾವಕ್ಕೆ ಅನುಭವವಾಗಬೇಕೇ ಹೊರತು ಬರಿ ಬುದ್ಧಿಗಮ್ಯವಲ್ಲ.

'ಸಾಹಿತ್ಯಕ್ಕೆ ಸಹಯೋಗವು ಬೀಜ. 'ಸೋಹಂ ಹಂಸೋ' ಇದು ಇನ್ನೊಂದು ಉಪಾಸನಾ ಮಾರ್ಗ. 'ಉಸಿರಲಿ ಹಾರುವ ಜೀವದ ಹಂಸ, ಶ್ವಾಸೋಚ್ಛ್ವಾಸದ ರೆಕ್ಕೆಯ ಹಂಸ, ಒಳಗೂ ಹೊರಗೂ ಒಂದೇ ಹಂಸ' ಎಂಬುದು ಪ್ರಾಣಾಯಾಮದ ರೀತಿ. ಬ್ರಹ್ಮ-ಮಾಯಾ, ಕೃಷ್ಣ-ರಾಧಾ, ಶಿವ-ಶಕ್ತಿ ಇವು ಅನಾದಿ ದಾಂಪತ್ಯ. ಬ್ರಹ್ಮನ ವಾಹನ ಹಂಸ. ಬ್ರಹ್ಮನ ಮಂತ್ರ 'ಸೋಹಂ' ಆದುದರಿಂದ ಬ್ರಹ್ಮದೇವ ಪ್ರತಿಯೊಬ್ಬನ ಜೀವ ಕೇಂದ್ರನಾಗಿರುತ್ತಾನೆ. ಆ ಜೀವ ಕೇಂದ್ರದತ್ತ ಸಾಗಬೇಕಾದರೆ ಮಾಯೆ ಎಂಬುದೇ ಜೀವನನೌಕೆ. ಈ ನೌಕೆ ಸುಗಮವಾಗಿ ಬ್ರಹ್ಮಕೇಂದ್ರ ಮುಟ್ಟ ಬೇಕಾದರೆ, ಜೀವನು 'ಸೋಹಂ', 'ಹಂಸೋ' ಎಂಬ ಹುಟ್ಟು ಸರಿಯಾಗಿ ಹಾಕಬೇಕು ಎಂಬ ವಿಚಾರಗಳನ್ನು ಕವಿಗಳು 'ಹಂಸದ ಹಾಡು', 'ಬದುಕು ಮಾಯೆಯ ಮಾಟ' ಎಂಬಲ್ಲಿ ವ್ಯಕ್ತಪಡಿಸಿದ್ದಾರೆ.

ಸತ್ಯ, ಪ್ರೀತಿ, ಸೌಂದರ್ಯ, ಆನಂದ, ಸಜ್ಜನಿಕೆ, ಸಾಮರ್ಥ್ಯ ಇವು ಆರು ಜೀವನ ಮೌಲ್ಯಗಳು. ಸತ್ಯದ ಆನಂದ, ಸೌಂದರ್ಯದ ಪ್ರೀತಿ, ಸಾಮರ್ಥ್ಯದ ಸಜ್ಜನಿಕೆ ಜೊತೆಗೂಡಬಾರದು; ಸತ್ಯ ಪ್ರೀತಿ; ಸೌಂದರ್ಯ ಆನಂದ; ಸಜ್ಜನಿಕೆಯ ಸಾಮರ್ಥ್ಯ ಜೊತೆಗೂಡಬೇಕು ಎಂಬುದು ಬೇಂದ್ರೆ ವಿಚಾರ. ಇದು 'ನಿಜದಲ್ಲೆ ಒಲವಿರಲಿ, ಚೆಲುವಿನಂತೆ ನಲಿವಿರಲಿ, ಒಳಿತಿನಲಿ ಬಲವಿರಲಿ' ಎಂಬ ಉಕ್ತಿಯಲ್ಲಿ ಪ್ರತಿಷ್ಠಾಪನೆಗೊಂಡಿದೆ. ಅವರು ಕಂಡ ಮಾರ್ಗದ ಉಪಾಸಕರು ಅವರೆ. ಇಲ್ಲಿ ಗುರು-ಶಿಷ್ಯ ಬೇರೆ ಇಲ್ಲ.

ಏನು? ಯಾಕೆ? ಎಲ್ಲಿ? ಯಾರು? ಬೆಳಕು? ಅಮೃತ? ದಿಟ? ಎಂಬ ಶಾಶ್ವತ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವ 'ಜಿಜ್ಞಾಸೆ' ಉಪಾಸಕ ಬೇಂದ್ರೆಯವರಲ್ಲಿ ಮೂಡಿದಾಗ, ಅವರಿಗೆ ಸಿಕ್ಕ ಉತ್ತರ ಹೀಗಿದೆ-

"ನಿನಗೆ ಲೀಲೆ ಸೇರುವಾಗ
ನನಗೆ ಏಕೆ ಬೇಸರ?
ಕಟ್ಟಿ ಮುರಿದು ಕೆಡಿಸು ಬೆಳಿಸು
ನೀನೆ ನನಗೆ ಆಸರ.
ಸಾಗಲಿಂತು ಚಕ್ರವು
ನಿನ್ನ ರೀತಿ ವಕ್ರವು
ನೀನು ಬಾ ಅನಂತನಾಗಿ
ಜೀವ ಇರಲಿ ಅಮೃತವಾಗಿ
ತಾಪ, ಪಾಪ, ನೋವು, ದುಃಖ
ಚಿಂತೆ ಭೋಗದಾಟವು
ನಟನ ಹಾಗೆ ಎನಿಸಲೆನಗೆ
ನಿನ್ನ ಕಲೆಯ ಮಾಟವು"

ಇದೂ ಒಂದು ಬೇಂದ್ರೆಯವರ ಜೀವನಸೂತ್ರವಾಗಿದೆ ಎಂದು ತೋರುತ್ತದೆ. 'ನೀನೊ ಕಥೆಯ ಮಾಡುವೆ, ತಿಳಿಯದೆಂದು ತಿಳಿದಿತು, ಇಷ್ಟು ನನಗೆ ಹೊಳೆದಿತು' "ನಾದಂ ಮನ್ಯೇಸುವೇದೇತಿ..........." ಎಂದು ಅವರ ಜಿಜ್ಞಾಸೆ ವಿರಮಿಸುತ್ತದೆ.

ಕೊನೆಯದಾಗಿ ಅನುಭಾವಗೀತಗಳ ವಿಷಯ. ಸುಷುಪ್ತಿ ತುರೀಯ, ತುರೀಯಾತೀತದ ಮಾತು ಅನುಭಾವದ ವಿಷಯ. ಸಾಮಾನ್ಯ ಮನುಷ್ಯನ ಅನುಭವಕ್ಕೆ ಬರುವ ವಿಷಯ ಎರಡೇ- ನಿದ್ದೆ ಎಚ್ಚರ. ಸಾಧಕನಿಗೆ ಸ್ವಪ್ನಬೋಧ ಮಾರ್ಗದರ್ಶಕ. ಆ ಉಪಾಸಕನೇ ಸುಷುಪ್ತಿ, ತುರೀಯ ತುರೀಯಾತೀತದ ಶೋಧಕ.

ಸರಸ್ವತಿ-ಶುಭ್ರ ಪ್ರಕಾಶ. ಹಂಸ ಅವಳ ವಾಹನ. ಹಂಸದೊಡಗೂಡಿ ವಿದ್ಯಾರಸ (ನೀರು) ನೀಡುವಾಕೆ, ಶುಭ್ರ ಪ್ರಕಾಶದಾಕೆ-ಸರಸ್ವತಿ. ಅವಳು ಉಪಾಸಕನ ಧ್ಯಾನದಲ್ಲಿ 'ಅಂಚೆ ಏರಿ ನೀರಿನಾಕೆ ಗಾಳಿಯಲ್ಲಿ ಸುಳಿದಳೋ ಬೆಳಕಿನಲ್ಲಿ ಬೆಳೆದಳೋ' ಎಂಬ ದರ್ಶನವನ್ನು ಕೊಡುತ್ತಾಳೆ. ಕವಿ, ಸರಸ್ವತಿ ಮತ್ತು ಪ್ರಕಾಶದ ಆರಾಧಕನೆಂಬುವುದು 'ಸರಸ್ವತೀಸೂಕ್ತ' ಮತ್ತು 'ಅಗ್ನಿಸೂಕ್ತ'ದಲ್ಲಿ ವ್ಯಕ್ತವಾಗಿದೆ. 'ಮೂಡಲಮನೆಯಾ' ಬಲ್ಲವರಿಗೆ ಇದು ಹೇಳಬೇಕಾಗಿಲ್ಲ.

ಇದೇ ಪ್ರಕಾರ ಬೇಂದ್ರೆಯವರಿಗೆ ಲಲಿತೋಪಾಸನೆ ಕುಲಾಚಾರ. 'ಲಲಿತೆ' ಎಂದು ಅವರು ತಮ್ಮ ಒಬ್ಬ ಮಗಳಿಗೂ ನಾಮಕರಣ ಮಾಡಿದ್ದರು. ಆದರೆ ಅವಳು ಬದುಕಲಿಲ್ಲ. ಲಲಿತಾಸಹಸ್ರ ಉಪಾಸನೆ ಮಾಡುತ್ತಿರುವಾಗಲೇ ಅವರ ಕೊನೆಯ ಮಗ - ಆನಂದ ಅಸುನೀಗಿದ ಘಟನೆಯೂ ಉಂಟು. ಹೀಗೇನಿದ್ದರೂ ಕವಿ ಜೀವ ಲಲಿತೆಯಲ್ಲಿ ಹೀಗೆ ಪ್ರಾರ್ಥನೆಯನ್ನೊಪ್ಪಿಸಿದೆ-

"ಈಗೆನ್ನ ಮೈಕಟ್ಟಿ ಕೈತಟ್ಟಿ ಮನಮುಟ್ಟಿ
ಕಲಿಸುವ ಶಿಲ್ಪಿ ನೀನಾಗಬೇಕು
ನಿನ್ನಿಂದ ನನ್ನೊಳ್ಳಿತಾಗ ಸಾಕು".

'ಯಾವ ದೇವನಿವನು', 'ಗಾಳಿಗಿಡಲಿನಲ್ಲಿ', 'ಕಣ್ಣ ಕಾಣಿಕೆ', 'ಏಲಾಗೀತ' ಎಂಬಲ್ಲಿ ಸ್ವಾದ, ನಾದ, ಮೋದ, ಹುಂಕಾರ, ಶಬ್ದ, ಮನನ ಇತ್ಯಾದಿಗಳ ಆಳವನ್ನು ಅರಿಯುವ ಉಪಾಸನೆ ಇದೆ.

'ತುಂಬಿ' ಇದು ಪೂರ್ಣಾತ್‌ಪೂರ್ಣ ಎಂಬುದರ ಅರ್ಥ. ಆದರೆ ಈ ಅರ್ಥವನ್ನು ಅನುಭವಿಸುವುದು ಹೇಗೆ? ಇದರ ಅನುಭಾವದ ಮಟ್ಟವನ್ನು ಅರಿಯುವುದು ಹೇಗೆ? ಎಂಬುದರ ಸಾಧನೆ ಇಲ್ಲಿದೆ. ಒಂದು ದೇಹ, ಒಂದು ಗಿಡ, ಒಂದು ಕ್ರಿಮಿ ಇವುಗಳಲ್ಲಿ ತುಂಬಿ ಇರುವ ವಸ್ತು ಯಾವುದು ಎಂಬ ಚಿಂತನೆಯಲ್ಲಿ ತೊಡಗಿದ ಕವಿಗೆ, ನರಗಳಲ್ಲಿ, ನೇತ್ರದಲ್ಲಿ, ಕರ್ಣದಲ್ಲಿ, ಅಂಗಾಂಗದಲ್ಲಿ ಏನೋ ತುಂಬಿ ಸಂಚರಿಸಿದ ಅನುಭವ ಬರುತ್ತದೆ. ಅನಂತರದಲ್ಲಿ ಸರಸ್ವತಿಯ ವೀಣಾನಾದ ಕೇಳಿಸಿದ ಅನುಭಾವ ಮೂಡಿ ಗುರುಗಳಾದ ಅರವಿಂದ, ತಾಯಿಶಕ್ತಿಯ ಸ್ಮರಣೆಯಲ್ಲಿ ಕವನ ಮುಕ್ತಾಯಗೊಳ್ಳುತ್ತದೆ. ಭಾವೋದ್ದೀಪನ, ಭಾವವಿಹಾರ, ಭಾವಶಾಂತಿಯ ಏರಿಳಿತದ ವಿಲಾಸವನ್ನು ಈ ಕವನದಲ್ಲಿ ಕಾಣಬಹುದು.

'ಅರಳು-ಮರಳು' ಸಂಗ್ರಹದಲ್ಲಿ ಕವಿ ಅಂಬಿಕಾತನಯದತ್ತರ ಆಧ್ಯಾತ್ಮಿಕ ಒಲವಿನ ಎಳೆಯನ್ನು ಕಾಣುವವರು, ಅವರ 'ಗರಿ'ಯಿಂದ ಪ್ರತಿಯೊಂದು ಸಂಕಲನದಲ್ಲಿ ಆ ಎಳೆಯನ್ನು ಹುಡುಕಾಡಿದರೆ ಸಿಕ್ಕೇ ಸಿಗುತ್ತದೆ ಎಂದು ಹೇಳಬಹುದು. ಕವಿ ಅಂಬಿಕಾತನಯದತ್ತರು 'ಗರಿ'ಯಿಂದ 'ಇದು ನಭೋವಾಣಿ' ವರೆಗೂ ದೈವೋಪಾಸನೆಯಲ್ಲಿಯೆ ತೊಡಗಿದ್ದಾರೆ. ದೈವೋಪಾಸನೆಯೇ ಬೇಂದ್ರೆಯವರ ಪೌರುಷ. ತಂದೆ, ತಾಯಿ, ಮನೆಗೂಡು (ಕುಲದೈವತ), ಮಗು, ಸಹಜೀವನದ ಸಭ್ಯತೆ, ಅತಿಥಿಗೆ ಸ್ವಾಗತ, ದೈವದ ಉದ್ಭವ-ಇದು ಬೇಂದ್ರೆಯವರ ಪ್ರಜ್ಞೆಯ ಸಪ್ತಭೂಮಿಕೆ ಎಂದು ನಾನು ನಂಬಿದ್ದೇನೆ. ಇದರ ಭೌಮತ್ವವನ್ನು ಅವರು ಭಾವರಸಮಾಡಿ ಹಾಡಿಕೊಳ್ಳುತ್ತಿದ್ದರು, ಸಮರಸರಾಗುತ್ತಿದ್ದರು.

ಡಾ|| ವಾಮನ ಬೇಂದ್ರೆ
ಸಹ ನಿರ್ದೇಶಕರು
ವರಕವಿ ಡಾ|| ದ. ರಾ. ಬೇಂದ್ರೆ
ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡಮಿ.

"ಬೇಂದ್ರೆ ಕುಟೀರ",
ಹುಬ್ಬಳ್ಳಿ - ೩೦
೧-೭-೧೯೮೯

ಕಾರ್ಯಸ್ಥಳ : "ಬೇಂದ್ರೆ ಕುಟೀರ", ವಿಶ್ವಶ್ರಮ ಚೇತನ, ಗೋಕುಲ ರಸ್ತೆ ಹುಬ್ಬಳ್ಳಿ-೫೮೦ ೦೩೦. ದೂರವಾಣಿ : ೨೩೩೦೪೬೬

ಗಂಗಾವತರಣ : ''ಸಂದೇಶವಾಹಕ ಗೀತಗುಚ್ಛ''

ಅಂಬಿಕಾತನಯದತ್ತರ ''ಗಂಗಾವತರಣ''ವನ್ನು ''ಸಂದೇಶವಾಹಕ ಗೀತಗುಚ್ಛ'' ಎಂದು ಬಣ್ಣಿಸುವುದು ಸೂಕ್ತವೆಂದು ತೋರುತ್ತದೆ - ಈ ಕವನ ಸಂಕಲನವು ಒಂದು ''ಸಪ್ತಕ''ವಾಗಿದ್ದು, ಸಪ್ತವರ್ಣಗಳ-ಸಪ್ತಸ್ವರಗಳ ಸಂಗಮವಾಗಿ ರೂಪತಾಳಿದೆ. ವರಕವಿ ದ. ರಾ. ಬೇಂದ್ರೆಯವರು ಈ ಸಂಕಲನಕ್ಕೆ ''ಗಂಗಾವತರಣ'' ಎಂಬ ನಾಮವಿತ್ತಿರುವುದು ಅನ್ವರ್ಥವಾಗಿದೆ ಎಂದೇ ಹೇಳಬೇಕು. ಆಗಸದ ಕಾವ್ಯಗಂಗೆಯನ್ನು ಅಂಬಿಕಾತನಯದತ್ತ ಭಗೀರಥನಾಗಿ ಭೂಮಿಗೆ ''ಇಳಿದು'' ಬರುವಂತೆ ಮಾಡಿ, ಈ ''ಗಂಗಾವತರಣ''ದಿಂದ ''ಸತ್ತ ಜನರನ್ನು ಎತ್ತು''ವಂತೆ ಮಾಡಿದ್ದಾರೆಂದರೆ, ಅದರಲ್ಲಿ ಯಾವ ಅತಿಶಯೋಕ್ತಿಯಿದೆ? ''ಅವತಾರವೆಂದೇ ಎಂದಾರೆ ತಾಯಿ, ಈ ಅಧಃಪಾತವನ್ನೇ?'' ಎಂಬ ಪ್ರಶ್ನೆಗೆ ''ಗಂಗಾವತರಣ''ದಲ್ಲಿಯ ಗೀತ-ಗಂಗೆಯ ವಿಚಾರ-ಪ್ರಹಾರ ಉತ್ತರ ನೀಡುತ್ತದೆ; ಅದು ''ಅಂಬಿಕಾತನಯನತ್ತ'' ಇಳಿದು ಬಂದಂತೆ, ''ಕಣ್ಣ ಕಣ ತೊಳಿಸಿ, ಉಸಿರ ಎಳೆ ಎಳಸಿ, ನುಡಿಯ ಸಸಿ ಮೊಳಸಿ, ಎದೆಯ ನೆಲದಲ್ಲಿ ನೆಲಸಲು, ಜೀವ ಜಲದಲ್ಲಿ ಚಲಿಸಲು, ಮೂಲ ಹೊಲದಲ್ಲಿ ನೆಲಿಸಲು, ''ಹಿಗ್ಗಿ''ನಿಂದ ಹರಿಯುತ್ತಾಳೆ. ''ಗಂಗಾವತರಣ'' ಕವನದ ಮೂಲ ಸೆಲೆ, ''ಗಂಗಾವತರಣ'' ಕವನ ಸಂಕಲನದ ಉದ್ದ-ಅಗಲ, ಆಳ-ಎತ್ತರಗಳನ್ನು ತಣಿಸಿ, ಅರಳಿದೆ ಎಂದು ಹೇಳಬಹುದಾಗಿದೆ. ಈ ಕವನ ಸಂಕಲನದ ಅಂತರ್ಯವನ್ನು ಅರಿಯಲು, ಇದನ್ನು ರಚಿಸಿದ ಮಹಾಕವಿಯ ಮೂಲವನ್ನು ಅರಿಯುವುದು ಅತ್ಯಂತ ಅವಶ್ಯ. ಇದನ್ನು 'ನಾನು' ಹಾಗೂ 'ಅಂಬಿಕಾತನಯದತ್ತ' ಎಂಬ ಕವನಗಳ ದರ್ಶದಿಂದ ಪಡೆದುಕೊಳ್ಳಬೇಕು. ವರಕವಿ 'ಅಂಬಿಕಾತನಯದತ್ತ'ನು ಯಾರೆಂದು ಈ ಕವನದಲ್ಲಿ ಬಿಂಬಿಸಲಾಗಿದೆ.

''ಈ ಐದು ಐದೆಯರೆ ಪಂಚಪ್ರಾಣಗಳಾಗಿ
ಈ ಜೀವ ದೇಹನಿಹನು''

- ಕವನ : 'ನಾನು'

ಎಂದು 'ಅಂಬಿಕಾತನಯದತ್ತ'ನು ತನ್ನನ್ನು ಬಣ್ಣಿಸಿಕೊಳ್ಳುತ್ತಾನೆ. ''ಈ ಐದು ಐದೆಯರು'' ಯಾರು? ವಿಶ್ವಮಾತೆ, ಭೂಮಿತಾಯಿ, ಭರತಮಾತೆ, ಕನ್ನಡದ ತಾಯಿ ಹಾಗೂ ದತ್ತಾತ್ರೇಯನ ತಾಯಿ ಅಂಬಿಕೆ. ಈ ಐದೆಯರಿಂದ ಈ 'ಜೀವ ದೇಹ' ಏನೇನನ್ನು ಪಡೆದಿದ್ದಾನೆ ಎಂಬುದು ಮಹತ್ತ್ವಪೂರ್ಣ. ವಿಶ್ವಮಾತೆಯ ಗರ್ಭಕಮಲಜಾತದ ಪರಾಗದ ಪರಮಾಣವನ್ನು, ಭೂಮಿತಾಯಿಯ ಮೈಯ ಹಿಡಿಮಣ್ಣನ್ನು, ಭರತಮಾತೆಯ ಕೋಟಿಕಾರ್ತಿಕೋತ್ಸವದಲ್ಲಿ ಮಿನುಗುವ ಜ್ಯೋತಿಯನ್ನು, ಕನ್ನಡ ತಾಯಿಯ ತಾವರೆಯ ಪರಿಮಳವುಂಡ ಗಾಳಿಯನ್ನು ಹಾಗೂ ತನ್ನ ತಾಯಿಯ ಹಾಲು ನೆತ್ತರವನ್ನು ಕುಡಿದು, ಈ ಪಂಚ ಪ್ರಾಣಗಳನ್ನು ಸಂಗಮಿಸಿಕೊಂಡ ಜೀವ-ದೇಹನು, ''ಜೀವಂತ ಮಮತೆ''ಯಾಗಿ ಜನ್ಮವನ್ನು ತಾಳಿದ್ದಾನೆ. ಇವನೇ ''ಅಂಬಿಕಾತನಯದತ್ತನು''. ಈ ವರಕವಿ ಅಂಬಿಕಾತನಯನ ಹುಟ್ಟಿನ ಗುಟ್ಟೇನು? ಜನುಮದ ಗುರಿಯೇನು?

''ವಿಶ್ವದೊಳನುಡಿಯಾಗಿ ಕನ್ನಡಿಸುತಿಹ
ಅಂಬಿಕಾತನಯನಿವನು''

ಅಂಬಿಕಾತನಯನು ವಿಶ್ವದ ಒಳನುಡಿಯನ್ನು ಕನ್ನಡಿಸಲು (ಕನ್ನಡದಲ್ಲಿ ಬಿಂಬಿಸಲು) ತನ್ನೆಡೆಗೆ ''ಕಾವ್ಯಗಂಗೆ''ಯನ್ನು ''ಅಂಬಿಕಾತನಯನತ್ತ ಬಾ'' ಎಂದು ಕರೆತಂದಿದ್ದಾನೆ. ಇದನ್ನು ಬೇಂದ್ರೆಯವರ ಭಗೀರಥ ಕಾರ್ಯಸಾಧನೆ ಎಂದಲ್ಲದೆ ಮತ್ತೇನು ಹೇಳಬೇಕು?

ಇನ್ನು 'ಅಂಬಿಕಾತಯದತ್ತ' ಕವನದ ಅಂತರ್‌ದರ್ಶನವನ್ನು ಪಡೆಯೋಣ.

''ತಾಯಿ ಮಾಯಿ ಅಂಬಿಕೆಯೇ ನಿನ್ನ ತನಯ ದತ್ತನು
ನೀನು ಇತ್ತುದಿತ್ತನು ॥
ನಿನ್ನ ಜನುಮದೊಂದು ಪಾಡು ಹಾಡು ಆಗಿ ಮೂಡಿತು!
ನನ್ನ ಕೊರಳು ಹಾಡಿತು ॥''

'ಅಂಬಿಕಾತನಯ'ನು ತನ್ನ ತಾಯಿ ಅಂಬಿಕೆ, ತನಗೆ ಇತ್ತುದನ್ನೇ ತಾನು ಜಗಕೆ ಇತ್ತಿದ್ದಾನೆ ಎಂದು ಹೇಳುವುದರೊಡನೆ, ಆ ತಾಯಿಯ ಜನುಮದ ಪಾಡೇ ಹಾಡಾಗಿ ಮೂಡಿದ್ದು, ಅದನ್ನೆ, ತನ್ನ ಕೊರಳು ಹಾಡಿತು ಎಂದು ಬಣ್ಣಿಸಿರುವುದು ಬೇಂದ್ರೆಕಾವ್ಯದ ಮೂಲ ಸೆಲೆಯ ಅಂತರ್‌ದರ್ಶನವನ್ನು ನೀಡುತ್ತದೆ. ಅಂತೆಯೇ

''ನಿನ್ನ ಉದರದೊಂದ ಹೂವ ಸರಸ್ವತಿಗೆ ಸಲಿಸಿದೆ!
ಚುಕ್ಕಿಯಾಗಿ ನೆಲೆಸಿದೆ ॥''

''ಸಾವಿರದ ಮನೆಗಳಲ್ಲಿ ನನಗೆ ಮನೆಯ ಮಾಡಿದೆ!
ತಾಯಿ ಆಟ ಹೂಡಿದೆ ॥
ನಿನ್ನ ಹೆಸರಿನಲ್ಲಿ ನಾನು ಬರೆವುದೇನು ಸೋಜಿಗ!
ತಿಳಿಯಲಾರದೀ ಜಗ ॥''

ಎನ್ನುತ್ತಾರೆ ಬೇಂದ್ರೆ. ವರಕವಿ ಅಂಬಿಕಾತನಯದತ್ತ ತಾಯಿ ಅಂಬಿಕೆಯ ಉದರದ ಹೂವು. ಈ ಹೂವು ಆಕೆಯ ಉದರದಿಂದ ಹುಟ್ಟನೆ, ಅದು ಎಂದೂ ಉದರದ ಹೂವು; ಬೀಳದ-ಅಮರ ಹೂವು. ಇಂಥ ಹೂವನ್ನು ಸರಸ್ವತಿಗೆ ಅರ್ಪಿಸಿದ ಅಂಬಿಕೆ, ಆಗಸದಲ್ಲಿ ಚುಕ್ಕಿಯಾಗಿ ನೆಲೆಸಿದ್ದಾಳೆ. ಸಾವಿರದ, ಸಾವಿರ ಸಾವಿರ ಸಾವೇ ಇರದ ಮನೆಗಳಲ್ಲಿ, ತನ್ನ ತನಯನಿಗೆ ಮನೆಯನ್ನು ಮಾಡಿಕೊಟ್ಟು, ತಾಯಿ ಆಟವನ್ನು ಹೂಡಿದ್ದಾಳೆ. ಅಂತೆಯೇ ಆ 'ಅಂಬಿಕೆ'ಯ ಹೆಸರಿನಲ್ಲೇ ಈ 'ತನಯ'ನು ಬರೆಯುತ್ತಿದ್ದಾನೆ ಎನ್ನುವ, ಸೋಜಿಗವನ್ನು-ವಿಸ್ಮಯವನ್ನು ಈ ಜಗವು ಹೇಗೆ ತಿಳಿದೀತು? ಎಂದು ದತ್ತಾತ್ರೇಯ ಕೇಳುತ್ತಾನೆ.

ಇಂಥ 'ಅಂಬಿಕಾತನಯದತ್ತನ' ಕಾವ್ಯಗಂಗೆಯೇ ''ಗಂಗಾವತರಣ''.

ಈ ಸನ್ನಿವೇಶದಲ್ಲಿ ಈ ಸಂಕಲನದ ''ಗಂಗಾಷ್ಟಕ''ವನ್ನು ಕೂಡ ಅರಿಯುವ ಅವಶ್ಯಕತೆಯಿದೆ. ಏಕೆಂದರೆ-

"ಈ ಗಂಗಾಷ್ಟಕವು ಆ ಮಾತೃಪದದಲ್ಲಿ ಆಗಿರಲಿ ಜ್ಞಾನಪಿಂಡ"

ಎಂದು ಹೇಳಲಾಗಿದೆ, ಎಂಥಃ ತರ್ಪಣ ಈ ಅರ್ಪಣ! ಎಲ್ಲರೂ ಮಾತಾಪಿತೃಗಳಿಗೆ ಪಿಂಡಪ್ರದಾನ ಮಾಡಲು ಗಂಗಾನದಿಗೆ ಹೋಗುತ್ತಾರೆ. ಆದರೆ ಈ ಕವಿ-ಭಗೀರಥನು, ಆ ಗಂಗೆಯನ್ನು ತನ್ನೆಡೆಗೆ ಆಹ್ವಾನಿಸಿಕೊಂಡು, 'ಅಷ್ಟಕ'ವನ್ನು ರಚಿಸಿ, ಈ 'ಕಾವ್ಯಪಿಂಡ'ವನ್ನು ತಾಯಿ ಅಂಬಿಕೆಗೆ "ಜ್ಞಾನಪಿಂಡ"ವಾಗಿ ಅರ್ಪಿಸುತ್ತಾನೆ.

ಈ ಕವನ ಪ್ರಾರಂಭವಾಗುವ ವೈಖರಿ ಗಮನಾರ್ಹ.

"ನಿನ್ನ ಮಮತೆಯ ಬಯಕೆಯಾವು ಹಾಡಿನ ಹಾಲನನವರತ ಕರೆಯುತಿರಲು
ನಿನ್ನ ನೆನೆವುದೆ ತಪವು, ಉಳಿದ ಶಾಸ್ತ್ರದ ಜಪವು ಕೊರಳೊಳಗೆ ಬಿದ್ದ ಉರಲು."

ಈ ಸಾಲುಗಳು ಅತ್ಯಂತ ಮಾರ್ಮಿಕವಾಗಿವೆ. ಗಂಗೆಯ ಮಮತೆಯ ಬಯಕೆಯ ಆವು (ಗೋವು) ಹಾಡಿನ ಹಾಲನ್ನು ಅನವರತ ಕರೆಯುತ್ತಿರಲು, ಆ ಗಂಗೆಯ ನೆನಪೇ ತಪ. ಇನ್ನೆಲ್ಲ ಉಳಿದ ಶಾಸ್ತ್ರಗಳ ಜಪ, ಅದು ಕೊರಳೊಳಗೆ ಬಿದ್ದ ಉರಲು (ನೇಣು). ಅಂಬಿಕಾತನಯದತ್ತನ ಈ 'ಗಂಗಾಷ್ಟಕ'ವು ಗಂಗೆಯ ತಪ. ಈ ತಪಸ್ಸೇ ಈ ಕಾವ್ಯಗಂಗೆಯಾಗಿ ಹರಿದಿದೆ. ಅಂತೆಯೇ

"ಹತ್ತು ಅವತಾರಕ್ಕೂ ಹಿರಿದೆಂಬೆ ಹಡೆದವ್ವ ನಿನ್ನ ಗಂಗಾವತಾರ"

ಎನ್ನುತ್ತಾರೆ ಬೇಂದ್ರೆ. ಇದರ ಮುಂದಿನ ಸಾಲುಗಳು ಅತ್ಯಂತ ಅರ್ಥಗರ್ಭಿತವಾಗಿವೆ.

"ಕೂಸ ಅಳುವನು ಕೇಳಿ, ತೀರಿ ಹೋಗಿಹ ತಾಯಿ ಬಂದಳೆಂಬಂತೆ ಭರದಿ
ಸ್ವರ್ಗವಾಸವ ತೊರೆದು ಬಂದೆ ನೀ ಭವಬಂಧನಿರ್ಭೀತಳೆಂಬ ತೆರದಿ."

ಎಂಥ ಅಗಾಧ ಮಮತೆ ಆ ತಾಯಿಯದು! 'ತೀರಿ ಹೋಗಿಹ ತಾಯಿ', ತನ್ನ ಕೂಸಿನ ಅಳುವನ್ನು ಕೇಳಿ, ತನ್ನ ಸ್ವರ್ಗವಾಸವನ್ನು ಕೂಡ ತೊರೆದು, 'ಭರದಿಂದ ಭವಬಂಧನಿರ್ಭೀತ'ಳಾಗಿ ಬಂದಂತೆ ಬಂದಿದ್ದಾಳೆ. ತನ್ನ ಕರುಳಿನ ಕುಡಿಯ ಕೂಗು ಆ ತಾಯಿಯನ್ನು ಸ್ವರ್ಗದಿಂದ ಧರೆಗೆ ಇಳಿದು ಬರುವಂತೆ ಮಾಡಿತು ಎಂಬಂತೆ ಗಂಗೆಯು ತನ್ನ ಅನಾಥ ಕೂಸುಗಳ ಕೂಗು ಕೇಳಿ, ಆಗಸದಿಂದ ಭೂತಲಕ್ಕೆ ಧುಂಧುಮಿಕಿ, ಭರದಿಂದ ಬಂದಿದ್ದಾಳೆ ಎಂಬ ಉಪಮೆ ಎಷ್ಟೊಂದು ನೈಜವಾಗಿದೆ! ಈ ಕವನದ ಇನ್ನು ಕೆಲವು ಚರಣಗಳನ್ನು ಅವುಗಳ ವೈಚಾರಿಕ ವೈಶಿಷ್ಟ್ಯ ಹಾಗೂ ಪದಬಂಧದ ಸೊಬಗಿಗಾಗಿ ಈ ಕೆಳಗೆ ಉದ್ಧರಿಸಲಾಗಿದೆ-

"ನೆಲಮುಗಿಲುಗಳು ಇರುವವರೆಗೆ ಗಂಗೆಯು ಉಂಟು, ಉಂಟವಳ ಧವಲಮೂರ್ತಿ.
ಶ್ರೀ ಭಗೀರಥ ಸಾರ್ವಭೌಮ ನಿನ್ನದು ಒಂದೆ ನಿಜವಾದ ಅಮರ ಕೀರ್ತಿ."

"ರಾಜರಮಣಿಯರೆದೆಗೆ ಬೆಳೆಗಿನಲ್ಲುಳಿದಂಥ ಕಸ್ತೂರಿ ಬಿದ್ದು ಕೆಳಕೆ
ಮೈತೊಳೆದ ನೀರಿನೊಡ ಗಂಗೆಯಲಿ ಕೂಡಿದರೆ ಮುಕ್ತಿ ಕಸ್ತೂರಿಮೃಗಕೆ'
-ಹೀಗೆ ಹಾಡಿದ ಕವಿಯ ನಂಬಿ, ನಿನ್ನಲ್ಲಿ ಮಿಂದೆ; ನಾನವನ ಬಟ್ಟೆಯವನು.
ನನ್ನ ತಾಯಿಗೆ ಮುಕ್ತಿ ಮಿಂದಂದೆಯಾಗಿತ್ತು; ನಾನವಳ ಹೊಟ್ಟೆಯವನು."

'ನಾನವನ ಬಟ್ಟೆಯವನು' ಹಾಗೂ 'ನಾನವಳ ಹೊಟ್ಟೆಯವನು' ಈ ಪದಬಂಧದ ದೇಶೀ ಸೊಬಗು ಅಸಾಮಾನ್ಯವಾದುದು. 'ಬಟ್ಟೆವನು' ಎಂದರೆ ಆ ಮಾರ್ಗ ಅಥವಾ ಪಂಥದವನು

ಎಂಬುದನ್ನು ಬಳಸಿ, 'ಹೊಟ್ಟೆಯವನು' ಅಂದರೆ, ಅವಳ ಹೊಟ್ಟೆಯಲ್ಲಿ ಹುಟ್ಟಿದವನು ಎಂದು ಹೇಳುವ ರೀತಿಯ ಹೊಸತನ ಕನ್ನಡ ಕಾವ್ಯಕ್ಕೆ ಹೊಸ ಬೆಡಗುತಂದಿದೆ.

ಕವಿ ನಿವಾಸ, ೧೩, ಶ್ರೀಮಾತಾ, ಸಾಧನಕೇರಿ, ಧಾರವಾಡ. ಈ 'ಸಾಧನಕೇರಿ'ಯ ವರ್ಣನೆಯು ''ಬಾರೊ ಸಾಧನಕೇರಿಗೆ' ಕವನದಲ್ಲಿ ಅತ್ಯಂತ ರಮ್ಯವಾಗಿ, ಅರ್ಥಗರ್ಭಿತವಾಗಿ ಹಾಗೂ ಔಚಿತ್ಯಪೂರ್ಣವಾಗಿ ಮೂಡಿ ಬಂದಿದೆ.

''ಬಾರೊ ಸಾಧನಕೇರಿಗೆ
ಮರಳಿ ನಿನ್ನೀ ಊರಿಗೆ''

ಎಂಬ ಪಲ್ಲವಿಯಿಂದ ಪ್ರಾರಂಭವಾಗುವ ಈ ಕವನದ ಸೊಬಗು ಈ ಕೆಳಗಿನ ನುಡಿಯಲ್ಲಿ ಅಡಕವಾಗಿದೆ:

''ನಂದನದ ತುಣುಕೊಂದು ಬಿದ್ದಿದೆ
ನೋಟ ಸೇರದು ಯಾರಿಗೆ ?''

ಇನ್ನು ಈ ಸ್ಥಳ ಮಹಾತ್ಮ್ಯವನ್ನು ಕೊನೆಯ ನುಡಿಯಲ್ಲಿ ಕಾಣಬಹುದು-

''ಮರವು ಮುಗಿಲಿಗೆ ನೀಡಿದೆ.
ಗಿಡದ ಹೊದರೊಳು ಹಾಡಿದೆ
ಗಾಳಿ ಎಲ್ಲೊ ಆಡಿದೆ
ದುಗುಡ ಇಲ್ಲಿಂದೋಡಿದೆ
ಹೇಳು ಗೆಳೆಯಾ ಬೇರೆ ಎಲ್ಲೀ
ತರದ ನೋಟವ ನೋಡಿದೆ?''

ಕಣ್ಣು ಕಟ್ಟುವಂತೆ, ಮನ ತಟ್ಟುವಂತೆ, ಹಿಗ್ಗು ಅರಳುವಂತೆ ಇದೆ ಈ ಶಬ್ದಚಿತ್ರ. ಸಾಧನಕೇರಿಯಲ್ಲಿಯ ಮರವು ಮುಗಿಲನ್ನು ಚುಂಬಿಸುವಂತೆ ತನ್ನ ಶಿಖರವನ್ನು ಚಾಚಿದೆ, ಗಿಡದ ಪೊದರೊಳಗಿಂದ ಹಾಡು ಹೊರಹೊಮ್ಮುತ್ತಿದೆ, ಗಾಳಿ ಈ ಹಾಡಿಗೆ ಕುಣಿದಾಡುತ್ತಿದೆ; ಈ ''ಯಕ್ಷಿ ಮಾಡಿದ ಮಾಟ'', ದುಃಖವನ್ನು ಗಾವುದ ಗಾವುದ ಗಾವುದ ದೂರಕ್ಕೆ ಓಡಿಸದೆ ಏನು ಮಾಡೀತು ? ಇಂಥ ಮನೋಹರ ನೋಟ ಬೇರೆಲ್ಲಿ ನೋಡಲು ಕಾಣಬೇಕು ? ಅಂಬಿಕಾತನಯ ಮಾಂತ್ರಿಕನ ಮನೋಜ್ಞ ಸೃಷ್ಟಿ ಈ ದೃಷ್ಟಿ.

ಇನ್ನು ಈ ಸಂಕಲನದ ನಾಲ್ಕನೆಯ ಭಾಗದಲ್ಲಿ ''ಗಣ್ಯವ್ಯಕ್ತಿ ಗೀತಗಳು'' ಸೇರ್ಪಡೆಯಾಗಿವೆ. ಈ ಗೀತೆಗಳಲ್ಲಿಯ ವ್ಯಕ್ತಿಚಿತ್ರಣ ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ. ಇಲ್ಲಿಯ ಕೆಲ ಕವನಗಳ ವಿಶ್ಲೇಷಣೆ, ಈ ಕೆಳಗಿನಂತಿದೆ.

ಕವಿಯಿತ್ರಿ ಜಾನಕಮ್ಮ ತನ್ನ ಕವನ ಸಂಗ್ರಹದಲ್ಲಿ ಬೇಂದ್ರೆಯವರನ್ನು ಕುರಿತು ಒಂದು ಕವನವನ್ನು ಬರೆದಿದ್ದರು. ವಿದೇಹಿಯಾಗಿದ್ದ ಜಾನಕಮ್ಮನ ಕವನಕ್ಕೆ ಬೇಂದ್ರೆಯವರು ಸ್ಪಂಧಿಸಿದ್ದು ಹೀಗೆ :

"ತಂಗಿ ಜಾನಕಿ ನಿನ್ನ
ವೈದೇಹದೊಲವಿನಲಿ
ಓಲೆ ಬಂದಿತು ಒಂದು, ಇತ್ತ ತೇಲಿ
ಯಾರಿಗಾರೋ ಎನುವ
ನಾಸ್ತಿಕತೆಯನು ನೂಕಿ
ದಾಟಿ ದಿಕ್ಕಾಲಗಳ ಸುತ್ತು ಬೇಲಿ."

ಈ ರೀತಿಯಾಗಿ ಪ್ರಾರಂಭವಾದ ಕವನವು ವಿದೇಹಿಯಾದ ಜಾನಕಮ್ಮನಿಗೆ ಬೇಂದ್ರೆಯವರು ಹರಿಸಿದ್ದು ಅತ್ಯಂತ ಮಾರ್ಮಿಕವಾಗಿದೆ.

"ವಿಷಯ ವಿಷ ವಿಷಮವನು
ತಳ್ಳಿ ಪದತಲದಾಚೆ
ಸಪ್ತಸ್ವರ್ಗವ ಸೀಳಿ ಮೇಲೆ ಹಾರು
ಅಲ್ಲಿರುವ ನಲಿವೊಲವು
ಇಲ್ಲಿರುವ ಬಲ ಚೆಲುವು
ಮಿಕ್ಕಿ ಸೂಸುವ ಹಾಗೆ ಜಗಕೆ ಸಾರು."

ವಿಷ ವಿಚಾರಗಳನ್ನು ತಳ್ಳಿಹಾಕಿ; ಸಪ್ತಸ್ವರಗಳನ್ನು ಸೀಳಿ, ಅದರ ಮೇಲೆ ಹಾರಿ, ಅಲ್ಲಿಯ ನಲಿವುಒಲವುಗಳನ್ನು ಹಾಗೂ ಭೂಲೋಕದ ಶಕ್ತಿ-ಸೌಂದರ್ಯಗಳನ್ನು ಮಿಕ್ಕಿದ ವಿಚಾರಗಳನ್ನು ಜಗಕೆ ಸಾರು ಎಂದು ಬೇಂದ್ರೆ ಹಾರೈಸುತ್ತಾರೆ.

ಈ ಕವನದಲ್ಲಿ 'ಕವಿ'ಯ ವ್ಯಾಖ್ಯೆ ಬಹಳ ಅರ್ಥಪೂರ್ಣವಾಗಿ ಚಿತ್ರಿಸಲಾಗಿದೆ-

"ಕವಿಯು ಮಾನಸಪುತ್ರ
ಅವನು ಆಗಸದೇಹಿ
ಮಾತಿನಲೆ ಮೂಡುವನು ಭಾವಜೀವಿ.
ಮೈಯಾಚೆ ಉಸಿರಾಚೆ
ಬಗೆಯ ಬಣ್ಣಗಳಾಚೆ
ಅವನ ಹೂವರಳುವದು ಭಾವದೇವಿ."

ಎಂದು ವರ್ಣಿಸಿ, ಈ ಭಾವಜೀವಿ ಕವಿಯು ವೈದೇಹಿ ಕವಿಯಿತ್ರಿ 'ಮಿಂಚಿನಾಚೆಯ ಬೆಳಕ ಬಯಸಿ ಬೆಳೆದು'ದನ್ನು ಮೆಚ್ಚಿ, ತನ್ನ ಹರಕೆಯನ್ನು ಬಿಂಬಿಸುತ್ತಾನೆ. ಅಂತೆಯೇ ಆಕೆಯ ಪರಿಪೂರ್ಣತೆಯನ್ನು ಮೆಚ್ಚಿ-

"ಪೂರ್ಣವಾ ದೃಷ್ಟಿಯಲಿ
ತೆರೆದೊಂದು ಸೃಷ್ಟಿಯಲಿ
ನಿನ್ನನಂದನಕೇನು ಮುಚ್ಚುಮರೆಯೇ ?"

ಎಂದು ನುಡಿದಿದ್ದಾರೆ.

'ಸಂಭಾವನೆ' ಎಂಬ ಶೀರ್ಷಿಕೆಯ ಅಷ್ಟಪಟ್ಪದಿಯು ಬೇಂದ್ರೆಯವರು ಕನ್ನಡದ ಕಣ್ವರೆಂದೇ

ಖ್ಯಾತಿ ಪಡೆದ ಬಿ. ಎಂ. ಶ್ರೀ.ಯವರನ್ನು ಕುರಿತು ಬರೆದ ಕವನವಾಗಿದೆ. ಇದರ ಮೊಲನೆಯ ಖಂಡವು ಶ್ರೀಕಂಠಯ್ಯನವರ ಸಾಧನೆಯ ಶಿಖರವನ್ನು ಅತ್ಯಂತ ರಸವತ್ತಾಗಿ ಚಿತ್ರಿಸುತ್ತದೆ-

"ಕನ್ನಡದ ಶ್ರೀಕಂಠದಿಂದ ಸಾರಿದ ವಾಣಿ
ಅಂದು ವೀಣಾಪಾಣಿಯಾಗಿ ಬಾಜಿಸಲಾಗಿ
ಆ ರಾಗವೇ ಜನದ ಅನುರಾಗವೆನೆ ಮಾಗಿ
ರಾರಾಜಿಸುವದಿಂದು ರಾಷ್ಟ್ರಹೃದಯದ ರಾಣಿ
ಆ ಪ್ರಗಾಥದ ವಾಣಿ ನಾಡನೌಕೆಯ ನೂಗಿ
ಧ್ರುವಪ್ರವಾಸಕೆ ದಿಕ್ಕುಗಾಣಿಸುವ ಚುಕ್ಕಾಣಿ-
ಯಾಗೆಯದು ಹೇಳುವೊಬ್ಬೊಬ್ಬ ಕನ್ನಡ ಮಾಣಿ
ಮೆರೆವನಗೊ, ನಾಡನಂಬುಗೆಯ ಅಂಬಿಗನಾಗಿ."

ಇನ್ನು ಎರಡನೆಯ ಖಂಡದಲ್ಲಿ "ವಿಷ ನುಂಗೆ ಶ್ರೀಕಂಠ, ಬೇರೆ ಭೂಷಣ ಬೇಕೆ?" ಎಂದು ಮುಕ್ತಾಯವಾಗುತ್ತದೆ. ಇದಕ್ಕಿಂತ ಮಿಗಿಲಾದ ಮೆಚ್ಚುಗೆ ಮತ್ತೇನು ಬೇಕು?

"ಪಂಪನಿಗೆ" ಎಂಬ ಶೀರ್ಷಿಕೆಯ ಈ ಸುನೀತವು ಆದಿಕವಿ ಪಂಪನ ಸಹಸ್ರ ವಾರ್ಷಿಕದ ಉತ್ಸವದ ಸಂಸ್ಮರಣೆಗೆಂದು ಬರೆದದ್ದು. ಈ ಕವನದ ಕೆಳಗಿನ ಸಾಲುಗಳು ಪಂಪನ ಹಿರಿಯ ಕಾರ್ಯ ಹಾಗೂ ಪಂಪನ ಅಮರತ್ವ ಇವುಗಳನ್ನು ಚಿತ್ರಿಸುತ್ತವೆ :

"ಕನ್ನಡದ ಸವಿನುಡಿಯ ಬಾನ ಬೆಳಗುವ ಸೂರ್ಯ
ಈಗಳೂ ನಡೆದಿಹುದು ಕವಿಯೆ ನಡೆಸಿದ ಕಾರ್ಯ"

ಎಂದು ನುಡಿದು

"ನಿನ್ನ ಪುಟವಹಸಾಜವಾದ ಪುಲಗಿರಿ ತಿರುಳು-
ಗನ್ನಡಕೆ ದೆಸೆದೆಸೆಯ ದೇಸಿಗನ್ನಡ ಬರುವ
ಒಸಗೆ ಬೀರಲಿ...................."

ಎಂದು ಆಶಿಸುತ್ತಾರೆ. ಅಂತೆಯೇ ಈ ಕವನವನ್ನು "ಕನ್ನಡವು ಕನ್ನಡವ ಕನ್ನಡಿಸುತಿರಬೇಕು" ಎಂದು ಮುಕ್ತಾಯಗೊಳಿಸುತ್ತಾರೆ.

ಈ ಭಾಗದ ಕೊನೆಯ ಕವನವು 'ಬುದ್ಧ' ಶೀರ್ಷಿಕೆಯನ್ನು ಹೊತ್ತ ಕವನ. ಬುದ್ಧನನ್ನು ಕುರಿತು ಇಷ್ಟೊಂದು ಅರ್ಥಗರ್ಭಿತವಾಗಿ ಹಾಗೂ ಸರಳ ನುಡಿಗಳಲ್ಲಿ ಚಿತ್ರಿಸಿದ ಕವನಗಳು ವಿರಳ. ಈ ಕವನದ ಪ್ರಾರಂಭವೇ ಅತ್ಯಂತ ನಾಟಕೀಯವಾಗಿದ್ದು, ಇಡೀ ಬುದ್ಧನ ವಿಶೇಷತೆಯನ್ನು, ವಿಶಿಷ್ಟತೆಯನ್ನು ಸೆರೆ ಹಿಡಿಯುವಂತಿದೆ :

"ಬುದ್ಧ, ಬುದ್ಧ-
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ;"

ಮಲಗಿದ್ದ ಇಡೀ ಜಗತ್ತನ್ನೆ ಎಚ್ಚರಿಸಲೆಂದೇ ಇವನು "ಜಗವೆಲ್ಲ ಮಲಗಿರು"ವಾಗ ಎದ್ದಿದ್ದನೆಂಬ ಸಂಕೇತ ಅತ್ಯಂತ ಪರಿಣಾಮಕಾರಿಯಾಗಿ ಇಲ್ಲಿ ಅಭಿವ್ಯಕ್ತಗೊಂಡಿದೆ.

"ಹೊರಟ ಹೊರಟೇ ಹೊರಟ, ಹೊರಟನೆತ್ತೋ
ಸಾಹಸಿಯ ಗೊತ್ತುಗುರಿ ಅವಗು ಗೊತ್ತೋ!"

ಬುದ್ಧನ ಚಲನವಲನಕ್ಕೆ ಚೇತನದ ಗತಿಯನ್ನು ಈ ಸಾಲುಗಳು ಒದಗಿಸುತ್ತವೆ. ಈ ಕವನದ ಮುಕ್ತಾಯವು ಹೊಸಯುಗದ ಆರಂಭದ ನಾಂದಿಯನ್ನು ಹಾಡುತ್ತದೆ. ಒಂದೆಡೆ ಬುದ್ಧನ ಚಿರಂತನತೆ, ಇನ್ನೊಂದೆಡೆ ಬುದ್ಧನ ನಂತರದ ಯುಗದ ಸೂಚನೆ, ಇವೆಲ್ಲವೂ ಕೊನೆಯ ಚರಣದಲ್ಲಿ ಸ್ಫಟಿಕೀಕೃತಗೊಂಡಿದೆ. ಆ ಚರಣ ಈ ರೀತಿಯಾಗಿದೆ-

"ಬುದ್ಧನೆಂಬುವ ಒಬ್ಬ ಎಂದೊ ಇದ್ದ
ಎನುವಂತೆ ಇಂದಿಗೂ ಇಲ್ಲೆ ಇಲ್ಲ
ಬುದ್ಧ ಹುಟ್ಟಿದ ಮೇಲೆ ಹಳೆ ಜಗವು ಸತ್ತು
ಇದ್ದು ಇಲ್ಲದ ಹಾಗೆ, ಹಾಗೆ ಇತ್ತು.
ಬುದ್ಧ ಸತ್ತನು ಎಂದು ಯಾರೆಂದರೂ
ಬುದ್ಧನ ಜಯಂತಿಗಿದೆ ಜಯವೆಂದಿಗೂ
ಬುದ್ಧನ ಸಮಾಧಿಯದು ಮಾನವನ ಹೃದಯ
ಅದುವೆ ಕಾಯುತ್ತಲಿದೆ ಕಲ್ಕಿ ಉದಯ."

ಬೇಂದ್ರೆಯವರು ಬುದ್ಧನ ಅವತಾರವನ್ನು ಬಹಳ ಮಾರ್ಮಿಕವಾಗಿ ಬಣ್ಣಿಸಿದ್ದಾರೆ. "ಬುದ್ಧ ಹುಟ್ಟಿದ ಮೇಲೆ ಹಳೆ ಜಗವು ಸತ್ತು, ಇದ್ದು ಇಲ್ಲದ ಹಾಗೆ, ಹಾಗೆ ಇತ್ತು". ಈ ನುಡಿಯಲ್ಲಿ ಅಡಕವಾದ ಅರ್ಥವೇ ಇಂದಿನ ಜಗತ್ತಿನ ಇರುವಿಕೆಯ ಸ್ಥಿತಿ. ಜಗತ್ತನ್ನೇ ಬದಲು ಮಾಡಲು ಹೊರಟ ಬುದ್ಧನ ಸಾಧನೆ ಅಪ್ರತಿಮ. ಬುದ್ಧ ಹುಟ್ಟಿದೊಡನೆ ಹಳೆಯ ಜಗವು ಸತ್ತಿತು. ಆದರೆ ಸತ್ತು ಅದು ಹಾಗೇ ಇತ್ತು. ಅದನ್ನು ಪರಿವರ್ತಿಸಲು ಕಲ್ಕಿಯ ಅವತಾರ ಬರಬೇಕಾಗಿದೆ. ಆ ಕಾಲಕ್ಕೆ ಮಾನವ ಹೃದಯ ಹದವಾಗಬೇಕು. ಬುದ್ಧನ ಸಮಾಧಿಯೇ ಮಾನವ ಹೃದಯ! ಆ ಹೃದಯವು ಕಲ್ಕಿ ಉದಯಕ್ಕಾಗಿ ಪರಿವರ್ತನೆಗೊಳ್ಳಬೇಕಾಗಿದೆ ಎಂಬ ಸಂದೇಶವನ್ನು ಇದು ಸಾರುತ್ತದೆ.

ಈ ವ್ಯಕ್ತಿ ಗೀತಗಳ ವಿಶೇಷತೆಯೆಂದರೆ, ಅವು ಮಾನವನ ಪರಿವರ್ತನೆಯ ದಿಶೆಯಲ್ಲಿ ಈ ವ್ಯಕ್ತಿಗಳು ತಮ್ಮ ಮಹತ್ಕೃತಿಗಳ ಮೂಲಕ ವ್ಯಕ್ತಿ-ಸಮಷ್ಟಿ-ವಿಶ್ವಗಳ ಪರಿವರ್ತನೆಗೆ ಹೇಗೆ ಕಾರಣೀಭೂತರಾದರು ಎಂಬ ಸಂದೇಶವಿದೆ.

ಐದನೆಯ ಭಾಗದಲ್ಲಿ "ದೇಶ-ಸಮಾಜ ಕವನಗಳು" ಸೇರ್ಪಡೆಯಾಗಿವೆ. ಇಲ್ಲಿಯ ಏಳು ಕವನಗಳು ಜನತೆಯನ್ನು "ಏಳು, ಏಳು, ಏಳು" ಎಂಬ ಎಚ್ಚರವನ್ನು ನೀಡುತ್ತಾ, ವಿಶ್ವದೃಷ್ಟಿಯನ್ನು ಬಿಂಬಿಸುತ್ತವೆ. ಇವುಗಳ ಅರ್ಥಗ್ರಹಿಕೆಯಿಂದ, ಪ್ರಜ್ಞೋದಯವಾಗಿ, ಪ್ರತಿಯೊಬ್ಬರೂ ಚೈತನ್ಯಯುತರಾದರೆ ಹೊಸ ವಿಶ್ವವನ್ನು ಸೃಷ್ಟಿಸಲು ಸಾಧ್ಯ ಎಂದು ಈ ಸಪ್ತ-ಕವನಗಳು ಸಾರುತ್ತವೆ. ಇವುಗಳ ವಿಶ್ಲೇಷಣೆ ಈ ಕೆಳಗಿನಂತಿದೆ.

ಈ ಭಾಗದಲ್ಲಿಯ ಮೊಲನೆಯ ಕವನ "ಒಂದೇ ಕರ್ನಾಟಕ". ಇದನ್ನು ರಚಿಸಿ ಇಂದಿಗೆ ಏಳು ದಶಕಗಳು ದಾಟಿದ್ದರೂ, ಇಂದಿಗೂ ಇಲ್ಲಿಯ ಸಂದೇಶ ಪ್ರಸ್ತುತ ಎಂಬುದು ಗಮನಾರ್ಹ. ಈ ಕವನದ ಪಲ್ಲವಿ ಈ ರೀತಿಯಿದೆ.

"ಒಂದೇ ಒಂದೇ ಒಂದೇ ಕರ್ನಾಟಕ ಒಂದೇ"

ಈ ಕವನವನ್ನು ಬೇಂದ್ರೆಯವರು ರಚಿಸಿದ್ದು ೧೯೩೮ರಲ್ಲಿ, ಎಪ್ಪತ್ತು ವರುಷಗಳ ಹಿಂದೆ. ಆಗ ಕರ್ನಾಟಕವು ಮುಂಬೈ, ಹೈದರಾಬಾದ, ಮದ್ರಾಸ, ಮೈಸೂರು, ಕೊಡುಗುಗಳಲ್ಲಿ ಹಂಚಿಹೋಗಿತ್ತು. ಕರ್ನಾಟಕ ಏಕೀಕರಣದ ಕೂಗು ಸ್ವಾತಂತ್ರಪೂರ್ವದಲ್ಲೇ ಎತ್ತಲಾಗಿತ್ತು ಎನ್ನುವುದು ಇಂದು ಇತಿಹಾಸ. ಆದರೆ ಸ್ವಾತಂತ್ರ್ಯ ಬಂದ ಒಂಭತ್ತು ವರುಷಗಳ ನಂತರದ ವರೆಗೆ ಈ ಕನಸು ನನಸಾಗಲಿಲ್ಲ. ೧೯೫೬ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾಗಿ ಕರ್ನಾಟಕದ ಏಕೀಕರಣದ ಕನಸು ನನಸಾದರೂ, ಈ ರಾಜ್ಯಕ್ಕೆ 'ಕರ್ನಾಟಕ' ಎಂಬ ನಾಮಕರಣ ಹೊಂದಲು ಮತ್ತೆ ಕಾಲ ಹಿಡಿಯಿತು. ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ವಿಭಜನೆಯ ವಿಕೃತ ಧ್ವನಿಗಳು ಕೇಳಿಸುತ್ತಿವೆ ಎಂಬ ಹಿನ್ನೆಲೆಯಲ್ಲಿ 'ಒಂದೇ ಕರ್ನಾಟಕ'ದಲ್ಲಿ ವರಕವಿಗಳು ನೀಡಿದ ಮಂತ್ರ ಇಂದಿಗೂ ಪ್ರಸ್ತುತವೇ ಎಂದು ಹೇಳಬೇಕಾಗಿದೆ. ಈ ಕವನದ ಕರಾರುವಕ್ಕಾದ ಸಂದೇಶವನ್ನು ನೋಡೋಣ :

"ಇಲ್ಲಿಯ ಜನ-ಮನ-ಭಾಷೆಯು ಕನ್ನಡವದು ಒಂದೇ
ಒಂದೇ ಜನವೂ ಒಂದೇ ಮನವೂ ಕನ್ನಡಿಗರು ಎಂದೇ
ಕುಲವೊಂದೇ ಸ್ಥಲವೊಂದೇ ನೀತಿಯ ನೆಲೆಯೊಂದೇ
ಹೀಗೆನ್ನದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ !
ಕನ್ನಡವೆಂದೂ ಒಪ್ಪದು ಕರ್ನಾಟಕ ನಿಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ"

ಈ ಧ್ವನಿ, ಮತ್ತೆ ರಾಜ್ಯಾದ್ಯಂತ ಪ್ರತಿಧ್ವನಿಸುವ, ಕನ್ನಡಿಗರ ಮನದಲ್ಲಿ ಮತ್ತೆ ಮೊಳಗುವ ಕಾಲ ಬಂದಿದೆ. ರಾಜ್ಯವಿಭಜನೆಯ ಮಾತನ್ನು ಆಡುವ "ಹೆರವರು" ಈ ಎಚ್ಚರಿಕೆಯನ್ನು ಸ್ವೀಕರಿಸಬೇಕು. "ಕರ್ನಾಟಕ ಒಂದೇ" ಎಂಬ ಸತ್ಯವು ನಿರಂತರವಾಗಲಿ.

ಈ ಕವನದಲ್ಲಿ ಅಂತರ್ಗತವಾಗಿರುವ ಅಮರ ಸಂದೇಶ ಇನ್ನೊಂದಿದೆ. ಅದೆಂದರೆ:

"ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ
ಜಗದೇಳಿಗೆಯಾಗುವದಿದೆ ಕರ್ನಾಟಕದಿಂದೆ"

ವರಕವಿ ಅಂಬಿಕಾತನಯದತ್ತರ ಭವಿಷ್ಯವಾಣಿ ಇದು. ಕರ್ನಾಟಕದಿಂದಲೇ ಜಗದೇಳಿಗೆಯಾಗುವದಿದೆ" ಎನ್ನುವುದನ್ನು ಕನ್ನಡಿಗರು ಸಾಧಿಸಿ ತೋರಿಸಬೇಕೆಂಬ ಸವಾಲನ್ನು ಸ್ವೀಕರಿಸಿ, ದೀಕ್ಷೆಯನ್ನು ತೊಡಬೇಕಾಗಿದೆ. ಅಂತೆಯೇ ಈ ಕವನದಲ್ಲಿ ಇನ್ನೊಂದು ಚಿರಂತನ ಸತ್ಯವನ್ನು ಕವಿ ಅಂತರ್‌ಮನದ ಜಾಗತಿಕ ದೃಷ್ಟಿ ಅಭಿವ್ಯಕ್ತಗೊಳಿಸಿದೆ-

"ಕನ್ನಡವೂ ಭಾರತವೂ ಜಗವೆಲ್ಲವೂ ಒಂದೇ"

ಜಾಗತೀಕರಣವು ಇಂದು ಜಗವನ್ನೆಲ್ಲ ಆವರಿಸಿ, ನವಸಾಮ್ರಾಜ್ಯಶಾಹಿಯ ಅಟ್ಟಹಾಸ ಹಬ್ಬುತ್ತಿರುವಾಗ, 'ಕನ್ನಡವೂ ಭಾರತವೂ ಜಗವೆಲ್ಲವೂ ಒಂದೇ' ಎಂಬ ಸಂದೇಶದ ನೈಜ ಅರ್ಥವನ್ನು ಬಿಂಬಿಸುವ ಅವಶ್ಯಕತೆ ಇದೆ. 'ಮಾನವ ಕುಲವೊಂದೆ' ಎಂದು ಸಾರಿದ ನಮ್ಮ ಸಂಸ್ಕೃತಿಯು, ಯಾವ ಕಾಲಕ್ಕೂ ವಸಾಹತೀಕರಣಕ್ಕೆ ಹಾದಿಕೊಡದೆ, ಸ್ವತಂತ್ರ ವಿಶ್ವದಲ್ಲಿ,

ಮಾನವೀಯ ಸಮಾಜದ ಆವಿರ್ಭಾವದಿಂದಲೇ 'ನವಮಾನವ' ಆವಿರ್ಭಾವ ಸಾಧ್ಯ ಎಂಬ ಸಂದೇಶ ಜಗತ್ತಿನ ಮೂಲೆಮೂಲೆಯಲ್ಲಿ, ಮಾನವರ ಮನಮನದಲ್ಲಿ ಬೇರೂರುವಂತಾಗಬೇಕು. ಆಗ ಕವಿವಾಣಿಗೆ ಸಾರ್ಥಕ್ಯ ಬರುತ್ತದೆ.

ಈ ಭಾಗದಲ್ಲಿಯ ಎರಡನೆಯ ಕವನ ''ನೀವಾರಲಾ!'' ಈ ಕವನದ ಹಿನ್ನೆಲೆಯ ಔಚಿತ್ಯವನ್ನು ಅರಿಯುವುದು ಸೂಕ್ತ. ಭಾವ ಸಂದರ್ಭದಲ್ಲಿ ಬೇಂದ್ರೆಯವರೇ ಹೇಳುವಂತೆ- ''ನೀವಾರಲಾ ಯಾರೋ ಯಾರೋ'' ಎಂಬ ಕವನದ ಪಲ್ಲವಿಯನ್ನು ಒಂದು ದಸರೆಯ ದಿನದ ಮುಂಜಾವಿನ ಕನಸಿನಲ್ಲಿ ನವಯುಗದ ಯುವಕರ ತಂಡಕ್ಕೆ ನಾನು ಹೇಳುತ್ತಿದ್ದೆ. ಹಾಡು ಮರೆತು ಹೋಗಿದೆ. ಪಲ್ಲವಿ ಬೇರೊಂದು ಹಾಡನ್ನು ಹುಟ್ಟಿಸಿದೆ''. ಆದರೇನಂತೆ; ''ನೀವಾರಲಾ'' ಕವನದ ಸಂದೇಶವನ್ನು ''ನವಯುಗದ ಯುವಕ''ರೇ ತಮ್ಮ ದೀಕ್ಷೆಯನ್ನಾಗಿಸಿಕೊಂಡು, ನವಯುಗದ ಪರಿವರ್ತನೆಗೆ ಪರಿಶ್ರಮಿಸಬೇಕಾಗಿದೆ. ಈ ಕವನದ ಕೆಲವು ನುಡಿಗಳನ್ನು ಅವಲೋಕಿಸಿ, ಇಲ್ಲಿ ಅಭಿವ್ಯಕ್ತಗೊಂಡಿರುವ ಜಾಗತಿಕ ದೃಷ್ಟಿಯ ದರ್ಶನವನ್ನು ಪಡೆಯೋಣ.

ನಾಲ್ಕು ಚರಣಗಳನ್ನು ಹೊಂದಿರುವ ಈ ಸುಧೀರ್ಘ ಕವನವು ಪಲ್ಲವಿಯನ್ನು ಒಳಗೊಂಡು ೮೫ ಸಾಲುಗಳನ್ನು ಹೊಂದಿದೆ. ಇದು ಒಂದು ದೃಷ್ಟಿಯಲ್ಲಿ ''ನಾಡಹಬ್ಬ''ದ ವೃಂದಗೀತೆಯ ಮಾದರಿಯಲ್ಲೇ ಇದೆ. ಬೇಂದ್ರೆಯವರು ಧಾರವಾಡದಲ್ಲಿ ''ನಾಡಹಬ್ಬ''ದ ಆಚರಣೆಯ ನಾಂದಿಯನ್ನು ಹಾಡಿದಾಗ, ಆಗಿನ ವೃಂದಗೀತೆ ''ಸೀಮೋಲ್ಲಂಘನ''ವಾಗಿತ್ತು. ೧೯೨೬ರಲ್ಲಿ ಧಾರವಾಡದಲ್ಲಿ ''ಕನ್ನಡ ನಾಡಹಬ್ಬದ ಉಗ್ಗಡಣೆಗಾಗಿ ಬರೆದದ್ದು'' ಎಂದು ಬೇಂದ್ರೆಯವರೇ ಈ ಕವನದ ಭಾವ ಸಂದರ್ಭದಲ್ಲಿ ಬರೆದಿದ್ದಾರೆ. ಈ ಕವನದ ಪಲ್ಲವಿಯಲ್ಲಿ- ''ಹೋಗೋಣು ಬಾ! ಇನ್ನು ಸೀಮೆಯನು ದಾಟಿ!'' ಎಂದಿದೆ. 'ನೀವಾರಲಾ!' ಕವನದ ಮುಕ್ತಾಯದ ಚರಣದಲ್ಲಿ ''ಬೇಡ ಸೀಮಾ ಭಂಗವು'' ಎಂದಿದೆ. ಒಂದು ಮಹತ್ತ್ವದ ಸಂಗತಿಯೆಂದರೆ 'ನೀವಾರಲಾ!' ಕವನವನ್ನು ಕೂಡ ಬೇಂದ್ರೆಯವರು ಮಹಾನವಮಿಯ ದಿನವೇ ಬರೆದದ್ದು; ಆದರೆ ಇದನ್ನು ಅವರು ಸ್ವಾತಂತ್ರ್ಯಾನಂತರ ರಚಿಸಿದರು. ಈಗ ನಾವು ಗ್ರಹಿಸಬೇಕಾದ ವಿಷಯವೆಂದರೆ, ಈ ಎರಡೂ ಕವನಗಳ ಸಂದೇಶದಲ್ಲಿ 'ವೈರುಧ್ಯ'ವಿದೆಯೋ? 'ಸಾಮರಸ್ಯ'ವಿದೆಯೋ? ಎಂಬುದನ್ನು ಪರಿಶಿಲಿಸಬೇಕು. ಭಾರತದಲ್ಲಿ ನವರಾತ್ರಿಯ ಆಚರಣೆಯ ಸಂಕೇತವೇ, ದುಷ್ಟ ಶಕ್ತಿಗಳ ದಮನಕ್ಕೆ ಶಿಷ್ಟ ಶಕ್ತಿಗಳು ಒಂದಾಗಿ ಸಮರ ಸಾರಿ, ವಿಜಯ ಸಾಧಿಸುವುದು. ಅಂತೆಯೇ ನವರಾತ್ರಿಯ ಕೊನೆಯ ದಿನ 'ವಿಜಯ ದಶಮಿ', ವಿಜಯವನ್ನು ಸಾಧಿಸಿದ್ದನ್ನು ಸಾರುವ ಸಂಭ್ರಮವಿದು. ಹೀಗಿರುವುದರಿಂದ ಬೇಂದ್ರೆಯವರು, ೧೯೨೬ರಲ್ಲಿ ರಚಿಸಿದ 'ಸಿಮೋಲ್ಲಂಘನ' ಹಾಗೂ ೧೯೪೮ರಲ್ಲಿ ರಚಿಸಿದ 'ನೀವಾರಲಾ!' ಕವನಗಳ ತುಲನಾತ್ಮಕ ವಿವೇಚನೆಯ ಅವಶ್ಯಕತೆಯಿದೆ.

ಮೊದಲು 'ಸೀಮೋಲ್ಲಂಘನ'ದ ಅಂತರ್‌ದರ್ಶನವನ್ನು ಪಡೆಯೋಣ. ಈ ಕವನದ ಮೊದಲನೆಯ ಚರಣದಲ್ಲಿ, ಕೂಡಿ ಬಾಳುವ ಗುಟ್ಟನ್ನು ಬೇಂದ್ರೆ ಈ ರೀತಿಯಾಗಿ ಪ್ರತಿಪಾದಿಸಿದ್ದಾರೆ-

''ಸಂಗಡವ ಸಂಗಡವ ವಿಂಗಡಿಸಿಕೊಟ್ಟು
ಸಂಗಡಿಸಿ ಕೂಡಿರುವ ಬಾಳುವೆಯ ಗುಟ್ಟು
ಕಂಗೊಳಿಸೆ ಹಾಗಿರುವ ಬಿರುದನ್ನು ತೊಟ್ಟು
ಹೋಗೋಣು ಬಾ ಇನ್ನು ಸೀಮೆಯನು ದಾಟಿ''

ಇಲ್ಲಿಯ ಸಂದೇಶ ಸ್ಪಷ್ಟ, ಪಂಗಡ ಪಂಗಡಗಳಾಗಿ ವಿಂಗಡಗೊಂಡು ಕೆಟ್ಟಿದ್ದೇವೆ. ಸಂಗಡಿಸಿ ಕೂಡಿರುವುದೆ ಬಾಳಿನ ಗುಟ್ಟು ಎಂದು ಹೇಳಿದ್ದಾರೆ.

ಇನ್ನು ಈ ಕವನದ ೫ನೆಯ ಚರಣವನ್ನು ನೋಡೋಣ.

''ಹಿಂದಿರುವ ಹಗೆಯೀಗ ಅಂಗಾರವಾಯ್ತು
ಮುಂದಿರುವ ಗೆಳೆತನದ ಸಿಂಗಾರವಾಯ್ತು
ಇಂದು ಮುಟ್ಟಿದ ಪತ್ರಿ ಬಂಗಾರವಾಯ್ತು
ಹೋಗೋಣ ಬಾ ಇನ್ನು ಸೀಮೆಯನು ದಾಟಿ''

ಇಲ್ಲಿ ಹಿಂದಿನ ಹಗೆಯನ್ನು ಸುಟ್ಟು ಅಂಗಾರವಮಾಡಿ, ಮುಂದಿರುವ ಗೆಳೆತನದ ಸಿಂಗಾರಕ್ಕೆ ಸಿದ್ಧವಾಗೋಣ ಎಂಬ ಕರೆಯಿದೆ. ಅದು ಬೇಂದ್ರೆಯವರು ಸಂಘಟಿಸಿದ್ದ ಗೆಳೆಯರ ಗುಂಪಿನ ದಿನಗಳು. ಎಳೆಯ ಗೆಳೆಯರನ್ನು ಕಟ್ಟಿಕೊಂಡು ಧಾರವಾಡದ ಬೀದಿಗಳಲ್ಲಿ ನವರಾತ್ರಿಯ ಆಚರಣೆಯ ಅಂಗವಾಗಿ 'ವೃಂದಗೀತ' ಹಾಡುತ್ತಾ, 'ಗೆಳೆತನದ ಸಂದೇಶ'ವನ್ನು ಅನಸೂಯ ತತ್ತ್ವವನ್ನು ಬೀರುವ ಕಾಲ ಅದಾಗಿತ್ತು. ಇದಲ್ಲದೆ ಅತಿ ಮಹತ್ವದ ಮಾತೆಂದರೆ, ವಿಜಯ ದಶಮಿಯ ದಿನ ಉತ್ತರ ಕರ್ನಾಟಕದ ಸಂಪ್ರದಾಯದಂತೆ 'ಬನ್ನಿ ಕೊಟ್ಟು ಬಂಗಾರವಾಗಿರೋಣ' ಎಂದು ಬನ್ನಿಪತ್ರಿಯ ವಿನಿಮಯ ಮಾಡಿಕೊಳ್ಳುತ್ತ ಒಬ್ಬರಿಗೊಬ್ಬರು ಶುಭ ಹಾರೈಸುವ ಶುಭ ದಿನ. ಅಂತೆಯೇ ಬೇಂದ್ರೆ ಹೇಳುತ್ತಾರೆ- ''ಇಂದು ಮುಟ್ಟಿದ ಪತ್ರಿ ಬಂಗಾರವಾಯ್ತು'' ಎಂದು.

ಇನ್ನು ಬೇಂದ್ರೆಯವರು ಯಾವ ಸೀಮೆಯನ್ನು ದಾಟುವ ಸಂದೇಶವನ್ನು ಈ 'ಸೀಮೋಲ್ಲಂಘನ' ಕವನದಲ್ಲಿ ಸಾರಿದ್ದರು ಎನ್ನುವನ್ನು ಅರಿಯುವದು ಅತಿ ಮುಖ್ಯ. ಈ ಕವನದ ೭ನೆಯ ಚರಣದಲ್ಲಿ ಈ ಕೆಳಗಿನಂತಿದೆ :

''ಹೋಗಲಾಡಿಸಕೊಂಡು ತಿರುಕತನವನ್ನು
ನೀಗಲಾಡಿಸುತ ಮನೆಮುರುಕುತನವನ್ನು
ಬೇಗದಿಂ ಕರುನಾಡ ಹರಕುತನವನ್ನು
ಕಳೆದು ಹಿರಿದಾಗೋಣ ಸೀಮೆಯನು ದಾಟಿ''

ಈ ನುಡಿಯಲ್ಲಿದೆ ''ಸೀಮೋಲ್ಲಂಘನ''ದ ಒಳತಿರುಳು. ನಾವೆಲ್ಲರೂ ನಮ್ಮ 'ತಿರುಕುತನ'ವನ್ನು ಹೋಗಲಾಡಿಕೊಳ್ಳಬೇಕು, ನಮ್ಮ 'ಮನೆಮುರುಕುತನ'ವನ್ನು ನೀಗಲಾಡಿಸಿಕೊಳ್ಳಬೇಕು, ಕರುನಾಡ 'ಹರಕುತನ'ವನ್ನು ಬೇಗನೆ ಕಳೆದುಕೊಳ್ಳಬೇಕು, ಈ ಸಾಧನೆಗಳನ್ನು ಮಾಡಿ, ಈ 'ತಿರುಕುತನ' 'ಮುರುಕುತನ' ಹಾಗೂ 'ಹರಕುತನ'ಗಳ ಸೀಮೆಯನ್ನು ದಾಟಿದಾಗ ಶ್ರೇಷ್ಠರಾಗುತ್ತೇವೆ ಎಂಬ ಸಂದೇಶವಿದೆ. ಅಂತೆಯೇ ಇಲ್ಲಿಯ 'ಸೀಮೋಲ್ಲಂಘನ'ವು ನಮ್ಮಲ್ಲಿಯ ಸಣ್ಣತನಗಳ, ದುರ್ಬಲತೆಗಳ ಹಾಗೂ ಹೀನಗುಣಗಳ ಸೀಮೆಯನ್ನು ನಾಟುವದರ ಮೂಲಕ 'ಇಡಿಯಾಗೋಣ' ಎಂಬ ಅರ್ಥದಲ್ಲಿ ಬಳಸಲಾಗಿದೆ.

'ನೀವಾರಲಾ !'ದಲ್ಲಿಯ ಸಂದೇಶ ಸಾಮರಸ್ಯದ ಸಂದೇಶವಾಗಿದೆ. ಇಲ್ಲಿಯ ಕೆಲ ನುಡಿಗಳನ್ನು ಅರಿತುಕೊಳ್ಳೋಣ. ಈ ಕವನದ ಮೊದಲನೆಯ ಚರಣದ ಸಂದೇಶ ನೋಡೋಣ :

"ಬರಿದೆ ಮರಗುವಿರೇತಕೆ
ಬನ್ನಿ ತಾಯಿಯ ಜೀತಕೆ
ಮೆಟ್ಟಿ ನಡೆದುದೆ ಕನ್ನಡ
ಮುಟ್ಟಿ ನುಡಿದುದೆ ಕನ್ನಡ
ಮಾಡಿರಯ್ಯಾ ಮಾಟವಾ
ಹೂಡಿರೋ ಹೊಸ ಆಟವಾ-"

ಎನ್ನುತ್ತಾರೆ. ಕನ್ನಡ ತಾಯಿಯ ಸೇವೆಗೆ ಮಾಟವನ್ನೇ ಮಾಡಿ, ಹೊಸ ಆಟವನ್ನೇ ಹೂಡಿ ಎಂದು ಹೇಳುವುದರೊಡನೆ, ಕನ್ನಡದ ಹಿರಿಮೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಬಣ್ಣಿಸಿದ್ದಾರೆ. "ಮೆಟ್ಟಿ ನಡೆದುದೆ ಕನ್ನಡ, ಮುಟ್ಟಿ ನುಡಿದುದೆ ಕನ್ನಡ" ಎಂದು ಹೇಳುವಾಗ ಮೈ ಪುಲಕಿತವಾಗುತ್ತದೆ.

ಇನ್ನು ಎರಡನೆಯ ಚರಣದಲ್ಲಿ ಸತ್ಪುರುಷರ ಹಿತವಚನಗಳ ಸಾರವನ್ನು ಅತ್ಯಂತ ಮಾರ್ಮಿಕವಾಗಿ ಪ್ರತಿಪಾದಿಸುತ್ತಾರೆ :

"ಹೊಲೆಯ ಕಳೆವನು ಹೊಲೆಯನೇ ?
ನೆಲದ ಮಗ ಒಕ್ಕಲಿಗನೇ ?
ದುಡಿದು ಬದುಕುವ ಬಡವನೇ ?
ಏನು ನುಡಿವಿರಿ ? ಎಂತೆ ನಡೆವಿರಿ !
ರಸವು ಇದ್ದುದೇ ಹೃದಯವೋ !"

ಎನ್ನುವಾಗ ಎಂಥ ಹಿರಿದಾದ ಮಾನವೀಯ ಮೌಲ್ಯಗಳನ್ನು ನುಡಿಯುತ್ತಾರೆ. ಇವು ಸಾರ್ವತ್ರಿಕ ಸತ್ಯಗಳು. 'ಜಾತಿ'ಯ ಆಧಾರದ ಮೇಲೆ ಮನುಜರನ್ನು ವಿಂಗಡಿಸಿ, ಸಮಾಜದ ಸ್ವಾಸ್ಥ್ಯವನ್ನು, ಮಾನವನ ಹಿರಿಮೆಯನ್ನು ಗಾಳಿಗೆ ತೂರಿದ್ದೇವೆ. ಅಂತೆಯೇ "ರಸವು ಇದ್ದು ದೇ ಹೃದಯ" ಎಂದು ನಿತ್ಯಸತ್ಯವನ್ನು ನುಡಿದಿದ್ದಾರೆ.

ಇನ್ನು ಮೂರನೆಯ ಚರಣದಲ್ಲಿ 'ಸೀಮೆ'ಯ ಸತ್ಯವನ್ನು ಒಳನುಡಿಯುತ್ತಾರೆ :

"ಎಲ್ಲೆ ಎಲ್ಲಿವೆ ನಾಡಿಗೆ ?
ರಾಗ ಬೇರೆಯೆ ಹಾಡಿಗೆ ?
ಕಾಯಿ ಬಂದಿವೆ ಪಾಡಿಗೆ."

ಎನ್ನುತ್ತಾರೆ. ಅನುಭವಕ್ಕೆ ಪರಿಪಕ್ವತೆಯ ಕಾಲ ಬಂದಾಗ ಎಲ್ಲೆಗಳು ಮಾಯವಾಗುತ್ತವೆ. ಅಂತೆಯೇ ಈ ಚರಣದಲ್ಲಿ ಭಾರತದ ಎಲ್ಲ ಭಾಷಾನಾಡುಗಳ ನಾಡಿಗರು ಬಂಧುಗಳಾಗಿ, ಒಂದಾಗಿ ನಡೆಯಬೇಕೆನ್ನುತ್ತಾರೆ, ತಮಿಳರು, ತೆಲುಗರು, ಕೇರಳದವರು, ಮಹಾರಾಷ್ಟ್ರದವರು, ಕೊಡವರು, ತುಳುವರು, ಹಿಂದಿಯವರು ಎಲ್ಲರೂ ಕೂಡಿ ನಡೆಯಬೇಕೆಂದು, ಈ ಎಲ್ಲರ "ನಡುವೆ ಕನ್ನಡ ಬಾಳಬೇಕು" ಎಂದು ಸಾಮರಸ್ಯದ ಸಂದೇಶವನ್ನು ನೀಡಿದ್ದಾರೆ.

ಇನ್ನು ಕೊನೆ ಚರಣದಲ್ಲಿ-

''ಮರ್ಯಾದೆ ಮೀರದೆ ನಡೆಯಿರಿ
ವಿಶ್ವತಾಳವ ಹಿಡಿಯಿರಿ
ಬೇಡ ಸೀಮಾ ಭಂಗವು''

ಎಂದು ನುಡಿಯುವ ಮೂಲಕ ಪ್ರತಿಯೊಬ್ಬರು ತಮ್ಮಲ್ಲಿಯ ಅಸುರತೆಯನ್ನು ದುರ್ಗುಣಗಳನ್ನು ಸಾಯುವಂತೆ ಪರಿವರ್ತನೆಗೊಂಡು, 'ಮರ್ಯಾದೆಯನ್ನು ಮೀರದೆ ನಡೆದು' ವಿಶ್ವದೃಷ್ಟಿಯನ್ನು ಹೊಂದಿ, 'ಸೀಮಾಭಂಗ'ವನ್ನು ಮಾಡದೆ ನಡೆಯಬೇಕು ಎಂಬ ವಿಶ್ವಮಾನವ ಸೂತ್ರವನ್ನು ನೀಡಿದ್ದಾರೆ. 'ಸೀಮೋಲ್ಲಂಘನ'ದ ಸೀಮೆಯು ಹರಕುತನ-ತಿರುಕುತನಗಳ ಸೀಮೆಯಾಗಿದ್ದು ಅದನ್ನು ದಾಟಬೇಕೆಂಬ ಸಂದೇಶವನ್ನು ೧೯೨೬ರಲ್ಲಿ ನೀಡಿದ್ದಾರೆ. ೧೯೪೮ರಲ್ಲಿ ರಾಜ್ಯ-ರಾಜ್ಯಗಳ, ರಾಷ್ಟ್ರ-ರಾಷ್ಟ್ರಗಳ 'ಸೀಮೆ'ಯನ್ನು ಭಂಗಮಾಡದೆ, ವಿಶ್ವಶಾಂತಿಗಾಗಿ ಶ್ರಮಿಸಿರಿ ಎಂಬ ಸಂದೇಶವನ್ನು ನೀಡಿದ್ದಾರೆ. ಹೀಗಾಗಿ ನವರಾತ್ರಿಯ, ನಾಡಹಬ್ಬದ ಈ ಎರಡೂ ಸಂದೇಶಗಳೂ ಒಂದಕ್ಕೊಂದು ಪೂರಕವೂ, ಪೋಷಕವೂ ಆಗಿದ್ದು, ಬೇಂದ್ರೆಯವರು ಹೇಗೆ ತಮ್ಮ ಕವನಗಳ ಮೂಲಕ ''ವಿಶ್ವದೊಳನುಡಿಯಾಗಿ ಕನ್ನಡಿಸು''ತ್ತಿದ್ದಾರೆ ಎಂದು ಸ್ಪಷ್ಟವಾಗುತ್ತದೆ. ಇವುಗಳಲ್ಲಿ ವೈರುಧ್ಯವಿಲ್ಲ, ವೈಶೇಷಿಕ ವೈಶ್ವದೃಷ್ಟಿ ಇದೆ.

'ಸಿದ್ಧರಾಮರ ವಚನವನ್ನು ನೆನೆದು' ಇದು ಇನ್ನೊಂದು ಮಹತ್ತ್ವದ ಕವನ. ಇಲ್ಲಿಯ ಕೆಲ ಸಾಲುಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗಿದೆ.

''ಕನ್ನಡದ ಸೀಮೆಯಲಿ ಮುನ್ನಡೆಯ ಹೆಜ್ಜೆಯಲಿ
ವಿಶ್ವಮೈತ್ರಿಯ ಮೋಡಿ ಮೂಡಲುಂಟು.
ರೋಷ-ಸಂತೋಷಗಳ ಮಲ್ಲಗಾಳಗದಲ್ಲಿ
ಎದೆಯ ಕಾವಳಮಬ್ಬು ಓಡಲುಂಟು.''

ಕನ್ನಡ ಸೀಮೆಯ ಮುನ್ನಡೆಯ ಹೆಜ್ಜೆಯಲ್ಲಿ ವಿಶ್ವಮೈತ್ರಿಯ ಮೋಡಿಯು ಮೂಡಲಿದೆ; ರೋಷ ಹಾಗೂ ಸಂತೋಷಗಳ ಸಂಘರ್ಷದಲ್ಲಿ ಎದೆಯಲ್ಲಿ ಆವರಿಸಿದ್ದ ಕತ್ತಲೆಯ ಮಬ್ಬು ಓಡುವದಿದೆ, ಎಂಬ ಭವಿಷ್ಯವಾಣಿಯನ್ನು ನುಡಿದಿದ್ದಾರೆ. ಇಲ್ಲಿಯೂ ಬೇಂದ್ರೆಯವರ ಚಿತ್ತ ವಿಶ್ವಮೈತ್ರಿಯತ್ತಲೇ ಇದೆ.

ಈ ಕವನದ ಕೊನೆಯ ಚರಣ ಹೀಗಿದೆ-

''ಏಳಿ ಜೀವದ ಮೇಳ ಕೇಳಿ ಭಾವದ ತಾಳ
ದಿವ್ಯಲಯದಲಿ ಬರುವ ಭವ್ಯರಾಗ
ಎಲ್ಲರೊಳಗಿಹನೊಬ್ಬ ಅವನು ಕಟ್ಟಿದ ಕಬ್ಬ
ಕರೆಯಲಿದೆ ಹಾಲನ್ನು ಕುಡಿಯಿರಾಗ.''

ಈ ವಿಶ್ವ ಮೈತ್ರಿಯ ಹಾಲನ್ನು ಕರೆಯುವ ಕಬ್ಬವನ್ನು 'ಎಲ್ಲರೊಳಗಿಹನೊಬ್ಬ' ಕಟ್ಟುವನು; ಆ 'ಹಾಲನ್ನು ಕುಡಿಯಿರಾಗ' ಎಂದು ನುಡಿದಿದ್ದಾರೆ. ಈ ಕ್ಷೀರಾಮೃತಪಾನದ ಭಾಗ್ಯವನ್ನು ಮಹಾಕವಿ ಅಂಬಿಕಾತನಯದತ್ತರು ತಮ್ಮ ''ಔದುಂಬರಗಾಥೆ''ಯೆಂಬ ಜೀವನ ಮಹಾಕಾವ್ಯದ ಮೂಲಕ ನಮಗೆ ಒದಗಿಸಿದ್ದಾರೆಂದು ನಿಸ್ಸಂದೇಶವಾಗಿ ಹೇಳಬಹುದಾಗಿದೆ.

ಈ ಭಾಗದಲ್ಲಿಯ ಇನ್ನೊಂದು ಅತ್ಯಂತ ಔಚಿತ್ಯಪೂರ್ಣ ಕವನ ''ಅನ್ನಯಜ್ಞ'' ಇದರಲ್ಲಿಯ ಕೆಲ

ನುಡಿಗಳ ಅಂತರಾಳವನ್ನು ವಿಶ್ಲೇಷಿಸಿ, ನಂತರ ಬೇಂದ್ರೆಯವರು ಪ್ರತಿಪಾದಿಸುವ 'ಅನ್ನ ಸಿದ್ಧಾಂತ'ವನ್ನು ವಿವೇಚಿಸೋಣ.

ಈ ಕವನದ ಮೊದಲನೆಯ ಚರಣವೇ ಕರುಳನ್ನು ಕತ್ತರಿಸುವಂತಿದೆ-

''ಕೂಸುಗಳಿಗೆ ಹಾಲು ಇಲ್ಲ, ಪಶುಬಲಿಯೇ ನಡೆದಿದೆ
ಕಾಳು ಇದೆ ಕೂಳು ಇಲ್ಲ, ಹಣದ ಹುಚ್ಚು ಹಿಡಿದಿದೆ.
ಕತ್ತಲಲ್ಲಿ ಬೆಳಕೆ ಇಲ್ಲ, ಜಗಕೆ ಬೆಂಕಿ ಹತ್ತಿದೆ.
ಎಲ್ಲ ಇದೆ ಎಲ್ಲ ಇಲ್ಲ, ಇಲ್ಲೆ ಸುತ್ತುಮುತ್ತಿದೆ.
ಸಾಕು ಎಂಬುವಂತೆ ನೀಡು, ಬೇಕು ಎಂಬ ಹೊತ್ತಿಗೆ
ಬೆಣ್ಣೆ ಎಣ್ಣೆ ಎರೆಯಬನ್ನಿ ಹಸಿದ ಹೊಟ್ಟೆ-ನೆತ್ತಿಗೆ.''

ಕೂಸುಗಳು ಹಾಲಿಲ್ಲದೆ ಹಪಹಪಿಸುತ್ತಿರುವಾಗ ಪಶುಬಲಿಯು ನಡೆಯುತ್ತದೆ. ಕಾಳು ಖಣಜಗಳಲ್ಲಿ ತುಂಬಿತುಳುಕುತ್ತಿರುವಾಗ ಕೂಳು ಇಲ್ಲದೆ ಜನಸಾಯುತ್ತಿದ್ದಾರೆ. ಹಪಾಪಿಗಳಿಗೆ ಹಣದ ಹುಚ್ಚು ಹಿಡಿದಿದೆ. ಅಂತೆಯೇ ಎಲ್ಲೆಡೆ ಕಗ್ಗತ್ತಲು ಮೂಡಿದೆ; ಜಗತ್ತಿಗೇ ಬೆಂಕಿ ಹತ್ತಿದೆ. ಎಲ್ಲವೂ ಇದ್ದು ಸುತ್ತೆಲ್ಲವೂ 'ಇಲ್ಲ, ಇಲ್ಲ' ಎಂಬ ಕೂಗೆ ತುಂಬಿದ್ದರೆ ಎಂಥ ದುರಂತ. ಈ ದುರಂತ ನಿವಾರಣೆಯಾಗಬೇಕು ಎಂದೇ 'ಸಾಕು ಎಂಬುವಂತೆ ನೀಡು, ಬೇಕು ಎಂಬ ಹೊತ್ತಿಗೆ, ಬೆಣ್ಣೆ ಎಣ್ಣೆ ಎರೆಯ ಬನ್ನಿ ಹಸಿದ ಹೊಟ್ಟೆ ನೆತ್ತಿಗೆ' ಎನ್ನುತ್ತಾರೆ. ಹಸಿದವಗೆ ಹೊಟ್ಟೆ ತುಂಬ ನೀಡುವಂತಾಗಬೇಕು. ಹಿಸಿವಿನ ಶೂಲೆಯಿಂದ ಜನ ವಿಮೋಚನೆಗೊಳ್ಳಬೇಕು ಎಂಬ ಹೆಬ್ಬಯಕೆ ಇಲ್ಲಿ ವ್ಯಕ್ತವಾಗಿದೆ.

ಈ ಕವನದ ಮೂರನೆಯ ಚರಣದ ಕೆಲ ಸಾಲುಗಳು ಗಮನಾರ್ಹವಾಗಿವೆ.

''ಖಣವು ರಣವು, ಜನವು ಹೆಣವು ಸಾವಿಗಾಗಿ ದುಡಿವರೇ ?
ಯಾರ ಬಾಳಿಗಾಗಿ ಯಾರೊ ಯಾವೊ ಕೈಗೆ ಮಡಿವರೇ ?
ಕಾವ ಕೈಯ್ಯೆ ಕೊಲ್ಲುತಿಹವು! ಮರಣದತ್ತ ನಡೆವರೇ ?
ಸಾವಿಗಾಗಿ ತಪಿಸುವವರು ಬಾಳ-ಬೀಜ ಹಿಡಿವರೇ ?''

ಈ ಜಗದ ವೈಚಿತ್ರ್ಯವೆಂದರೆ, ಸಾವಿಗಾಗಿ ದುಡಿಯುವುದು, ಯಾರದೋ ಬಾಳಿಗಾಗಿ ಯಾರೋ ಮಡಿಯುವುದು, ಕಾಯುವ ಕೈಯೇ ಕೊಲ್ಲುವ ಕೆಲಸವನ್ನು ಮಾಡುವುದು. ಹಿನ್ನೆಲೆಯಲ್ಲಿಯೇ ಬೇಂದ್ರೆಯವರು - ''ಬಾಳಿಗಾಗಿ ತಪಿಸುವವರು ಬಾಳಿನ-ಬೀಜ ಹಿಡಿವರೇ?''

ಎಂದು ಪ್ರಶ್ನಿಸುವದು.

ಇನ್ನು ನಾಲ್ಕನೆಯ ಚರಣದಲ್ಲಿ ''ಅನ್ನಯಜ್ಞ''ದ ವ್ಯಾಖ್ಯೆ ಒಳಮೂಡಿದೆ.

''ಇದ್ದ ನೆಲವ ಹೊಲವ ಮಾಡಿ ಬಿತ್ತಬೇಕು ಕಾಳನು.
ಬದುಕಲಿರುವ ಬಾಯಿಗಳಿಗೆ ತುತ್ತಬೇಕು ಕೂಳನು
ಅನ್ನದಾನ ಮಹಾಯಜ್ಞ! ಅನ್ನಹೀನ ಆಳನು.
ಅನ್ನ ಮುಚ್ಚಿ ಬಾಳಲೆಳಸುವವನು ಮಹಾಖೂಳನು''

ಹಾಗೂ ಐದನೆಯ ಚರಣದಲ್ಲಿ ಈ ಸೂತ್ರದ ವಿಸ್ತಾರವನ್ನು ಅರಳಿಸಲಾಗಿದೆ.

"ಮತ್ತೆ ನೆಲದ ಎದೆಯ ಮೇಲೆ ತೆನೆಯ ಧ್ವಜವು ನಿಲ್ಲಲಿ.
ಸಾವಿಗಿಂತ ಬಾಳು ಮೇಲು ಎಂಬ ಮಾತು ಗೆಲ್ಲಲಿ.
ವಿಷದ ಒಡಲಿನಿಂದೆ ರಸದ ಊಟೆ ಚಿಮ್ಮಿ ಚೆಲ್ಲಲಿ.
ಪ್ರೇಮವೆ ಹಣ್ಣಾಗಿ ಬರಲಿ ಕವಿಯ ಬಲ್ಲ ಸೊಲ್ಲಲಿ."

'ಅನ್ನದಾನ ಮಹಾಯಜ್ಞ!' 'ಸಾವಿಗಿಂತ ಬಾಳು ಮೇಲು', 'ಪ್ರೇಮವೆ ಹಣ್ಣಾಗಿ ಬರಲಿ' ಎಂಬ ಅಮರ ಸಂದೇಶವನ್ನು ಬೇಂದ್ರೆಯವರು "ಅನ್ನಯಜ್ಞ"ದ ಮೂಲಕ ಸಾರಿದ್ದಾರೆ.

ಇನ್ನು ಕೊನೆಯ ಭಾಗದ "ಅನುಭಾವ ಗೀತೆಗಳು" ನೀಡುವ ಸಂದೇಶವನ್ನು ವಿವೇಚಿಸೋಣ. ಈ ಭಾಗದಲ್ಲಿಯ ಎರಡನೆಯ ಕವನ "ಅಗ್ನಿಸೂಕ್ತ". ಇದರಲ್ಲಿಯ ಮೂರನೆಯ ಚರಣದಲ್ಲಿ ಈ ರೀತಿ ಹೇಳಲಾಗಿದೆ.


"ಬೆಂಕಿಯ ಮೊಳಕೆಯ ಕುಡಿಚಿಗುರೊಡೆದು
ಸಿಡಿಸಿಡಿದೇಳುತ್ತಿಹುದು.
ಕಿಡಿ ಕೆಂಡಾಗಿ ನಿಗಿನಿಗಿ ಮಾಗಿ
ಬೆಳಕಿನೊಳಲರಳುತ್ತಿಹುದು."

ಈ ಪರಿಕಲ್ಪನೆಯು ಮಹತ್ತ್ವಪೂರ್ಣವಾಗಿದೆ. ಬೆಂಕಿಯ ಮೊಳಕೆಯ ಕುಡಿ ಚಿಗುರೊಡೆದು, ಸಿಡಿದು, ಆ ಕಿಡಿ ಕೆಂಡವಾಗಿ, ಅದೇ ಮಾಗಿ, ಬೆಳಕಾಗಿ, ಅರಳುವ ಈ ಪ್ರಕ್ರಿಯೆ ವಿಸ್ಮಯಕಾರಿಯಾಗಿದೆ! ವರಕವಿ ಅಂಬಿಕಾತನಯದತ್ತರು "ಬೆಳಕಿನ ಮಹಾಪಥಿಕರು". ಇವರು 'ಗಂಗಾವತರಣ'ದಲ್ಲಿ ತೋರಿರುವ ಬೆಳಕಿನ ಮಹಾಪಥದಲ್ಲಿ ಮುನ್ನಡೆದು ನವಮಾನವ ಆವಿರ್ಭಾವಕ್ಕೆ ಪರಿಶ್ರಮಿಸೋಣ. ಈ ಸಂದೇಶವಾಹಕ ಗೀತಗುಚ್ಛದ ಕವನಗಳು ಮಾನವ ಪರಿವರ್ತನೆಯ ಮರ್ಮಗೀತಗಳೇ ಆಗಿವೆ.

೨೬-೧೦-೨೦೦೮
ದ. ರಾ. ಬೇಂದ್ರೆಯವರ ೨೮ನೆಯ ಮರಣ ವಾರ್ಷಿಕದ ದಿನ
"ಬೇಂದ್ರೆ ಕುಟೀರ",
ಹುಬ್ಬಳ್ಳಿ - ೩೦

ಡಾ|| ಕೆ. ಎಸ್. ಶರ್ಮಾ
ನಿರ್ದೇಶಕರು
ವರಕವಿ ಡಾ|| ದ. ರಾ. ಬೇಂದ್ರೆ
ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡಮಿ.

ಕಾರ್ಯಸ್ಥಳ : "ಬೇಂದ್ರೆ ಕುಟೀರ", ವಿಶ್ವಶ್ರಮ ಚೇತನ, ಗೋಕುಲ ರಸ್ತೆ, ಹುಬ್ಬಳ್ಳಿ-೫೮೦ ೦೩೦. ದೂರವಾಣಿ : ೨೩೩೦೮೬೬



ಭಾಗ - ಅ

ಪ್ರಾರ್ಥನೆ ಮತ್ತು ಸ್ತೋತ್ರಗಳು

ಗಂಗಾವತರಣ - ಪ್ರಾರ್ಥನೆ

ಈ ವಿಭಾಗದಲ್ಲಿ ಒಂದು ಪ್ರಾರ್ಥನೆ ಹಾಗೂ ಎರಡು ಸ್ತುತಿ-ಸ್ತೋತ್ರ. ಭಾರತೀಯ ಪರಂಪರೆಯಲ್ಲಿ ದೇವರಲ್ಲಿ ಸಲ್ಲಿಸುವ ಪ್ರಾರ್ಥನೆ ಹಾಗೂ ಸ್ತೋತ್ರಗಳಿಗೆ ಹೆಚ್ಚು ಮಹತ್ತ್ವ, ಪ್ರಾರ್ಥನೆ ವ್ಯಷ್ಟಿಗೆ ಸಂಬಂಧಿಸುವುದರೊಂದಿಗೆ ಸಮಷ್ಟಿಗೂ ಶುಭವನ್ನು, ಕಲ್ಯಾಣ ಬಯಸುತ್ತದೆ. ಇಲ್ಲಿಯ ಪ್ರಾರ್ಥನೆ ''ಇಲ್ಲಿರಲಿ ಲೇಸೆ ವೈಯ್ಯ ಪಡೆದು'' ಎಂಬಉದು ಸಮಗ್ರ ಭೂಜೀವನದಲ್ಲಿ ಪರಿವರ್ತನೆಗಾಗಿ ಕವಿ ಸಲ್ಲಿಸಿದ ಹಾರೈಕೆ.

ಇನ್ನುಳಿದ ಎರಡೂ ಸ್ತೋತ್ರ-ಗಂಗಾಸ್ತುತಿ. ಮರಣದ ಕಾಲಕ್ಕೆ ಗಂಗಾ ಪ್ರಾಶನ ಮಾಡಬೇಕು ಎಂಬುದು ನಡೆದು ಬಂದ ಸಂಪ್ರದಾಯ. ಇದಕ್ಕೆ ಅನುಸರಿಸಿ ದೇವರ ಮನೆಯಲ್ಲಿ ಗಂಗಾ ಗಿಂಡಿಗೂ ಪೂಜೆ ಸಲ್ಲಿಸಲಾಗುತ್ತದೆ. ಮೊದಲನೆಯ ಸ್ತೋತ್ರದಲ್ಲಿ ಬೇಂದ್ರೆಯವರಿಗೆ ಗಂಗೆಯ ಬಗ್ಗೆ ಮಾತೃಭಾವ. ಹತ್ತು ಅವರಾತರಕ್ಕಿಂತ ಪ್ರತಿ ಮನೆಯ ತಾಯಿಯ ಮೌಲ್ಯ ಹೆಚ್ಚು. ತಾಯಿಯ ಸ್ಮರಣೆ ನಾಮಜಪಕ್ಕಿಂತ ಶ್ರೇಷ್ಠ. ಗಂಗಾಮಾತೆ-ಗಂಗಾನದಿಯ ಸ್ನಾನ ತಮ್ಮ ತಾಯಿಗೆ ಮುಕ್ತಿ ಸಿಗಲಿ ಎಂಬ ಹಾರೈಕೆಯ ಪ್ರತೀಕ. ಇದು ಸಮಷ್ಟಿ ಸ್ತೋತ್ರವಾದರೆ; 'ಗಂಗಾವತರಣ' ವ್ಯಷ್ಟಿಗೆ-ಅಂಬಿಕಾತನಯದತ್ತರಿಗೇ ಸಂಬಂಧಿಸಿದ್ದು. ತನ್ನ ಅಧ್ಯಾತ್ಮಿಕ ಉನ್ನತಿಗೆ ಗಂಗೆ ಕಾರಣವಾಗಲಿ ಎಂದು ಹಾರೈಸಿದ ಬೇಂದ್ರೆ ''ಸತ್ತ ಜನರನ್ನು ಎತ್ತುವ'' ಪವಾಡ ಗಂಗೆ ಮಾಡಬೇಕು ಎಂದು ಅಪೇಕ್ಷಿಸಿದ್ದು ವಿಶೇಷ. ಈ ಸ್ತೋತ್ರದಲ್ಲಿ ಬೇಂದ್ರೆಯವರ ಸ್ಥಿತಿ - ''ನೀರಿರದ ಮೀನ''ದಂತೆ ಆಗುತ್ತದೆ. ಇದು ಸ್ತೋತ್ರಗಳಿಗೆ ಅತ್ಯಂತ ಅವಶ್ಯ.

- ಸಂ.



೧ ಪ್ರಾರ್ಥನೆ

ಲೇಸೆ ಕೇಳಿಸಲಿ ಕಿವಿಗೆ
ನಾಲಗೆಗೆ ಲೇಸೆ ನುಡಿದು ಬರಲಿ.
ಲೇಸೆ ಕಾಣಿಸಲಿ ಕಣ್ಗೆ
ಜಗದೊಳಗೆ ಲೇಸೆ ಹಬ್ಬುತಿರಲಿ.
ಲೇಸೆ ಕೈಗಳಿಂದಾಗುತಿರಲಿ
ತಾ ಬರಲಿ ಲೇಸೆ ನಡೆದು.
ಲೇಸನುಂಡು ಲೇಸುಸಿರಿ
ಇಲ್ಲಿರಲಿ ಲೇಸೆ ಮೈಯ ಪಡೆದು.

- ರಚನೆ : ಗುರುವಾರ, ೧೬-೭-೧೯೪೨

ಭಾವ : ಶ್ರೀ ಗಣಪತಿ ಅಥರ್ವಶೀರ್ಷ ಮಂತ್ರವು "ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ। ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ॥'' ಎಂದು ಪ್ರಾರಂಭವಾಗುತ್ತದೆ. ಇದನ್ನು ಆಧರಿಸಿ ಲೇಸೆ ಕೇಳಿಸಲಿ ರಚನೆ ಪ್ರಾರಂಭವಾಗಿದೆ. ಕಾವ್ಯ ಸೃಷ್ಟಿಯ ಮೂಲ ಮಂತ್ರ ಇದು. ದರ್ಶನಕ್ಕೆ ಶ್ರುತಿಯೇ ಆಧಾರ. ಚರಾಚರದಲ್ಲಿ ಒಳ್ಳೆಯದರ ಪ್ರತಿಷ್ಠಾಪನೆಯಾಗಲಿ ಎಂಬುದು ಶ್ರೇಷ್ಠವಾದ ಮುಕ್ತ ಪ್ರಾರ್ಥನೆ. ಅಂಬಿಕಾತನಯದತ್ತರ ಸಮಗ್ರ ಕಾವ್ಯದ ಹೊಳವು ಇಲ್ಲಿದೆ. ಜ್ಞಾನೇಂದ್ರಿಯ ಹಾಗೂ ಕರ್ಮೇಂದ್ರಿಯಗಳ ಸಾಮರಸ್ಯ ಪ್ರತಿಯೊಬ್ಬರ ಉಸಿರಾಟವಾಗಬೇಕಾಗಿದೆ ಎಂಬುದೇ ಕಾವ್ಯದ ಪ್ರಾಣ. ಉಪನಿಷತ್ ಮಂತ್ರದ ಛಾಯೆ ಇಲ್ಲಿ ಹೂವಾಗಿದೆ.

೨ ಗಂಗಾಷ್ಟಕ

೧

ನಿನ್ನ ಮಮತೆಯ ಬಯಕೆಯಾವು ಹಾಡಿನ ಹಾಲನನವರತ ಕರೆಯುತಿರಲು
ನಿನ್ನ ನೆನೆವುದೆ ತಪವು, ಉಳಿದ ಶಾಸ್ತ್ರದ ಜಪವು ಕೊರಳೊಳಗೆ ಬಿದ್ದ ಉರಲು.
ತನ್ನದಲ್ಲದುದಕ್ಕೆ ಜೊಲ್ಲು ಸುರಿಸುವುದೇಕೆ? ಬರಿದೆ ತೆರೆದೇನು ಬಾಯಿ?
ಹಾಡ ಕಟ್ಟುವ ಹೆಮ್ಮೆ ಬರಡೆಮ್ಮೆ: ನನಗೆ ಇದು ಗೊತ್ತಿಲ್ಲವೇನೆ ತಾಯಿ?

೨

ನಿನ್ನ ಕಂಡವರೆಲ್ಲ ಹಾಡ ಕಟ್ಟದೆ ಇಲ್ಲ: ನಿನ್ನ ಹೆಸರವಕೆ ಬಂತು:
ಶಿವನ ತಲೆ ಕಟ್ಟಲಾರದ ಹೊಳೆಯ ಸರಿದೊರೆಯ ಹಾಡ ಕಟ್ಟುವದದೆಂತು?
ನಿನ್ನಂಥ ಪುಣ್ಯವಂತಿಯ ಕಂಡು ಮೌನದಿಂದಿಹುದೊಂದು ಪಾಪವೆಂದು,
ಬಾಯಿ ತೆರೆದೆನು ಬಂದ ಸ್ವಚ್ಛಂದ ಗೀತವೇ ಸಂತಾಪ ಹರಿಸಲೆಂದು.

೩

ಭರತಭೂಮಿಯಲೊಮ್ಮೆ ತುಂಬಿಕೊಂಡಿರುತಿದ್ದ ಚಿನ್ನ ಬಂಗಾರ-ಮೊಗೆಯು
ನಿನ್ನ ಬೆಳವೊಲ ದಂಡೆಯಲ್ಲಿ ಕಳೆಗೊಂಡಿರುವ ಹಣ್ಣು ನಗೆಮೊಗದ ಬಗೆಯು!
ತಾಯ ತೊಡೆಯಲ್ಲಾಡಿ ಬೆಳೆಯುದಿಹ ಕೂಸುಗಳು ಇಳೆಯೊಳೆಲ್ಲಾದರುಂಟೆ?
ನಮ್ಮ ಸ್ವಾರಾಜ್ಯ ಸಾಮ್ರಾಜ್ಯಗಳ ಕ್ರೀಡೆಯದು ಈ ನಿನ್ನ ದಂಡೆಗುಂಟೇ!

೪

ಭೂಮಿತಾಯಿಯ ಕಾಟಕಾಗಿ ಇಳೆಗಿಳಿದಂಥ ಚಿತ್ರಾವತಾರ ಮಾಲೆ
ಸಮಯಕ್ಕೆ ಬಂದರೂ, ಅವಸರದಿ ತೆರಳಿತ್ತು-ಜಗ ಮತ್ತೆ ಕಾದುಪಾಲೇ!
ಸೇವಕೆ ಬಂದರು, ಈಗು ನಿಂತಿರುವೆ ನೀನು ನಿಜ ನಿತ್ಯ ಸಂಸಾರಪಾರ!
ಹತ್ತು ಅವತಾರಕ್ಕು ಹಿರಿದೆಂಬೆ ಹಡೆದವ್ವ ನಿನ್ನ ಗಂಗಾವತಾರ.

೫

ಕೂಸು ಅಳುವನು ಕೇಳಿ, ತೀರಿ ಹೋಗಿಹ ತಾಯಿ ಬಂದಳೆಂಬಂತೆ ಧರದಿ
ಸ್ವರ್ಗವಾಸವ ತೊರೆದು ಬಂದೆ ನೀ ಭವಬಂಧನಿರ್ಭೀತಳೆಂಬ ತೆರದಿ.
ಶ್ರೀಮುಕ್ತಿದಾತೆ ನೀ, ಶಿವಶಿರೋಮಣಿ ಭೂತೆ, ಯಾವ ಕಡೆಗಿದ್ದರೇನು?
ಹುಟ್ಟಿದ್ದೆ, ಹರಿದದ್ದೆ, ಕಡಲಕಣೆ ಮುಟ್ಟಿದ್ದೆ-ಅದೇ ಮುಕ್ತಿ ಕ್ಷೇತ್ರ ತಾನು!

೬

ಎಲ್ಲಿಹುದಯೋಧ್ಯೆ? ಎಲ್ಲಿಹುದು ದ್ವಾರಾವತಿಯು? ಎಲ್ಲಿ ಗೋಕುಲವದೀಗ?
ರಾಮಕೃಷ್ಣರ ಕೀರ್ತಿ ನಾಮಶೇಷವು ತಾನೆ, ಕಾಲವಶವೆಲ್ಲ ಬೇಗ!
ನೆಲಮುಗಿಲುಗಳು ಇರುವ ವರೆಗೆ ಗಂಗೆಯು ಉಂಟು, ಉಂಟವಳ ಧವಲಮೂರ್ತಿ.
ಶ್ರೀ ಭಗೀರಥ ಸಾರ್ವಭೌಮನು ನಿನ್ನದು ಒಂದೆ ನಿಜವಾದ ಅಮರ ಕೀರ್ತಿ.

---

೪ ಗಂಗಾವತರಣ - ಕವನ ಸಂಕಲನ ಲೇ : ದ. ರಾ. ಬೇಂದ್ರೆ (ಅಂಬಿಕಾತನಯದತ್ತ)

೭

'ರಾಜರಮಣಿಯರೆದೆಗೆ ಬೆಳೆಗಿನಲ್ಲುಳಿದಂಥ ಕಸ್ತೂರಿ ಬಿದ್ದು ಕೆಳಕೆ
ಮೈತೊಳೆದ ನೀರಿನೊಡ ಗಂಗೆಯಲಿ ಕೂಡಿದರೆ ಮುಕ್ತಿ ಕಸ್ತೂರಿಮೃಗಕೆ'
-ಹೀಗೆ ಹಾಡಿದ ಕವಿಯ ನಂಬಿ, ನಿನ್ನಲ್ಲಿ ಮಿಂದೆ; ನಾನವನ ಬಟ್ಟೆಯವನು.
ನನ್ನ ತಾಯಿಗೆ ವುಕ್ತಿ ಮಿಂದಂದೆಯಾಗಿತ್ತು; ನಾನವಳ ಹೊಟ್ಟೆಯವನು.

೮

ಶಿವನಟ್ಟಹಾಸ! ಹಿಮಗಿರಿಯ ಕರುಣಾಪಾಂಗ! ತೊರೆಹಾಲು ಗೌರಿಯೆದೆಯಾ!
ಎಂಬಂತನಾದಿಯಿಂದಿಂದಿಗೂ ಹರಿಯುತಿದೆ ಭಾರತಿಯ ಮಾತೃಹೃದಯಾ!
ತನ್ನಮಕ್ಕಳಿಗಾಗಿ ಏನು ಮಾತೆಯ ರೀತಿ! ಆ ಪದವಿ ಯಾವ ಕಂಡ
ನನ್ನ ಗಂಗಾಷ್ಟಕವು ಆ ಮಾತೃಪದದಲ್ಲಿ ಆಗಿರಲಿ ಜ್ಞಾನಪಿಂಡ.


ಭಾವ : ಗಂಗಾಷ್ಟಕವು ಕಾಶಿ, ಹರಿದ್ವಾರ, ಹೃಷಿಕೇಶಗಳಲ್ಲಿ ಗಂಗೆಯ ವೈಭವವನ್ನು ಅನುಭವಿಸಿದ ಮೇಲೆ ಬಂದ ಉದ್ಗಾರ.



೩ ಗಂಗಾವತರಣ


೧

ಇಳಿದು ಬಾ ತಾಯಿ
ಇಳಿದು ಬಾ
ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ
ದೇವ ದೇವರನು ತಣಿಸಿ ಬಾ
ದಿಗ್‌ದಿಗಂತದಲಿ ಹಣಿಸಿ ಬಾ
ಚರಾಚರಗಳಿಗೆ ಉಣಿಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ.



೨

ನಿನಗೆ ಪೊಡಮಡುವೆ
ನಿನ್ನನುಡುತೊಡುವೆ
ಏಕೆ ಎಡೆತಡೆವೆ
ಸುರಿದು ಬಾ
ಸ್ವರ್ಗ ತೊರೆದು ಬಾ
ಬಯಲ ಜರೆದು ಬಾ
ನೆಲದಿ ಹರಿದು ಬಾ
ಬಾರೆ ಬಾ ತಾಯಿ ಇಳಿದು ಬಾ
ಇಳಿದು ಬಾ ತಾಯಿ
ಇಳಿದು ಬಾ.



೩

ನನ್ನ ತಲೆಯೊಳಗೆ
ನನ್ನ ಬೆಂಬಳಿಗೆ
ನನ್ನ ಒಳಕಿಳಿಗೆ
ನುಗ್ಗಿ ಬಾ
ಕಣ್ಣ ಕಣ ತೊಳಿಸಿ
ಉಸಿರ ಎಳೆ ಎಳಸಿ
ನುಡಿಯ ಸಸಿ ಮೊಳೆಸಿ
ಹಿಗ್ಗಿ ಬಾ
ಎದೆಯ ನೆಲೆಯಲ್ಲಿ ನೆಲಿಸಿ ಬಾ
ಜೀವ ಜಲದಲ್ಲಿ ಚಲಿಸಿ ಬಾ
ಮೂಲ ಹೊಲದಲ್ಲಿ ನೆಲಿಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ.

೪

ಕಂಚು ಮಿಂಚಾಗಿ ತೆರಳಿ ಬಾ
ನೀರು ನೀರಾಗಿ ಉರುಳಿ ಬಾ
ಮತ್ತೆ ಹೊಡೆಮರಳಿ ಹೊರಳಿ ಬಾ
ದಯೆಯಿರದ ದೀನ
ಹರೆಯಳಿದ ಹೀನ
ನೀರಿರದ ಮೀನ
ಕರೆಕರೆವ ಬಾ
ಇಳಿದು ಬಾ ತಾಯಿ
ಇಳಿದು ಬಾ.




೫

ಕರು ಕಂಡ ಕರುಳೆ
ಮನ ಉಂಡ ಮರುಳೆ
ಉದ್ದಂಡ ಅರುಳೆ
ಸುಳಿಸುಳಿದು ಬಾ
ಶಿವಶುಭ್ರ ಕರುಣೆ
ಅತಿಕಿಂಚಿದರುಣೆ
ವಾತ್ಸಲ್ಯವರಣೆ
ಇಳಿ ಇಳಿದು ಬಾ
ಇಳಿದು ಬಾ ತಾಯಿ
ಇಳಿದು ಬಾ.

೬

ಕೊಳೆಯ ತೊಳೆವವರು ಇಲ್ಲ ಬಾ
ಬೇರೆ ಶಕ್ತಿಗಳು ಹೊಲ್ಲ ಬಾ
ಹೀಗೆ ಮಾಡದಿರು, ಅಲ್ಲ ಬಾ
ನಾಡಿ ನಾಡಿಯನು ತುತ್ತ ಬಾ
ನಮ್ಮ ನಾಡನ್ನೆ ಸುತ್ತ ಬಾ
ಸತ್ತ ಜನರನ್ನು ಎತ್ತ ಬಾ



೭

ಸುರಸ್ವಪ್ನವಿದ್ದ ಪ್ರತಿಬಿಂಬ ಬಿದ್ದ
ಉದ್ಬುದ್ಧ ಶುದ್ಧ ನೀರೇ
ಎಚ್ಚತ್ತು ಎದ್ದ ಆಕಾಶದುದ್ದ
ಧರೆಗಿಳಿಯಲಿದ್ದ ಧೀರೇ
ಸಿರಿವಾರಿಜಾತ ವರಪಾರಿಜಾತ
ತಾರಾ-ಕುಸುಮದಿಂದೆ

೮

ವೃಂದಾರವಂದ್ಯೆ ಮಂದಾರಗಂಧೆ
ನೀನೇ ತಾಯಿ ತಂದೆ.
ರಸಪೂರಜನ್ಯೆ ನೀನಲ್ಲ ಅನ್ಯೆ
ಸಚ್ಚಿದಾನಂದಕನ್ಯೆ
ಬಂದಾರೆ ಬಾರೆ, ಒಂದಾರೆ ಸಾರೆ
ಕಣ್‌ಧಾರೆ ತಡೆವರೇನೇ?
ಅವತಾರವೆಂದೆ ಎಂದಾರೆ ತಾಯಿ, ಈ ಅಧಃಪಾತವನ್ನೇ
ಹರಕೆ ಸಂದಂತೆ
ಮಮತೆ ಮಿಂದಂತೆ
ತುಂಬಿ ಬಂದಂತೆ
ದುಮ್ ದುಮ್ ಎಂದಂತೆ
ದುಡುಕಿ ಬಾ
ನಿನ್ನ ಕಂದನ್ನ ಹುಡುಕಿ ಬಾ
ಹುಡುಕಿ ಬಾ ತಾಯಿ
ದುಡುಕಿ ಬಾ.

೯

ಹರಣ ಹೊಸದಾಗೆ ಹೊಳೆದು ಬಾ
ಬಾಳು ಬೆಳಕಾಗೆ ಬೆಳೆದು ಬಾ
ಕೈ ತೊಳೆದು ಬಾ
ಮೈ ತಳೆದು ಬಾ
ಇಳೆಗಿಳಿದು ಬಾ ತಾಯೀ
ಇಳಿದು ಬಾ ತಾಯಿ
ಇಳಿದು ಬಾ.

೧೦

ಶಂಭು-ಶಿವ-ಹರನ ಚಿತ್ತೆ ಬಾ
ದತ್ತ ನರಹರಿಯ ಮುತ್ತೆ ಬಾ
ಅಂಬಿಕಾತನಯನತ್ತೆ ಬಾ
ಇಳಿದು ಬಾ ತಾಯಿ
ಇಳಿದು ಬಾ.


ರಚನೆ : ಶುಕ್ರವಾರ, ೨೪-೭-೧೯೪೨ (ಆ. ಏಕಾದಶಿ)

ಭಾವ : ಗಂಗಾವತರಣಕ್ಕೆ ನಿಮಿತ್ತ ಮಾತ್ರವಾದದ್ದು ಬಂಗಾಲದೊಳಗಿನ ಬರಗಾಲದ ರೌದ್ರ ಪ್ರಸಂಗ. ಅವ್ಯಾಜ ಕರುಣೆಯ ನಿರಂತರ ಅವತಾರ ಈ ಗಂಗಾಸ್ತೋತ್ರ ಎಂಬ ಸ್ಥಾಯೀಭಾವದಲ್ಲಿ ಈ ಕವನದ ಉಗಮ ಇದೆ.

ವಿಶೇಷ : ೧) ನುಡಿ-೩ ರಲ್ಲಿ ಮೂಲ ಹೊಲ-ಮೂಲಾಧಾರ ಚಕ್ರ; ಜೀವಜಲ-ಸ್ವಾಧಿಷ್ಠಾನ ಚಕ್ರ. ಎದೆಯ ನೆಲೆ-ಅನಾಹತ ಚಕ್ರ, ಕಣ್ಣ ಕಣ-ಆಜ್ಞಾಚಕ್ರ ಮತ್ತು ತಲೆಯೊಳಗೆ-ಸಹಸ್ರ ದಲ ಚಕ್ರ. ಮಣಿಪುರ ಚಕ್ರ-ನಾಭಿ ಮತ್ತು ವಿಶುದ್ಧ ಚಕ್ರ-ಕಂಠ ಗುಪ್ತವಾಗಿವೆ. ಯೋಗ ಶಾಸ್ತ್ರದ ಪರಿಭಾಷೆ ಇಲ್ಲಿದೆ.

೨) ಜಹ್ನು ಋಷಿ ಕುಡಿದ ಗಂಗೆ ಅವನ ತೊಡೆಯಿಂದ ಹರಿದು ಬಂದುದಾಗಿ - ಕೆ. ನಾರಾಯಣ ಸ್ವಾಮಿ ಬರೆದ - ಪುರಾಣ ಗ್ರಂಥದಲ್ಲಿ ಪು.೧೫೪ ರಲ್ಲಿ ವರ್ಣಿಸಲಾಗಿದೆ.





ಭಾಗ - ೩

ಕೌಟುಂಬಿಕ ಭಾವಗೀತಗಳು

ಗಂಗಾವತರಣ - ಕೌಟುಂಬಿಕ ಭಾವಗೀತಗಳು

ಈ ವಿಭಾಗದಲ್ಲಿ ಒಂಬತ್ತು ಕವನಗಳು. ಮೊದಲನೆಯ ಕವನ - ಕವಿ ನಿವಾಸದ ಪರಿಸರ. ೨, ೩ ಕವಿ ತನ್ನನ್ನು ಹಾಗೂ ತನ್ನ ಕಾವ್ಯನಾಮದ ಔಚಿತ್ಯದ ವಿವರ. ೪ನೆಯ ಕವನ ಜೀವನದಲ್ಲಿ ನಡೆದ ಘಟನೆ ಕನಸಾಗಿ ರೂಪತಾಳಿದ ಬಗೆ. ೫, ೬ನೆಯ ಕವನ ಕವಿಯ ದಾಂಪತ್ಯಜೀವನದ ಮೌಲ್ಯಮಾಪನ. ೭, ೮, ೯ ಕವನಗಳು ಕವಿಗೆ ಆದ ಮೂರು ಹೆಣ್ಣುಮಕ್ಕಳಲ್ಲಿ ಬದುಕಿ ಬಾಳುತ್ತಿರುವ ಕೂಸನ್ನು ಕುರಿತು ಕವಿ ಕಂಡ ಕನಸು. ಹೀಗೆ ಐದು ವಿಭಾಗ ಕೂಡಿ ಬೇಂದ್ರೆ ತನ್ನ ಕೌಟುಂಬಿಕ ಜೀವನದ ಗೊತ್ತು ಗುರಿ, ವರ್ಣಿಸಿದ್ದಾರೆ.

''ದೊಡ್ಡನಾಯಕನ ಕೊಪ್ಪ'' ಎಂದು ಇದ್ದ ಕಾಡು ಪ್ರದೇಶ, ಸಾಹಿತ್ಯ ಸಾಧಕರ ಸಾಧನೆಯಿಂದ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಶಾಶ್ವತ ಸ್ಥಾನ ಪಡೆದ-ನಿಸರ್ಗ ರಮಣೀಯ ಪ್ರದೇಶ - ಸಾಧನಕೇರಿ! ಕವಿಯ ಪಾಡನ್ನು-ಹಾಡುಮಾಡಿದ ಪರಿಸರ.

ಕಾವ್ಯನಾಮ - ಕವಿಯ ಸತ್ತ್ವದ ಬಲ. ಇದನ್ನು ಕಂಡುಕೊಂಡ ಕವಿ ಸಲ್ಲಿಸಿದ ಕೃತಜ್ಞತಾಭಾವ - ಅಂಬಿಕಾತನಯದತ್ತ. ತನ್ನ ಈ ಜನ್ಮದ ಗುರಿ ವಿವರಿಸುವ ಕವನ - 'ನಾನು'.

ಅಂತರಂಗವನ್ನು ಕಲುಕಿದ ಪ್ರಸಂಗ ಕವಿ ಕಂಡ ಕನಸಾಗುತ್ತದೆ. ದಾಂಪತ್ಯಜೀವನ ಸುಖಮಯವಾಗಿ ಕೊನೆ ತಲುಪಬೇಕು. ಸಂಶಯಕ್ಕೆ ಎಡೆಕೊಡಬಾರದು. ವಿಶ್ವಾಸ ಬೆಳೆಸಿಕೊಳ್ಳಬೇಕು ಎಂಬ ಮನೋಧರ್ಮ ಕವಿಯದು.

ಮಂಗಳಾ-ಸಂತಾನದ ಆನಂದ; ಕನಸಿನ ಕಥೆ ಊಹಾತೀತ ಚಮತ್ಕಾರ 'ಸಂಜೀಯ ಜಾವಿಗೆ' ಪಾತರಗಿತ್ತಿ ಪಕ್ಕದಂಥ ದೇಸೀ ಸೊಗಸು ಸೂಸುವ ಕವನ.

- ಸಂ.

೪ ಬಾರೊ ಸಾಧನಕೇರಿಗೆ

ಬಾರೊ ಸಾಧನಕೇರಿಗೆ
ಮರಳಿ ನಿನ್ನೀ ಊರಿಗೆ ॥ಪಲ್ಲವಿ॥

೧

ಮಳೆಯು ಎಳೆಯುವ ತೇರಿಗೆ
ಹಸಿರು ಏರಿದೆ ಏರಿಗೆ
ಹಸಿರು ಸೇರಿದೆ ಊರಿಗೆ
ಹಸಿರು ಚಾಚಿದೆ ದಾರಿಗೆ
ನಂದನದ ತುಣುಕೊಂದು ಬಿದ್ದಿದೆ
ನೋಟ ಸೇರದು ಯಾರಿಗೆ? ॥ ಬಾರೊ.....

೨

ಮಲೆಯ ಮೊಗವೇ ಹೊರಳಿದೆ
ಕೋಕಿಲಕೆ ಸವಿ ಕೊರಳಿದೆ
ಬೇಲಿಗೂ ಹೂ ಬೆರಳಿದೆ
ನೆಲಕೆ ಹರೆಯವು ಮರಳಿದೆ
ಭೂಮಿತಾಯ್ ಒಡಮುರಿದು ಎದ್ದಳೊ
ಶ್ರಾವಣದ ಸಿರಿ ಬರಲಿದೆ ॥ ಬಾರೊ..

೩

ಮೋಡಗಳ ನೆರಳಾಟವು
ಅಡವಿ ಹೂಗಳ ಕೂಟವು
ಕೋಟಿ ಜೇನ್ನೊಣಕೂಟವು
ಯಕ್ಷಿ ಮಾಡಿದ ಮಾಟವು
ನೋಡು ಬಾ ಗುಂಪಾಗಿ ಪಾತರ-
ಗಿತ್ತಿ ಕುಣಿಯುವ ತೋಟವು ॥ ಬಾರೊ...

೪

ಮರವು ಮುಗಿಲಿಗೆ ನೀಡಿದೆ.
ಗಿಡದ ಹೊದರೊಳು ಹಾಡಿದೆ
ಗಾಳಿ ಎಲ್ಲೊ ಆಡಿದೆ
ದುಗುಡ ಇಲ್ಲಿಂದೋಡಿದೆ
ಹೇಳು ಗೆಳೆಯಾ ಬೇರೆ ಎಲ್ಲೀ
ತರದ ನೋಟವ ನೋಡಿದೆ ? ॥ ಬಾರೊ ....

- ರಚನೆ : ೧೩-೭-೧೯೪೨

ಭಾವ : ಧಾರವಾಡದ ಕವಿನಿವಾಸವಾಗಿದ್ದ ಸಾಧನಕೇರಿಯ ಪರಿಸರದ ನಿಸರ್ಗದ ವರ್ಣನೆ. ಶ್ರಾವಣದ ಸೊಬಗು.

ಶಬ್ದಾರ್ಥ : ಮಲೆ=ಗುಡ್ಡ.



೫ ನಾನು

೧

ವಿಶ್ವಮಾತೆಯ ಗರ್ಭಕಮಲಜಾತ-ಪರಾಗ-
ಪರಮಾಣು ಕೀರ್ತಿ ನಾನು ।
ಭೂಮಿತಾಯಿಯ ಮೈಯ ಹಿಡಿಮಣ್ಣ ಗುಡಿಗಟ್ಟಿ
ನಿಂತಂಥ ಮೂರ್ತಿ ನಾನು !

೨

ಭರತಮಾತೆಯ ಕೋಟಿ ಕಾರ್ತಿಕೋತ್ಸವದಲ್ಲಿ
ಮಿನುಗುತಿಹ ಜ್ಯೋತಿ ನಾನು !
ಕನ್ನಡದ ತಾಯಿ ತಾವರೆಯ ಪರಿಮಳವುಂಡು
ಬೀರುತಿಹ ಗಾಳಿ ನಾನು !

೩

ನನ್ನ ತಾಯಿಯ ಹಾಲು ನೆತ್ತರವ ಕುಡಿದಂಥ
ಜೀವಂತ ಮಮತೆ ನಾನು !
ಈ ಐದು ಐದೆಯರೆ ಪಂಚಪ್ರಾಣಗಳಾಗಿ
ಈ ಜೀವ ದೇಹನಿಹನು !

೪

ಹೃದಯಾರವಿಂದದಲ್ಲಿರುವ ನಾರಾಯಣನೆ
ತಾನಾಗಿ ದತ್ತ ನರನು !
ವಿಶ್ವದೊಳನುಡಿಯಾಗಿ ಕನ್ನಡಿಸುತಿಹನಿಲ್ಲಿ
ಅಂಬಿಕಾತನಯನಿವನು !

ಭಾವ : ಬೇಂದ್ರೆಯವರ ಜೀವನಪಥ ದರ್ಶನ. ಕವಿ ಎಂಬ ವ್ಯಕ್ತಿತ್ವದ ಆತ್ಮವಿಶ್ವಾಸ. ಆತ್ಮಚಿಂತನ.

ಶಬ್ದಾರ್ಥ : ಐದೆ=ಸುಮಂಗಲಿ, ತಾಯಿ.

ವಿಶೇಷ : ವಿಶ್ವಮಾತೆ, ಭೂಮಾತೆ, ಭರತಮಾತೆ, ಕನ್ನಡತಾಯಿ ಹಾಗೂ ಜನ್ಮಕೊಟ್ಟತಾಯಿ-ಹೀಗೆ ಐದು ತಾಯಂದಿರ ಮಗ ಎಂಬ ಹೇಳಿಕೆಯೆ ಅತ್ಯಂತ ನೂತನ. ಸಪ್ತಮಾತೃಕೆ ಹಾಗೂ ಪಂಚವಲ್ಲಭೆ ಎಂಬುದು ಪ್ರಾಚೀನ ಉಕ್ತಿ ವಿಶೇಷ. ವರಕವಿ "ಅಂಬಿಕಾತನಯದತ್ತ"ನು ವಿಶ್ವದೊಳನುಡಿಯಾಗಿ ಕನ್ನಡಿಸುತ್ತ ಕನ್ನಡಕ್ಕೆ ವಿಶ್ವಕಾವ್ಯದ ಮೆರಗನ್ನು ನೀಡಿರುವುದು ಇಲ್ಲಿ ಪ್ರತಿಬಿಂಬಿತವಾಗಿದೆ.

೬ ಅಂಬಿಕಾತನಯದತ್ತ

೧

ಯಾವ ಯೋಗನಿದ್ರೆಯಲ್ಲಿ ಏನು ಕನಸ ಕಂಡೆನೋ !
ಯಾರ ಹಾಲನುಂಡೆನೊ ॥
ಈ ವಿಶ್ವಜಾಲದಲ್ಲಿ ಬಂದೆ ಅದಕೆ ಮಿಡುಕುತ ।
ಅದರ ಧಾರೆ ಹುಡುಕುತ ॥

೨

ನಿನ್ನ ಹೃದಯಲೋಕದಲ್ಲಿ ಪ್ರೇಮಶಿಖರವೆತ್ತುತ್ತಾ !
ಕರೆದಿತೆನ್ನ ಮುತ್ತುತ್ತಾ ॥
ಲೋಹಚುಂಬಕವನು ಕಂಡ ಲೋಹದಂತೆ ನುಗ್ಗಿದೆ !
ಮಮತೆಯಿಂದ ಹಿಗ್ಗಿದೆ ॥

೩

ಬ್ರಹ್ಮಾಂಡದಾಳದಲ್ಲಿ ಆಳುತಿಹುದು ಚುಕ್ಕೆಯು !
ಬಂತೆ ಅದಕೆ ಬಿಕ್ಕೆಯು ?॥
ಆದರೇನು! ಅದರ ಕಿರಣ ಎಂದೊ ಏನೊ ಉರಳಿತು !
ಭೂಮಿಯತ್ತ ಹೊರಳಿತು ॥

೪

ನೀರಿನೊಂದು ನೀರಜಾತ ಬೆಳಕಿಗಾಗಿ ಕೆರಳಿತು !
ಈ ಕಿರಣಕರಳಿತು ॥
ಹೂವ ಹೊಕ್ಕ ಕಿರಣವಾಗ ಹೂ-ನೀರ ನೆಕ್ಕಿತು !
ರುಚಿಗೆ ಮೆಚ್ಚಿ ಸಿಕ್ಕಿತು ॥

೫

ಅಂತೆ ಕೂಸುತನದ ಗೊಂಬೆಯಲ್ಲಿ ಮುದ್ದು ಬಿಂಬಿಸೆ !
ನೀನು ಅದನು ಚುಂಬಿಸೆ ॥
ನಿನ್ನ ಮನದ ಮೂಸೆಯಲ್ಲಿ ಭಾವವಾಗಿ ಕರಗಿತು !
ಜೀವವಾಗಿ ಮಿರುಗಿತು ॥


೬
ನಿನ್ನ ರಕ್ತ ಮಾಂಸದಲ್ಲಿ ಮೈಯ್ಯ ಮನೆಯ ಕಟ್ಟಲು!
ಅದನು ನಾನು ಮುಟ್ಟಲು ॥
ನಿನ್ನ ಉಸಿರಲುಸಿರಾಡಿಸಿ ಬಸುರಿನಲ್ಲಿ ಬೆಳೆದೆನು!
ಒಂದು ರೂಪ ತಳೆದೆನು ॥
೭
ಮಗುವು ಆಗಿ ತೊಡೆಗೆ ಬಂದೆ ತೊರೆದು ಬಂತು ನಿನ್ನೆದೆ!
ಅಂತು ಇಂತು ಎನ್ನದೆ ॥
ಹಾಲಿನೊಡನೆ ಪ್ರೇಮರಸವ ಜೀವದಲ್ಲಿ ತುಂಬಿದೆ!
ಅಂತೆ ನಿನ್ನ ನಂಬಿದೆ ॥
೮
ಮುದ್ದಿನೊಡನೆ ಮುದ್ದುಮಾತು ಕಲಿಸಿ ಉಲಿಸಿ ನಲಿಸಿದೆ!
ನಿನ್ನ ತಿಳಿವ ಸಲಿಸಿದೆ ॥
ನಿನ್ನ ತನುವಿನಿಂದ ಬಂದ ಮುದ್ದು ತನಯನೀತನು!
ನೀನು ಈಯಲಿತ್ತನು ॥
೯
ತಾಯಿ ಮಾಯಿ ಅಂಬಿಕೆಯೇ ನಿನ್ನ ತನಯ ದತ್ತನು
ನೀನು ಇತ್ತುದಿತ್ತನು ॥
ನಿನ್ನ ಜನುಮದೊಂದು ಪಾಡು ಹಾಡು ಆಗಿ ಮೂಡಿತು!
ನನ್ನ ಕೊರಳು ಹಾಡಿತು ॥
೧೦
ಮೂರ್ತಿಗಾಗಿ ಮುಗಿದ ಕೈಯ್ಯ ಗುಡಿಗೆ ಸಲ್ಲುವಂತೆಯೇ!
ಎರಡು ಒಂದೆಂಬಂತೆಯೇ ॥
ಹಾಡಲಾಗಿ ಕವಿಯು ಎಂದು ಜನವು ನನ್ನ ಕರೆದಿದೆ!
ನಿನ್ನ ಹೆಸರು ಮರೆಗಿದೆ ॥
೧೧
ನಿನ್ನ ಒಲ್ಮೆಯಲ್ಲಿ ಹುಟ್ಟಿ ಬೆಳೆದು ಬಂದ ಸೊಲ್ಲಿದು!
ಬೇರೆ ಏನು ಬಲ್ಲದು ॥
ನಿನ್ನ ಉದರದೊಂದ ಹೂವ ಸರಸ್ವತಿಗೆ ಸಲಿಸಿದೆ!
ಚುಕ್ಕೆಯಾಗಿ ನೆಲೆಸಿದೆ ॥

೧೨
ಸಾವಿರದ ಮನೆಗಳಲ್ಲಿ ನನಗೆ ಮನೆಯ ಮಾಡಿದೆ!
ತಾಯಿ ಆಟ ಹೂಡಿದೆ॥
ನಿನ್ನ ಹೆಸರಿನಲ್ಲಿ ನಾನು ಬರೆವುದೇನು ಸೋಜಿಗ!
ತಿಳಿಯಲಾರದೀ ಜಗ॥

ಭಾವ : ದ.ರಾ.ಬೇಂದ್ರೆ ತನ್ನ ವ್ಯಕ್ತಿತ್ವವನ್ನು ಕುರಿತು ಧ್ಯಾನ ಮಾಡಿದಾಗ ಅವರಿಗಾದ ಅವರ ಅರಿವು (ತನ್ನ ತಾನರಿವ ಬಗೆ) ಸಾಕ್ಷಾತ್ಕಾರದ ಅವತರಣ.

ಶಬ್ದಾರ್ಥ : ಅದರ ಧಾರೆ=ಧಾರವಾಡದ ಕಿರಣ, (ಮಿನಗುವ ನಕ್ಷತ್ರದ ಬೆಳಕಿನೆಡೆಗೆ ಏಸು ಕ್ರಿಸ್ತ ಅವತರಿಸಿದಂತೆ).ನೀರಜಾತ=ಕಮಲ.

ವಿಶೇಷ : ಬೇಂದ್ರೆ ಮಾತೃಭಕ್ತಿ ಹಾಗೂ ಸಾಹಿತ್ಯಸೃಷ್ಟಿಯ ಮಮತೆಯ ಸೆಲೆ ಇಲ್ಲಿದೆ. 'ಕೆಲಗೇರಿ' ಕವಿನಿವಾಸದ ಸಾಮಿಪ್ಯದಲ್ಲಿರುವ ಕೆರೆ.



೭ ತೇಲಾಡುವಾಗ

೧
"ತೇಲಾಡುವಾಗ ಮನಸು
ಮೇಲಾಡತಾವ ಕನಸು
ತಾಕಾಡುವಾಗ ಇತ್ತ
ತೇಕಾಡತಾವ ಚಿತ್ತ"
೨
ಬೇಕಾದ ಬಗೆಯ ದಂಡು
ನೂಕಾಡಿ ನುಗ್ಗಿ ಬಂದು
ಬೇಕಾದುದಾದರೇನು
ಸಾಕಾಗದಾಗ ತಾನು
೩
ಏರಾಡೆ ಗಾಳಿ ಉಕ್ಕಿ
ಹಾರಾಡತಾವ ಹಕ್ಕಿ
ಕಲಕಾಡಿದಾಗ ಕೆಸರು
ಕೆಲಗೇರಿ ಬರಿಯ ಹೆಸರು
೪
ಎಲ್ಲೇನೊ ಕೊರತೆ ಬಿದ್ದು
ಇಲ್ಲೇನೆ ಭೂತವೆದ್ದು
ಕುಣಿದಾಡುವಾಗ ಎಂತು
ತಣಿದೀತು ಜೀವಜಂತು
೫
ಕೊಲ್ಲಿಸಿದೆ ಇಣಚಿಯನ್ನ
ತಲ್ಲಣಿಸಿ ಜೀವ ನನ್ನ
ಕಡೆವುಟ್ಟದಂತೆ ತ್ರಾಣ
ಚಡಪಡಿಸತಾವ ಪ್ರಾಣ
೬
"ಅಯ್ಯಯ್ಯೊ ತಾಯಿ ನೊಂದೆ
ಕೈಯ್ಯೀಯೆ ಸತ್ತೆ" ಎಂದೆ
"ಚಿಂತ್ಯಾಕೊ ನನ್ನ ಬಾಳಾ"
ಅಂತಾವ ಅಂತರಾಳ.

೭

ಎದ್ದಾಗ ಏನು ಇನ್ನ
ನಿದ್ದ್ಯಾಗ ಕೂಡ ನಿನ್ನ
ಮಿಡುಕಾಡಿ ಬಗೆಯು ಬಾಯಿ
ಹುಡುಕಾಡತಾವ ತಾಯಿ

೮

ಪಾತಾಳ ಕಂಡರೇನು
ಆ ತಾಯಿ ಬಿಡುವಳೇನು
ಕಾಯುವನು ಹೆತ್ತ ಕರುಳು
ಕಾಯುವದು ಹಗಲು ಇರುಳು

೯

ಈ ತಲೆಯು ಇರಲಿ ಬುರುಡೆ
ಆ ತಾಯಿ ಏನು ಕುರುಡೆ
ತಾಕಿದರೆ ಸಾಕು ತೊಡೆಯು
ನೂಕೀತು ಹಾಡ ಹೆಡೆಯು

೧೦

ತುಂಬೆದೆಗೆ ಸೋತು ಕೂತು
ತಂಬೂರಿ ಹಾಗೆ ಆತು
ಬರತಾವ ತಾನೆ ತಾನಾ
ಹರದಾಡತಾವ ಗಾನಾ

೧೧

ನೂರಾಡಿ ಏನು ಫಲವು
ತಾರಾಡುವಾಗ ಒಲವು
ಕಿವಿಗಿಳಿದು ಬರಲು ಹಾಡು
ಸವಿಗಾಗ ಯಾವುದೀಡು

೧೨

ಸಡಲಿದರು ಪ್ರಾಣತಂತು
ಮಿಡಿದೂದನೆ ಜೀವ ಬಂತು
ಮುಟ್ಟುತಲೆ ತಾಯ ಬೆರಳು
ಹುಟ್ಟುವದು ಹುರುಳು ತಿರುಳು

೧೩
ನಮ್ಮಿಂದ ಹರಿದು ಚಿಂತಿ
ಜುಮ್ಮೆನ್ನತಾವ ತಂತಿ
ಮುಳುಗುವವು ವಾದಗೀದ
ತುಳುಕಾಡಿ ಏಕನಾದ
೧೪
ಒಳಗಿಂದ ತಾಯದನಿಯು
ಮೊಳಗಿತ್ತು ಶ್ರುತಿಯ ಖನಿಯು
ಬಿದ್ದಂತೆ ಸ್ವಾತಿಮಳೆಯು
ಇದ್ದಲ್ಲೆ ಚಿಪ್ಪಿನೆಳೆಯು
೧೫
ಏನೇನೋ ಛಂದದಲ್ಲಿ
ತಾನಾಗಿ ಮಿಂಚುಬಳ್ಳಿ
ಉಚ್ಚಳಿಸುತಿರಲು ಚಂದ
ಎಚ್ಚೆತ್ತೆ ನಿದ್ದೆಯಿಂದ
೧೬
ಹಾಸಾದ ಮಿಂಚಿನಂದ
ಬೀಸಿದ್ದ ಸೆರಗಿನಿಂದ
ಸೆಳೆದಂತೆ ಎರಡು ನೂಲು
ಉಳಿದಾವ ನಾಕು ಸಾಲು
೧೭
"ತೇಲಾಡುವಾಗ ಮನಸು
ಮೇಲಾಡತಾವ ಕನಸು
ತಾಕಾಡುವಾಗ ಇತ್ತ
ತೇಕಾಡತಾವ ಚಿತ್ತ"

ರಚನೆ : ರವಿವಾರ, ೪-೫-೧೯೪೦

ಭಾವ : ಈ ಕವನದ ಸಂದರ್ಭ ಮಿಶ್ರ ಸ್ವರೂಪದ್ದು. ಒಂದು ಇಣಚಿಯ ಮರಣಕ್ಕೆ ನಾನೂ ಒಮ್ಮೆ ಕಾರಣನಾದೆ. ಅಂದು ರಾತ್ರಿ ಬಿದ್ದ ಎರಡು ಕನಸುಗಳಲ್ಲಿ ಒಂದು ನನ್ನ ತಾಯಿ ಧೈರ್ಯಕೊಡುವಂತಿತ್ತು. ಇನ್ನೊಂದರಲ್ಲಿ ನಾನು ಹೇಳಿದ ಒಂದು ಕವನ ಕೇಳಿ ಅಣ್ಣ ಮಾಸ್ತಿ ಮೆಚ್ಚಿದಂತಿತ್ತು. ಎಚ್ಚರಾದ ಮೇಲೆ ಅದರೊಳಗಿನ ನಾಲ್ಕೇ ಸಾಲು ನೆನಪುಳಿದವು. ಈ ಮೂರು ಘಟನೆಗಳ ಒಳಸೂತ್ರದ ಭಾವ ಇಲ್ಲಿಯ ಕವನದ ದ್ರವ್ಯ.

ಶಬ್ದಾರ್ಥ : ಬುರುಡೆ=ಸುಳ್ಳುಮಾತು. ತಾರಾಡು=ತೂಗಾಡು. ಖನಿ=ಗಣಿ. ಭೂಮಿಯಲ್ಲಡಗಿದ ಸಂಪತ್ತು ಖನಿಜ. ಉಚ್ಚಳಿಸು=ಚಿಮ್ಮು, ಮೇಲಕ್ಕೆ ಚಲಿಸು.

ವಿಶೇಷ : ಭಾವದಲ್ಲಿ ಉಲ್ಲೇಖಿಸಿದ "ಅಣ್ಣ ಮಾಸ್ತಿ" ಎಂದರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್.

೮ ಫಜಾರಗಟ್ಟೀ ಮುಟ್ಟೋಣು ಬಾ

ಫಜಾರಗಟ್ಟೀ ಮುಟ್ಟೋಣು ಬಾ
ಹಿಂದಿನ ಆಟಾ ಮುಗಿಸೋಣು ಬಾ
ಮುಂದಿನ ಆಟಾ ನಡೆಸೋಣು ಬಾ ॥ ಪಲ್ಲವಿ ॥
೧
ಇದS ಇದS ಅಂತ ಎದೀ ಅನ್ನತದ
ಅದS ಅಲ್ಲಿ ಮನಿ ಕಟ್ಟೋಣು ಬಾ।
ನೆಲೀ ಮ್ಯಾಲ ನೆಲ ಅಲ್ಲ ಸಂಗಿ, ಅದು
ಅದS ನಿಜದ ನೆಲ ಮುಟ್ಟೋಣು ಬಾ
೨
ಅಂಗಲಿಂಗದ ಜೋಡಿ ಕೂಡಿ ಹೊಸ
ಗಿಣೀ- ಗೆಣೆತನS ನೋಡೋಣ ಬಾ।
ಮನಾ ಎಂಬೋ ಹೊಸ ಬನಾ ತೆರದರS
ಜನಾ ಕಂಡು ಅದ ಕೂಡೋಣ ಬಾ
೩
ಪುಂಡರೀಕ ನಾ, ಮಹಾಶ್ವೇತೆ ನೀ
ಆದ್ಹಾಂಗಿತ್ತು ಅದ ನೆನಸೋಣ ಬಾ।
ತುಂಬೂರ ನಾನಾಗಿ ರಂಭೆ ನೀನಾದಾಗ
ಹಚ್ಚೀದ ಬಳ್ಳಿಗೆ ಹಣಿಸೋಣು ಬಾ
೪
ಗುರುವಿನಂಗಳದ ಗಿಡಾ ಬಳ್ಳಿಯಾಗಿ
ಹೊಸಾ ಹೂವು ನಾವು ಸುರಿಸೋಣು ಬಾ।
ತಾಯಿ ಪಾದದಾನಂದ ಗಂಧ ಉಂಡು
ಬೆಂದವರ ಜೀವ ಬೆರಸೋಣ ಬಾ

ಭಾವ : 'ಫಜಾರಗಟ್ಟಿ' ಎಂಬುದು ಪುಂಡರೀಕ-ಮಹಾಶ್ವೇತೆ, ರಂಭೆ-ತುಂಬುರು ಸಂಬಂಧದಂತೆ ಜೀವ ಪುಷ್ಪ ಮತ್ತು ಜೈವಿಕ (gene) ಪ್ರಕೃತಿಯಲ್ಲಿ ಒಂದು ಸಂಬಂಧ ವ್ಯಂಜಿತವಾದಾಗ ಇದನ್ನು ಬರೆಯಬೇಕಾಯಿತು.

ಶಬ್ದಾರ್ಥ : ಫಜಾರಗಟ್ಟಿ=ಸಂಸಾರದ ಸಫಲತೆಯ ಹಂತ, ಉತ್ತರ ಕರ್ನಾಟಕದಲ್ಲಿ ಕಣ್ಣು ಮುಚ್ಚಣಿಕೆಯ ಆಟ.

ವಿಶೇಷ : ನುಡಿ ೩ ಹಾಗೂ ೪ ಈ ಕವನದ ಸಿದ್ಧಾಂತ. ದ. ರಾ. ಬೇಂದ್ರೆ ಹಾಗೂ ಲಕ್ಷ್ಮೀಬಾಯಿಯವರ ಸಂಸಾರಕ್ಕೂ ಅನ್ವಯಿಸಿ ಸೂಚಿಸಲಾಗಿದೆ.

೯ ಬರುವದೇನೆ ನೆಪ್ಪಿಗೆ

ಒಂದು

೧

ಬರುವದೇನೆ ನೆಪ್ಪಿಗೆ
ನಮ್ಮ ನಿಮ್ಮ ಒಪ್ಪಿಗೆ
ಎಲ್ಲೊ ಏನೊ ನೋಡಿದೆ
ಹಾಗೆ ಬಂದು ಕೂಡಿದೆ.

೨


ಬೆಳಕು ಬೆಂಕಿ ಬೆರೆತುಕೊಂಡು
ಭಾವವು ಹೊರದೂಡಿರೆ
ಬಾಳು ಮೊಳೆತು ಸುಗ್ಗಿ ನನೆತು
ಹೂವಿನಂತೆ ಮಾಡಿರೆ

೩

ಆಹಾ ಚೆಲುವೆ! ಎಂದು ಕುಣಿದೆ
ಮಿಕ್ಕ ಸಂಜೆ ಮಬ್ಬಿಗೆ
ಓಹೊ ಒಲವೆ! ಎಂದು ಕರೆದೆ
ಪಲ್ಲವಿಸಿದ ಹುಬ್ಬಿಗೆ.

೪

ಅಂದು ಏನ ಬೇಡಿದೆ
ಏನ ನೆನಸಿ ಹಾಡಿದೆ
ಬರುವದೇನೆ ನೆಪ್ಪಿಗೆ
ಎದೆಗೆ ಎದೆಯು ಅಪ್ಪಿಗೆ.



ಎರಡು

೧

ಬರುವದೇನೆ ನೆಪ್ಪಿಗೆ
ಕೂಡಿದೊಂದ ತಪ್ಪಿಗೆ
ಏನೊ ಏನೊ ನೂತೆವು
ಬದುಕಿನೆಳೆಗೆ ಜೋತೆವು

೨

ಮೋಡದೊಂದು ನಾಡಿನಲ್ಲಿ
ಮಳೆಯ ಮಿಂಚು ಕಂಡೆವು
ಯಾವ ಫಲಕೆ ಇಳಿಯುತಿತ್ತೊ
ಮಣ್ಣ ಬೀಜ ಉಂಡೆವು

೩

ದುಃಖದೊಂದು ಶೂಲೆಯಲ್ಲಿ
ನೋವುಗೊಂಡು ತಿಣುಕಿದೆ
ಸುಖದ ತೊಟ್ಟು ತೊಟ್ಟಾಗಿ
ಹತ್ತು ಕಡೆಗೆ ಹಣಕಿದೆ.

೪

ಇಬ್ಬಗೆಗೂ ಸೋತೆವು
ಆಸರಾಗಿ ಆತೆವು
ಬರುವದೇನೆ ನೆಪ್ಪಿಗೆ
ಹೊರತಾದೆವು ಉಪ್ಪಿಗೆ.

ಎಚ್ಚರ

೧

ಬರುವದೇನೆ ನೆಪ್ಪಿಗೆ
ನಾವು ಬಿದ್ದ ಟೊಪ್ಪಿಗೆ
ತಲೆಯ ತೆರೆದು ಬಂದಿತು
ಎಚ್ಚರೆಚ್ಚರೆಂದಿತು.

೨

ಯಾವ ಲೋಕದಿಂದಲಿಳಿದೊ
ಹೊಸ ಸುಗಂಧ ಬೀರಿದೆ
ರಣೋತ್ಸಾಹ ಕಹಳೆಯಂತೆ
ನವಚೇತನ ಊರಿದೆ

೩

ಇಬ್ಬರನ್ನು ನೂಗಿಕೊಂಡು
ಒಬ್ಬನಾಗಿ ಎದ್ದಿದೆ
ಚಿತ್ತವೆಲ್ಲ ಎನುವಾಗಲೆ
ಕೊಡುವ ಮೊದಲೆ ಕದ್ದಿದೆ.

೪

ಸಲ್ಲುವಲ್ಲಿ ಸಂದಿದೆ
ನಿಲ್ಲುವಲ್ಲಿ ನಿಂದಿದೆ
ಬರುವದೇನೆ ನೆಪ್ಪಿಗೆ
ಜೀವ ಜೀವದಪ್ಪಿಗೆ.

ಭಾವ : 'ಸಖೀಗೀತ'ಕ್ಕೆ ಪ್ರಸ್ತಾವನೆಯಾಗಿರುವ ಕವನ.

೧೦ ಮಂಗಳಾ

೧

ಬೆಳಕು-ತೊರೆ ತೂರಿ ತೆರೆ
ಕಣ್ಣಂಚಿಗೆ ಬಾಗಿರೆ
ದಿನವು ಬಿದಿಗೆ ಇದ್ದ ಹಾಗೆ
ಚಂದ್ರನೋರೆಯಾಗಿರೆ.

೨

ನಗೂ ನಗೂ ಹಾಗೆ ನಗು
ಆಡು ಮಗಳೆ ಮಂಗಳಾ
ತುಂಬಲಿ ಮನೆ ಸುರಿಯಲಿ ಸೊನೆ
ಸೂಸುತಿರಲಿ ಅಂಗಳಾ.

೩

ಮರವು ನಾವು, ನೀವು ಹೂವು
ನಮಗೆ ನಲಿವು ನೀವಿರೆ
ಇರಲಿ ನೀರು ಕಪ್ಪೆ ಕೆಸರು
ಸಾಕು ಇರಲು ತಾವರೆ.

೪

ಸ್ವರ್ಗ, ಮಕ್ಕಳಾಟ ಕಂಡು
ಹಿಗ್ಗಬಲ್ಲ ಕಂಗಳೇ
ಮಗುವಿನ ನಗೆ ಮಗುವಿನ ಬಗೆ
ಮಗುವಿನ ಜಗ ಮಂಗಳೇ.

೫

ರತ್ನಧವಳ ಮುತ್ತು ಹವಳ
ಹಾಗೆಯೆ ಹುಸಿ ನಕ್ಕರೆ
ತುಟಿಯಲೇನು ಜೊಲ್ಲು ಜೇನು
ನಿನ್ನ ಬೆಲ್ಲ ಸಕ್ಕರೆ.



ಮಂಗಳಾ ದತ್ತಾತ್ರೇಯ ಬೇಂದ್ರೆ
(ಪ್ರಭಾಕರ ಕುಲಕರ್ಣಿಯವರ ಪತ್ನಿ)
(ಜನನ : ೨೬-೭-೧೯೩೯, ಧಾರವಾಡ)

ರಚನೆ : ರವಿವಾರ, ೨೩-೮-೧೯೪೨

ಭಾವ : ೮ನೇ ಸಂತಾನ ಚಿ. ಮಂಗಲೆ (ಸರ್ವಮಂಗಲಾ) ಕುರಿತು. ಇವಳನ್ನು ಕುರಿತು ಮೂರು ಕವನ ಸ್ಫುರಣಗೊಂಡವು. "ತ್ರಿಪುರಸುಂದರಿಮಂಗಳಾ" ಎಂದು ನಾಮಕರಣ ಮಾಡಲಾಗಿತ್ತು.
ವಿಶೇಷ : ಹೆಣ್ಣು ಸಂತಾನ ಬದುಕಿ ಬಾಳಿದ್ದು ಇದು ಒಂದೇ. ಇವಳು ಕುಲಕರ್ಣಿ ಎಂಬ ಅಡ್ಡ ಹೆಸರಿನಿಂದ ಔರಂಗಾಬಾದದಲ್ಲಿ ಬಾಳುತ್ತಿದ್ದಾಳೆ. ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ಜೀವನಸಾಗಿಸಿ ನಿವೃತ್ತಿ ಹೊಂದಿದ್ದಾಳೆ. ಅವಳ ವಯಸ್ಸು ಈಗ ೬೬. ಮೂರು ಮಕ್ಕಳ ತಾಯಿ. ಎರಡು ಗಂಡು-ಮಿಲಿಂದ ಹಾಗೂ ಮಕರಂದ. ಚೊಚ್ಚಲ ಮಗು ಹೆಣ್ಣು-ಸ್ಮಿತಾ.

೧೧ ಕನಸಿನ ಕಥೆ

೧

“ಮಗಳೆ ಮಂಗಳೆ, ಬಾರೆ ಕೇಳು ಕಥೆಯ
ಹರುಷವೀಯುವದು ಪರಿಹರಿಸಿ ವ್ಯಥೆಯ
ಬಿಡು ಪಾರಿಜಾತ ಹೂ ಆರಿಸುವದ
ಕೂತ ಪಾತರಗಿತ್ತಿ ಹಾರಿಸುವದ
ಪೋಣಿಸುವೆಯಂತೆ ಆಮೇಲೆ ಮಾಲೆ
ಇಡು ಬಕುಳಗಳನು, ಬಾ ಇತ್ತ ಬಾಲೆ.”

೨

“ಏನಣ್ಣ! ನಿನ್ನ ಕಥೆ ಇಷ್ಟು ಮುದ್ದೆ?
ಈ ಕತೆಯ ಕೇಳುತಿರೆ ಬರದೆ ನಿದ್ದೆ?
ಕತೆಯು ಚಿಕ್ಕದೆ, ಹರಟೆಯಂತೆ ಉದ್ದೆ?”
“ಬಾರೆ ಹರಟೆಯ ಮಲ್ಲಿ, ಕತೆಯು ಮುದ್ದು:
ಹರಟೆಯಂತಲ್ಲ ಇದು ಉದ್ದೊ ಉದ್ದು:
ಬಹಳ ಚೊಕ್ಕದು, ನಿನ್ನ ನಗೆಯಂತೆ ಇದ್ದು-”

೩

“ಬೆಳಗು ನಾ ಹೋಗಿದ್ದೆ ಯಕ್ಷಲೋಕಕ್ಕೆ
ದುಃಖ ಅಲ್ಲಿಲ್ಲ, ಇಲ್ಲೆಡೆಯು ಶೋಕಕ್ಕೆ
ಅಲ್ಲಿ ಬರಿ ಹಾಸ ಬರಿ ಆಟ ಪಾಟ
ಏನು ಬಣ್ಣಸಲಿ ಒಂದೊಂದು ನೋಟ!”
“ಕುಣಿಕುಣಿದೆ ಅಲ್ಲಿ ಜನ ಕೆಲಸ ಮಾಡುವರು
ಮಾತನಾಡುತ್ತಿರಲು ಹಾಗೆ ಹಾಡುವರು”

೪

“ನೀನೇನ ಮಾಡಿದೆ, ಅದನು ನೋಡಿ
ಅಣ್ಣ ಕುಣಿದೆಯೆ ಹಾಡಿ ಅವರ ಕೂಡಿ
ನಿನ್ನ ಕವಿತೆಯ ಹೇಳಿ ಅದರ ಜೋಡಿ?”

೫

“ಇಲ್ಲಕ್ಕ, ಏನಗಿಲ್ಲಿಯರಿವೆ ಇರಲಿಲ್ಲ
ಆ ನೋಟದಲಿ ಬೇರೆ ಪರಿವೆ ಇರಲಿಲ್ಲ
ಏನು ಬಳ್ಳಿಗಳಲ್ಲಿ! ಏನು ಹೂವುಗಳು!
ಎಂಥ ಹಳ್ಳಗಳು! ಎಂಥೆಂಥ ಠಾವುಗಳು!”

೬
“ಅಲ್ಲಿ ಗಿಳಿ-ಹಿಂಡು ಹಾರಾಡುತಿತ್ತು
ಹಸುಗೂಸಿನಂತೆ ಚೀರಾಡುತಿತ್ತು
ಜೇಡ-ಬಲೆಯಲಿ ಉಯ್ಯಲಾಡುತಿತ್ತು.”
೭
“ಮೈ ಹಸಿರು ಕೆಂಚೂಚು ಕರಿಯ ಕೊರಳು
ಪಚ್ಚೆ ಮಾಣಿಕ, ಕೆಚ್ಚ ನೀಲಹರಳು
ದೊಡ್ಡವಿರಲಿಲ್ಲ ಅವು ಈಟು ಈಟು
ಕಣ್ಣ ಪಾಪೆಯ ನೆರಳಿನಂತೆ ಥಾಟು
ಕೆಲವು ಕದಲೆಯ ಮಾಟ, ಮಾಮಿಡಿಯ ಮಾಟ
ಚಿತ್ರದಂತಿತ್ತು ಜೀವಂತ ಆಟ.”
೮
“ಅವುಗಳನು ನಾ ಕಂಡು ಹಿಡಿಯ ಹೋದೆ
ಹಿಡಿಹಿಡಿಯುತಿರಲು ನಾ ಹುಡುಗನಾದೆ
ನನ್ನ ಕೈಯೊಳಗಿತ್ತು ಬಾಲಬೋಧೆ.”
೯
“ಮತ್ತೆ ಬೇರೆ ಹಕ್ಕಿ ಏನು ಚಿತ್ರ
ರೆಕ್ಕೆ ಮೂಡಿದ ಹಾಗೆ ಸ್ನೇಹಿತರ ಪತ್ರ
ಒಳಗಿರುವ ಭಾವಗಳ ಬಣ್ಣಮೂಡಿತ್ತು
ರಸ ಸರಸವಾಡುವೊಲು ಜೀವಗೂಡಿತ್ತು”
೧೦
“ಹೀಗೆಂದರೇನಣ್ಣ ಏನು ಆಗಿತ್ತೇ ?
ಮೊದಲೇನು ಹೆಣದಂತೆ ಜೀವ ಹೋಗಿತ್ತೇ ?”
೧೧
“ಒಳಿತನ್ನು ನನ್ನ ಬಂಗಾರಮಣಿ ಗಿಣಿಯೇ !
ನಿನ್ನ ಮಾತಿಗೆ ನನ್ನ ಮಾತು ಅಣಿಯೇ ?”
೧೨
“ಏಳು ಬಣ್ಣದ ನಾದಿದಂತಿತ್ತು ಹಕ್ಕಿ
ಜೀವ-ನಾದಕೆ ಮೂಡಿದಂತೆ ರೆಕ್ಕೆ
ಏಕೆ ಚಿನ್ನಾ, ನಡುವೆ ಖಿಕ್ಕೆಂದು ನಕ್ಕಿ ?
ಏಕೆ ನೋಡುವೆ ಹೀಗೆ ಕಕ್ಕಾವಿಕ್ಕಿ ?”

೧೩
“ಮುಂದೆ ಹಾರಲಿ ಹಕ್ಕಿ ರೆಕ್ಕೆಯಿಕ್ಕಿ
ಕತೆಯ ಕುಂಟುತ್ತಲಿದೆ ಎಲ್ಲೊ ಸಿಕ್ಕಿ”
೧೪
“ಹೌದು, ಆ ಹಕ್ಕಿಯನು ಹಿಡಿಯಹೋದೆ
ಹೇಗೆ ಹಿಡಿಯುವದೆಂದು ತಿಳಿಯದಾದೆ
ಏನದರ ಹಾರಾಟ ಏನು ಚೆಲ್ಲಾಟ
ಗರಿಯ ಅಲುಗಾಟ ಕುಲುಕಾಟ ಮಾಟ!”
೧೫
“ಆದರಯ್ಯೋ! ಅಲ್ಲು ಬಲೆಯು ಒಟ್ಟಿತ್ತು.
ಜೇಡುಹುಳುವಿನ ಕೃತಿಗೆ ಜುರುಜುಗಟ್ಟಿತ್ತು.
೧೬
“ಹಿಡಿವ ಆಸೆಗೆ ಹಕ್ಕಿ ನುಗಿಸಿದೆನು ಒಳಗೆ
ಅದುವು ತಪ್ಪಿಸಲಿಕ್ಕೆ ನುಗ್ಗಿ ಬಳಿಗೆ
ಸಿಕ್ಕಿಕೊಂಡಿತು ಬಲೆಯ ಎಳೆಗಳಿಗೆ
ಕಂಡಿತಾವದೊ ಜೀವದಾಸೆಯಂತೆ
ಮಾಸ ಮುಸುಕಿರುವಂಥ ಕೂಸಿನಂತೆ.”
೧೭
“ನನ್ನ ಕೈಹಕ್ಕಿ ಮಟವಾಯವಾಗಿ
ನಿನ್ನ ತೊಡೆಯಲ್ಲಿತ್ತು ನೀನೆ ತಾಯಾಗಿ.”
೧೮
“ನನ್ನ ಕೂಸಾಗಿತ್ತೆ, ತಾಯಿ, ಅಣ್ಣ
ಎಷ್ಟು ನೊಂದಿತೊ ಪಾಪ ನನ್ನ ಚಿನ್ನ!”
೧೯
“ತಾಯಾಗಿ ಹಾಯಾಗಿ ತಾನೆ ಆಡುತ್ತ
ನೀನು ಲೀಲೆಯೊಳಿದ್ದ ಮಗುವ ನೋಡುತ್ತ
ಆಗ ನಿನ್ನಾ ರೂಪ ಏನು ರೂಪ!
ರಾಣಿ ಎನಬಹುದಾಗಿತ್ತು ರಾಜ ಭೂಪ.”
೨೦
“ನಿನ್ನ ರೂಪಕೆ ತಕ್ಕ ನಿನ್ನ ಮಗುವು
ಸುಖದ ಮುಖದೊಳಗಿಳ್ಗಿ ಬಿದ್ದಂತೆ ನಗುವು
ಮುಖ ಮುದ್ದು, ತುಟಿ ಮುದ್ದು ಗಲ್ಲ ಮುದ್ದು
ಕದುಳು ಹಣೆ ಕಣ್ ಮುದ್ದು, ಎಲ್ಲ ಮುದ್ದು.”

೨೧
''ನಿನಗಿಂತಲೂ ನಿನ್ನ ಕೂಸೆ ಮುದ್ದು
ಎನುವಂತೆ ನಿಂತಿತ್ತು ನಿನ್ನನೊದ್ದು-
ಹೀಗೆನ್ನುವಾಗ ಮಂಗಲೆ ಬಂದು ಎದ್ದು
ನನ್ನ ಬೆನ್ನಿಗೆ ಕೊಡುವಳೇನೊ ಗುದ್ದು
ಎಂದೆ, ಕೆನ್ನೆಗೆ ಕೊಟ್ಟಳೊಂದು ಮುದ್ದು.''
೨೨
''ಮೊದಲಾಡಿ ತೊದಲಾಡಿ ತೆರೆದು ಬಾಯಿಯನು
ಆ ಕೂಸು ಕರೆದಿತ್ತು ನನ್ನ ತಾಯಿಯನು
ಆ ತಾಯಿ ಎಲ್ಲಿಹಳೊ ಇನ್ನುವರೆಗು
ಎನುತ ತಡಕಾಡುತ್ತ ನಿದ್ದೆವರೆಗು....''
೨೩
''ಆಹಾ ಏನಿದು! ಎನುತ ನಾನು ಎದ್ದೆ
ನಿನಗಾಗ ಸಕ್ಕರೆಜೊಂಪುನಿದ್ದೆ
ನಿನಗಾಗಿ ಈ ಕತೆಯ ನೆನಪು ಇಟ್ಟೆ
ಹೇಳುವಾಗಲೆ ಮಾತು ಬಗಿದು ಬಿಟ್ಟೆ.''
೨೪
''ನನ್ನ ಮಾತಾಗದಿರಲದಕೆ ಬಲೆಯು
ಹಿಡಿವ ಆಟವು ಆಗದಿರಲಿ ಕೊಲೆಯು
ಒಡಲ ನೂಲಿನ ಮೇಲೆ ಬಿದ್ದ ಇಬ್ಬನಿಯು
ಎಂಬಂತೆ ಮಿನುಗುತಿರಲೀ ಕಥಾಮಣಿಯು.''
೨೫
''ಕಥೆ ಆಯಿತೇ ಅಣ್ಣ, ಬಹಳ ಸಣ್ಣ
ಕಥೆಯ ಮೈಗಿಂತ ಮಿಗಿಲಿದರ ಬಣ್ಣ.''

- ರಚನೆ : ಬುಧವಾರ, ೧೨-೮-೧೯೪೨

ಭಾವ : ಮಗಳು ಮಂಗಲೆಯನ್ನು ಕುರಿತು ರಚಿಸಿದ ಸ್ವಗತ ಸಂವಾದದ ನೀಳ್ಗವನ. ಕನಸಿನ ಕಥೆಯು ನಿಜವಾಗಿಯೂ ಕಂಡ ಕನಸಿನ ಕಥೆಯಾಗಿದೆ. ಕನಸಿನ ಅರ್ಥಕ್ಕಿಂತ ಕನಸಿನ ರೀತಿ ರಮ್ಯವಾಗಿ ತೋರಿತು. ರಹಸ್ಯ ನನಗೆ ಇನ್ನೂ ಗೂಢ.

ಶಬ್ದಾರ್ಥ : ಸಕ್ಕರೆ ಜೊಂಪು ನಿದ್ದೆ=ಬೆಳಗಿನ ಜಾವದ ಸುಖನಿದ್ರೆ.

ವಿಶೇಷ : ನುಡಿ ೮ : ೧೯೪೪ ರಲ್ಲಿ ಕಂಡ ಕನಸು. ೩೨ ವರ್ಷ ಬೆಳೆದು ''ಬಾಲ ಬೋಧೆ''ಯಾಗಿ ೧೯೭೬ರಲ್ಲಿ ಪೂರ್ಣಗೊಂಡು, ೧೯೮೩ ರಲ್ಲಿ ಪ್ರಕಟವಾದ ಕವನ ಸಂಗ್ರಹದ ಹೆಸರು.

೧೨ ಸಂಜೀಯ ಜಾವಿಗೆ

೧

ಮಂಗಲೆಯೊಂದಿಗೆ। ಹಿಗ್ಗಾಗ್ಯುತ್ತ ತಂದೆಗೆ॥
ಕುಣಸ್ಯಾಡಿ ಕೂಸಿಗೆ। ಅರಳಿಸಿ ಆಸೆಗೆ॥
ರಾಗದ ಸಾಟಿಗೆ। ತೂಗ್ಯಾಡೊ ಧಾಟಿಗೆ॥
ಒಲಿದಾಡೊ ರೀತಿಗೆ। ಹಾಡ್ಯಾನೊ ಗೀತಿಗೆ॥
ಸಂಜೀಯ ಜಾವಿಗೆ। ಹೊರಟೀದಿ ಬಾವಿಗೆ॥

೨

ಸಂಜೀಯ ಜಾವಿಗೆ। ಹೊರಟೀದಿ ಬಾವಿಗೆ॥
ಕಿರಗೀಯ ನೀರಿಗೆ। ಒದೆಯೂತ ದಾರಿಗೆ॥
ಗೆಜ್ಜೀಯು ಗೆಜ್ಜಿಗೆ। ತಾಕ್ಯಾವ ಹೆಜ್ಜಿಗೆ॥
ಏನಾರ ನಡಿಗೆ। ಯಾವೂರ ಹುಡಿಗೆ॥
ಸಂಜೀಯ ಜಾವಿಗೆ। ಹೊರಟಾಳ ಬಾವಿಗೆ

೩

ಎರಡೂನು ಸಾಲಿಗೆ। ಹಾದ್ಯುದ್ದ ಬೇಲಿಗೆ॥
ಗುಲಬಾಕ್ಷಿ-ಮಲ್ಲಿಗೆ। ಕೇಳ್ಯಾವೊ ಕಲ್ಲಿಗೆ॥
"ಕಳಿಸೋದೆ ನೀರಿಗೆ। ಇಂಥ ಸುಕುಮಾರಿಗೆ॥
ಚ್ಯಾಚಾವಂಗಾಲಿಗೆ। ಮುಚ್ಚಂಜಿ ನಾಲಿಗೆ" ॥
ಸಂಜೀಯ ಜಾವಿಗೆ। ಬಂದ್ಯಲ್ಲ ಬಾವಿಗೆ॥

೪

ಮಾತೀಗು ಆಚೆಗೆ। ಮೀರಿದ್ದ ನಾಚಿಗೆ॥
ಮುಸುಕ್ಯಾವ ಹೂವಿಗೆ। ಬಂದೀಯೆ ಬಾವಿಗೆ॥
ಗಿಲುಕೆಂಬೊ ಬಳಿಗೆ। ಕೆಲಸೊಂದು ಗಳಿಗೆ॥
ಗೆಳತೇರ ಒಂದಿಗೆ । ಸೇದಿದೆ ಬಿಂದಿಗೆ॥
ಸಂಜೀಯ ಜಾವಿಗೆ। ಬಂದೀಯೆ ಬಾವಿಗೆ॥

೫

ಮೂಗೀನ ನೇರಿಗೆ। ಹೊರಳೀದೆ ಊರಿಗೆ॥
ತಲಿವ್ಯಾಲೆ ಬಿಂದಿಗೆ। ಕಾಲಾಗ ಅಂದಿಗೆ॥
ತುಂ ತುಮುಕು ತುಂಬಿದೆ। ಬಿಂದೀಗೆ ಅಂತಿದೆ॥
ಝುಣ್ ಝುಣ ಅಂದಿಗೆ। ಅಂದಾವ ಹೊಂದಿಗೆ॥
ಸಂಜೀಯ ಜಾವಿಗೆ। ಹೋಗಿದ್ದೆ ಬಾವಿಗೆ॥

೬

ಒಂದೇಸೆ ಜಾರಿಗೆ। ಜೊದೇ ಸೀ-ನೀರಿಗೆ॥
ಬೆವರೀನ ಸಾರಿಗೆ। ತಂದೀವಿ ಯಾರಿಗೆ॥
ಇಬ್ಬನಿ ಹೂವಿಗೆ। ನಸುಕೀನ ಜಾವಿಗೆ॥
ಮುತ್ತ್ಹನಿ ಮಾರಿಗೆ। ಮುತ್ತ್ಯಾವೊ ಸಾರಿಗೆ॥
ಸಂಜೀಯ ಜಾವಿಗೆ। ಹೋಗಿಯು ಬಾವಿಗೆ॥

೭

ಕೆಲಸಾನ ಆಟಿಗೆ। ಮಾಡೂವ ಸೂಟಿಗೆ॥
ಹಸನಾದ ಧರತಿಗೆ। ಮೆಚ್ಚಿದೆ ಗರತಿಗೆ॥
ಕುಣಿಸಿದೆ ಇಂದಿಗೆ। ಕಣ್ಬಿಟ್ಟ ಮಂದಿಗೆ॥
ನೀವಾಳಿ ದಿಟ್ಟಗೆ। ಕಣ್ಣೆಲ್ಲ ಒಟ್ಟಗೆ॥
ಸಂಜೀಯ ಜಾವಿಗೆ। ಹೋಗಿದ್ದ್ಯೆ ಬಾವಿಗೆ॥


೮

ಮಂಗಲೆಯೊಂದಿಗೆ। ಹಿಗ್ಗಾಯ್ತು ತಂದೆಗೆ॥
ಕುಣಿಸ್ಯಾಡಿ ಕೂಸಿಗೆ। ಅರಳಿಸಿ ಆಸೆಗೆ॥
ರಾಗದ ಸಾಟಿಗೆ। ತೂಗ್ಯಾಡೊ ಧಾಟಿಗೆ॥
ಒಲಿದಾಡೊ ರೀತಿಗೆ। ಹಾಡ್ಯಾನ ಗೀತಿಗೆ॥
ಸಂಜೀಯ ಜಾವಿಗೆ। ಹೊರಟೀದಿ ಬಾವಿಗೆ॥

ಭಾವ : ಮಗಳು-ಮಂಗಲೆಯನ್ನು [illegible] ಭಾವ ತಂದೆಗೂ ಹೊಳೆಯುವಂಥ ಭಾವ ಇದು. ನೀರನು [illegible] ಸೈವ ಅವಳ ಸುತ್ತಿರಲಿ ಎಂದು ಆಶೀರ್ವದಿಸುತಿದೆ ಈ [illegible]

ಶಬ್ದಾರ್ಥ : ಕಿರಗೀಯು=ಚಿಕ್ಕ ಹುಡುಗಿಯು. ಚಿಕ್ಕ [illegible] ಅಂದುಗೆ-ಅಂದುಗೆ=ಕಾಲಿನ ಕಡಗ, ರುಳಿ. ಹಸನಾದ ಧರತಿ=ಸ್ವಚ್ಛವಾದ ರೀತಿ. ಗರತಿ=ಗೃಹಿಣಿ, ಪತಿವ್ರತೆ [illegible] ನಿವಾಳಿ=ದೃಷ್ಟಿದೋಷ ತೆಗೆಯುವುದು.

ವಿಶೇಷ : ನುಡಿ-೫ 'ತಲಿಸ್ಯಾಲೆ ಬಂದಿಗೆ' ಎಂಬುದು ೧೯೬೪ರಲ್ಲಿ ಮಂಗಲೆ ಗೋದಾವರಿಯಿಂದ ನೀರ [illegible]



ಭಾಗ - ೨

ಗಣ್ಯವ್ಯಕ್ತಿ ಗೀತಗಳು

ಗಂಗಾವತರಣ - ಗಣ್ಯವ್ಯಕ್ತಿ ಗೀತಗಳು

ಈ ವಿಭಾಗದಲ್ಲಿ ಐದು ಕವನಗಳು - ಬೇಂದ್ರೆಯವರ ಒಲವಿನ ಪ್ರತಿನಿಧಿಗಳು. ಬುದ್ಧನ ರಾಜ್ಯತ್ಯಾಗ ಹಾಗೂ ಮಹಾತ್ಮಾಗಾಂಧಿಯವರ ಹಿಂಸಾ ತ್ಯಾಗ ಅತ್ಯಂತ ಮಹತ್ತ್ವದ ಘಟನೆಗಳು. ಐಹಿಕ ಜೀವನವನ್ನು ತ್ಯಜಿಸಿದ ಬುದ್ಧನಿಗೆ-ಬೋಧಿವೃಕ್ಷ ಜ್ಞಾನ ನೀಡಿತು. ಪ್ರತಿವ್ಯಕ್ತಿ ಬುದ್ಧನ ವ್ಯಕ್ತಿತ್ವಕ್ಕೆ ತನ್ನ ಹೃದಯದಲ್ಲಿ ಸ್ಥಾನಕೊಟ್ಟರೆ, ಮಾನವ ಜೀವನವೇ ಬದಲಾದೀತು ಎಂಬುದರಲ್ಲಿ ಬೇಂದ್ರೆಯವರಿಗೆ ವಿಶ್ವಾಸ.

ಭಾರತಕ್ಕೆ ಸ್ವಾತಂತ್ರ್ಯ ಲಭಿಸುವಂತೆ ಮಾಡಿದ ಗಾಂಧಿಯವರ ಚಿತ್ರ ಕಂಡು ಒಡಮೂಡಿದ ಗೌರವಭಾವ ಕವನವಾಗಿದೆ. ಇದು ಅಷ್ಟಷಟ್ಪದಿ ಛಂದಸ್ಸಿನಲ್ಲಿರುವಂತೆ ಆದಿಕವಿ ಪಂಪ ಮತ್ತು ನವೋದಯ ಕಾವ್ಯದ ಕಾರಣ ಕವಿ ಬಿ. ಎಂ. ಶ್ರೀ. ಕುರಿತೂ ಅಷ್ಟಷಟ್ಪದಿಗಳೇ ಇವೆ. ಇವುಗಳಲ್ಲಿ, ಕಿರಿದರಲ್ಲಿ ಹಿರಿಯ ವ್ಯಕ್ತಿತ್ವ ಕಂಡರಿಸಿದ್ದಾರೆ ಬೇಂದ್ರೆ, ಪಂಪ ಹಾಗೂ ಕನ್ನಡದ ಕಣ್ವ-ಶ್ರೀ ಇಬ್ಬರೂ ಅನೇಕ ಕವಿಗಳಿಗೆ ವಿವಿಧ ಪ್ರೇರಣೆ ಕೊಟ್ಟವರು. "ತಂಗಿ ಜಾನಕಮ್ಮ" - ಷಟ್ಪದಿ ಛಂದಸ್ಸಿನ ಕವನ. ಮಹಿಳಾ ಕವಯಿತ್ರಿಯರಲ್ಲಿ ಬೇಂದ್ರೆ ಕಂಡ ಹಿರಿಮೆ ಇಲ್ಲಿದೆ. ಗುಣಗ್ರಾಹಕತೆಯೆ ಈ ವಿಭಾಗದ ಸಾರ.

- ಸಂ.

೧೩ ತಂಗಿ ಜಾನಕಮ್ಮಾ

೧

ತಂಗಿ ಜಾನಕಿ ನಿನ್ನ
ವೈದೇಹದೊಲವಿನಲಿ
ಓಲೆ ಬಂದಿತು ಒಂದು, ಇತ್ತ ತೇಲಿ
ಯಾರಿಗಾರೋ ಎನುವ
ನಾಸ್ತಿಕತೆಯನು ನೂಕಿ
ದಾಟ ದಿಕ್ಕಾಲಗಳ ಸುತ್ತು ಬೇಲಿ.

೨

ಕವಿಯು ಮಾನಸಪುತ್ರ
ಅವನು ಆಗಸದೇಹಿ
ಮಾತಿನಲೆ ಮೂಡುವನು ಭಾವಜೀವಿ.
ಮೈಯಾಚೆ ಉಸಿರಾಚೆ
ಬಗೆಯ ಬಣ್ಣಗಳಾಚೆ
ಅವನ ಹೂವರಳುವದು ಭಾವದೇವಿ.

೩

ನೂರು ತಂಗಿಯರ ನಿ-
ರ್ನೆರದ ನೇಹದಿ ಮಿಂದು
ಮಿಂಚಿನಾಚೆಯ ಬೆಳಕ ಬಯಸಿ ಬಳೆದು
'ದೋಷರಾಹಿತ್ಯದಾ
ಕಲ್ಪನಾ ರಾಜ್ಯದೊಳು
ಸಗ್ಗದೂಟವನುಣುವ ರೂಪು ತಳೆದು.'

೪

ಅದನು ನೀ ಕಂಡವಳು
ಬೇರೆ ಕಾಣಿಕೆಯೇಕೆ ?
ಕ್ಷೀರಸಾಗರದಲೆಯ ತಲೆಯ ಪೆರೆಯೇ !
ಪೂರ್ಣವಾ ದೃಷ್ಟಿಯಲಿ
ತೆರೆದೊಂದು ಸೃಷ್ಟಿಯಲಿ
ನಿನ್ನನಂದನಕೇನು ಮುಚ್ಚುಮರೆಯೇ ?

೫

ಝೇಂಕೃತದ ಸುಳಿ ಹಿಡಿದು
ಅಂತರಂಗಕೆ ನುಗ್ಗು
ಕಮಲವನವಲ್ಲಿ ನಿಃಸ್ಸೀಮವಹುದು
ಭಾವಶಿಖರಗಳಲ್ಲೆ
ಜೀವಪುರ ನೆಲಸಿಹುದು
ಅದನು ನೀ ವೈದೇಹಿ ಕಾಣಬಹುದು.

೬

ವಿಷಯ ವಿಷ ವಿಷಮವನು
ತಳ್ಳಿ ಪದತಲದಾಚೆ
ಸಪ್ತಸ್ವರ್ಗವ ಸೀಳಿ ಮೇಲೆ ಹಾರು
ಅಲ್ಲಿರುವ ನಲಿವೊಲವು
ಇಲ್ಲಿರುವ ಬಲ ಚೆಲುವು
ಮಿಕ್ಕಿ ಸೂಸುವ ಹಾಗೆ ಜಗಕೆ ಸಾರು.

- ರಚನೆ : ೨೦-೧-೧೯೪೫

ಭಾವ : 'ಜಾನಕಮ್ಮ' ಈಗಾಗಲೇ ದಿವಂಗತರಾದರು. ಅವರ ಕವನ ಸಂಗ್ರಹ ಪ್ರಸಿದ್ಧವಾಗಿದೆ. ಅವರು ಬೇಂದ್ರೆಯವರನ್ನು ಕುರಿತು ಬರೆದ ಒಂದು ಕವನಕ್ಕೆ ಇದು ಬೇಂದ್ರೆಯವರು ಬರೆದ ಉತ್ತರ ರೂಪದ ಕವನ.

ವಿಶೇಷ : ಬೇಂದ್ರೆಯವರ ಸಾಹಿತ್ಯದೃಷ್ಟಿ ಎಷ್ಟು ವಿಶಾಲವಾಗಿತ್ತು ಎಂಬುದು ಈ ಹರಕೆಯಲ್ಲಿ ವ್ಯಕ್ತವಾಗಿದೆ. ಈ ಕವನದ ಛಂದಸ್ಸು-ಕುಸುಮ ಷಟ್ಪದಿ.



೧೪ ಸಂಭಾವನೆ

೧

ಕನ್ನಡದ ಶ್ರೀಕಂಠದಿಂದ ಸಾರಿದ ವಾಣಿ
ಅಂದು ವೀಣಾಪಾಣಿಯಾಗಿ ಬಾಜಿಸಲಾಗಿ
ಆ ರಾಗವೇ ಜನದ ಅನುರಾಗವೆನೆ ಮಾಗಿ
ರಾರಾಜಿಸುವದಿಂದು ರಾಷ್ಟ್ರಹೃದಯದ ರಾಣಿ
ಆ ಪ್ರಗಾಥದ ವಾಣಿ ನಾಡನೌಕೆಯ ನೂಗಿ
ಧ್ರುವಪ್ರವಾಸಕೆ ದಿಕ್ಕುಗಾಣಿಸುವ ಚುಕ್ಕಾಣಿ-
ಯಾಗೆಯದು ಹೇಳುವೊಬ್ಬೊಬ್ಬ ಕನ್ನಡ ಮಾಣಿ
ಮೆರೆವನಗೊ, ನಾಡನಂಬುಗೆಯ ಅಂಬಿಗನಾಗಿ.

೨

ಇಂಥ ಉಜ್ವಲ ಚಿತ್ರದೊಂದು ಕೀರ್ತಿಪ್ರಭೆಗೆ
ಕಳೆಕಟ್ಟಬೇಡವೇ ಶ್ಯಾಮಸೀಮಾರೇಖೆ
ಎನೆ, ಅದರ ಹಿಂದೆ ನೆಳಲಾಗಿ ನೆಲಸಿದೆ ಛಾಯೆ
'ಇದುವೆ ಸಂಭಾವನೆಯೆ ನಿನ್ನ ಸೇವೆಗೆ ತಾಯೆ?'
ಎಂಬ ಪ್ರಶ್ನೆಗೆ ಬಾನದನಿಯು ಸಾರಿತು ಸಭೆಗೆ
'ವಿಷ ನುಂಗೆ ಶ್ರೀಕಂಠ, ಬೇರೆ ಭೂಷಣ ಬೇಕೆ?'

- ರಚನೆ : ೧೯೪೫

ಭಾವ : ''ಸಂಭಾವನೆ''ಯು ಕನ್ನಡದ ಕಣ್ವರೆಂದೆನಿಸಿಕೊಂಡ ಬಿ. ಎಂ. ಶ್ರೀಕಂಠಯ್ಯನವರ (ಜೀವಿತಕಾಲ : ೩-೧-೧೮೮೪ ರಿಂದ ೫-೧-೧೯೪೬) ಅಭಿನಂದನ ಗಂಥಕ್ಕಾಗಿ ಬರೆದದ್ದು.

ಶಬ್ದಾರ್ಥ : ಚುಕ್ಕಾಣಿ=ಹಡಗು ಅಥವಾ ವಿಮಾನದ ದಿಕ್ಕನ್ನು ಬದಲಿಸಲು ಸಹಾಯ ಮಾಡುವ ಒಂದು ಸಾಧನ. ಮಾಣಿ=ವಟು, ಶಿಷ್ಯ.

೧೫ ಪಂಪನಿಗೆ


೧

ಶ್ರೀಲಲಿತ-ಮಾಧುರ್ಯ-ಸೌಂದರ್ಯ-ಗಾಂಭೀರ್ಯ
ದೆಸಕದಿಂದೆಸಗಿ ಕಾವ್ಯ ಪ್ರೌಢಿಯಲಿ ಮೆರೆದು
ನಿನ್ನ ಸಾಸಿರ ಕರದ ಕರ ಚೆಲುವಿನಲಿ ಬರೆದು
ಕನ್ನಡದ ಸವಿನುಡಿಯ ಬಾನ ಬೆಳಗುವ ಸೂರ್ಯ
ಈಗಳೂ ನಡೆದಿಹುದು ಕವಿಯೆ ನಡೆಸಿದ ಕಾರ್ಯ
ನಿನ್ನ ನವರಸದ ತವನಿಧಿ ಜಲಧಿಯೊಲು ಮೊರೆದು
ಸುಮನಸರ ಸೌಮನಸ್ಯದ ಸುಮನಗಳ ಕರೆದು
ಇಂದಿಗೂ ಮೊಳಗುತಿದೆ ದಿವ್ಯ ದುಂದುಭಿ ತೂರ್ಯ

೨

ಪಸರಿಸಿದ ಮಸಳಿಸಿದ ಮತ್ತೆ ಪಸರಿಸಲಿರುವ
ನಿನ್ನ ಪುಟವಹಸಾಜವಾದ ಪುಲಗಿರಿ ತಿರುಳು-
ಗನ್ನಡಕೆ ದೆಸೆದೆಸೆಯ ದೇಸಿಗನ್ನಡ ಬರುವ
ಒಸಗೆ ಬೀರಲಿ. ಅಚ್ಚಕೆಚ್ಚು ಕನ್ನಡ ಹುರುಳು
ಇಹ-ಪರ-ಮಹಾನುಭಾವ ವ್ಯಂಜನೆಗೆ ಸಾಕು
ಕನ್ನಡವು ಕನ್ನಡವ ಕನ್ನಡಿಸುತಿರಬೇಕು.


ಭಾವ : ಪಂಪನನ್ನು ಕುರಿತು ಬರೆದ ಈ ಸುನೀತ. ಅವನ ಸಹಸ್ರ ವಾರ್ಷಿಕದ ಉತ್ಸವದ ಕಾಲಕ್ಕೆ ಬರೆದದ್ದು.



೧೬ ಓ ರಾಜ್ಯಸಂನ್ಯಾಸಿ

ಓ ರಾಜ್ಯಸಂನ್ಯಾಸಿ, ಜನಗಹನ ವನವಾಸಿ
ನೀನು .ಪೌರಷವಂತನೆನಲೊ, ದೈವದ ಶರಣ !
ನಿನ್ನ ಕೀರ್ತಿಯ ಕಿರಣ ಸಾರಿ ಸತ್ತಿತು ಮರಣ.
ಏನು ನಿನ್ನಾ ಮಾರ್ಗ-ನಿನ್ನದೇ ಆ ದೇಸಿ.
ಅಪಜಯದ ಹೆಂಟೆಗಳನಿಟ್ಟು ಒಟ್ಟಿಗೆ ಸುಟ್ಟೆ
ನೀನು ಅಗಿಯದ ನರಕವಿಲ್ಲ, ಮುರಿಯದ ಕಟ್ಟೆ
ದಿತಿಯ ಸಂತತಿಯಿಂದ ಆಯ್ತು ಮೂರಾಬಟ್ಟೆ
ಅಲ್ಲಿಯೂ ನಿನ್ನ ವಿಜಯಸ್ತಂಭ ನೀ ನೆಟ್ಟೆ.
೨
ಆದರಿದು ಚಿತ್ರ, ಓಹೋ ಮರೆತೆ : ಈ ಮಾಯೆ
ಕನ್ನಡಕಗಳ ಹಿಂದೆ ಕಣ್ಣಿನಾಚೆಗೆ ಸಾಗಿ
ಗಗನ ಗಮನವಗೈವ ಆ ವಿದೇಹದ ಛಾಯೆ
ರೋಮರೋಮದಿ ಕಣ್ಣತೆರೆವ ಜೀವನ-ರೇಖೆ
ಇರಲು, ಬಣ್ಣಿಸಲೇಕೆ ? ಬೇರೆ ಮಾತೇ ಬೇಕೆ ?
ಚಿತ್ರಕನ ಕೃತಿಗಾಗಿ, ಸುಂದರಾಕೃತಿಗಾಗಿ.

ಭಾವ : ನನ್ನ ತರುಣ ಮಿತ್ರರು, ಕಲಾವಿದರೂ ಆದ ಶ್ರೀ ಎಸ್.ಎನ್. ಸ್ವಾಮಿ ತೆಗೆದ ಗಾಂಧಿಯವರ ಚಿತ್ರದೊಂದಿಗೆ ಜೊತೆಗೆ ಇರಲೆಂದು ಬರೆದ ಸುನೀತ, ಗಾಂಧಿಯವರ ವ್ಯಕ್ತಿತ್ವವನ್ನು ಒಡಮೂಡಿಸುವ ಚಿತ್ರ ಕೌಶಲ್ಯ ಕುರಿತು ಬರೆದ ಕವನ.






೧೭ ಬುದ್ಧ

೧

ಬುದ್ಧ ಬುದ್ಧ-
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ;
ಮಡದಿ ಮಗು ಮನೆ-ಮಾರು ರಾಜ್ಯ-ಗೀಜ್ಯ
ಹೊತ್ತಿರುವ ಉರಿಯಲ್ಲಿ ಆಯಿತಾಜ್ಯ
ಹಿಂದೆ ಬಿದ್ದವು ಎಲ್ಲೊ ಕುದುರೆ ಕಾಲಾಳು
ಬಿಚ್ಚಿ ಉದಿರಿತು ಎಲ್ಲೊ ಮನದ ಬಾಳು
ಹೊರಟ ಹೊರಟೇ ಹೊರಟ, ಹೊರಟನೆತ್ತೋ
ಸಾಹಸಿಯ ಗೊತ್ತುಗುರಿ ಅವಗು ಗೊತ್ತೋ !

೨

ಕಾಮ-ಕ್ರೋಧವ ದಾಟಿ, ಮದ-ಮತ್ಸರವ ತುಳಿದು
ಮೋಹ-ಲೋಭವ ಮೆಟ್ಟಿ ಅಡಿ ಕಿತ್ತಿ ಇಟ್ಟ,
ಇದೊ ತಗ್ಗು, ಅದೊ ಗುಡ್ಡ, ಅಗೊ ಮಲೆಯ ಬೆಟ್ಟ
ನೆಲ ತೆಳಗೆ ಬಿಟ್ಟ.



೩
ಏರಿದೇರಿದನೇರಿ ಗಾಳಿಗುದುರೆ ಸವಾರಿ
ಚಂದ್ರಕಿರಣವ ಮೀರಿ ಸೂರ್ಯ ಸೇರಿ
ಬೆಳಕನ್ನೆ ಹಿಂದೊಗೆದು ತಮದ ಬಸಿರನೆ ಬಗೆದು
ಅಸ್ಪರ್ಶ ಅವಕಾಶದಲ್ಲಿ ಇದ್ದ.
ಬುದ್ಧ-ಬುದ್ಧ-ಬುದ್ಧ
ಶಬ್ದ-ನಾದ-ಧ್ವನಿಯ ಸದ್ದ ಮೀರಿದ್ದ.
ಇಲ್ಲ ಎಂಬುವ ಕೊನೆಗೆ ಆತ್ಮ ಶುದ್ಧ
ಇದ್ದರೇನಿಲದಿದ್ದರೇನೆನಲು ಗೆದ್ದ.

೪
ಅಲ್ಲಿಂದ ಇಲ್ಲಿವರೆ ಹೊರಳಿ ನೋಡಿ
ಇದ್ದುದಿದ್ದಂತಿತ್ತು ಜನನ-ಮರಣದ ಜೋಡಿ
ಗೆದ್ದುದೇನೆಂದೆನುತ ಮರಳಿ ಜಿಗಿದ
ಭೂತಜಾತದ ಎದೆಯ ಸೀಳಿ ಸಿಗಿದ
ಅದೆ ತನ್ನ ಮನೆಯೆಂದು ಸಿದ್ಧ ಬಗೆದ.

೫

ಬುದ್ಧನೆಂಬುವ ಒಬ್ಬ ಎಂದೊ ಇದ್ದ
ಎನುವಂತೆ ಇಂದಿಗೂ ಇಲ್ಲೆ ಇಲ್ಲ
ಬುದ್ಧ ಹುಟ್ಟಿದ ಮೇಲೆ ಹಳೆ ಜಗವು ಸತ್ತು
ಇದ್ದು ಇಲ್ಲದ ಹಾಗೆ, ಹಾಗೆ ಇತ್ತು.
ಬುದ್ಧ ಸತ್ತನು ಎಂದು ಯಾರೆಂದರೂ
ಬುದ್ಧನ ಜಯಂತಿಗಿದೆ ಜಯವೆಂದಿಗೂ
ಬುದ್ಧನ ಸಮಾಧಿಯದು ಮಾನವನ ಹೃದಯ
ಅದುವೆ ಕಾಯುತ್ತಲಿದೆ ಕಲ್ಕಿ ಉದಯ.

- ರಚನೆ : ೧೩-೫-೧೯೪೯

ಭಾವ : ಬುದ್ಧನನ್ನು ಕುರಿತು, ವೈಶಾಖ ಪೂರ್ಣಿಮೆಯ ದಿನ ಒಂದು ಮೌನವಾರದಲ್ಲಿ ಬರೆದ ಕವನ. ಸಕಲ ಮಾನವ ಹೃದಯಾಂತರ್ಗತ ಅಸುಪ್ತ ಬೋಧವೇ ಅವನ ಅವತಾರದ ಕುರುಹು ಎಂಬ ಸಂವೇದನೆಯಲ್ಲಿ ಇದು ಅಂಕುರಿಸಿತು.

ಶಬ್ದಾರ್ಥ : ಆಜ್ಯ=ಕರಗಿದ ತುಪ್ಪ ಅಥವಾ ಎಣ್ಣೆ, ಹಾಲು ಮೊದಲಾದ ದ್ರವ್ಯ. ತಮ=ಕತ್ತಲೆ, ಅಜ್ಞಾನ. ಬಗೆದು=ಆಲೋಚಿಸಿ. ಸಿಗಿ=ಸೀಳು, ಕತ್ತರಿಸು.

ವಿಶೇಷ : ೧ನೆಯ ನುಡಿಯಲ್ಲಿ - ಹಳೆಯ ಗೌತಮ ಬುದ್ಧನ ವಾಚ್ಯವರ್ಣನೆ ಇದೆ.

೨ನೆಯ ನುಡಿಯಲ್ಲಿ - ಅವನು ಷಟ್‌ರಿಪುಗಳನ್ನು ಗೆದ್ದ ವರ್ಣನೆ ಇದೆ.

೩ನೆಯ ನುಡಿಯಲ್ಲಿ - ಅವನು ಒಂದು ದಿನ ರಾತ್ರಿ ರಾಜ್ಯವನ್ನು ತ್ಯಜಿಸಿ, ಬೊಲ್ಲ ಎಂಬ ಅಶ್ವವನ್ನೇರಿ ಅದೃಶ್ಯನಾಗಿ ಸಾಧಕ ಸಂನ್ಯಾಸಿಯಾದ ವಿವರ ಇದೆ.

೪ನೆಯ ನುಡಿಯಲ್ಲಿ - ಅವನು ಸಿದ್ಧ ಬುದ್ಧನಾದ, ಬೋಧಿ ವೃಕ್ಷದಡಿಯ ತಪಸ್ಸಿನಿಂದ ಜ್ಞಾನಿಯಾದ ಎಂದು ಸೂಚಿಸಲಾಗಿದೆ.

೫ನೆಯ ನುಡಿಯಲ್ಲಿ - ಹಳೆಯ ಬುದ್ಧ ಹೋದರೂ, ಅವನ ಸಮಾಧಿಯು ಪ್ರತಿಯೊಬ್ಬನ ಹೃದಯದಲ್ಲಿದೆ ಎಂದು ನಮೂದಿಸಿದ್ದು ಈ ಕವನದ ವಿಶೇಷ.

ಅಂದಿನ ಬುದ್ಧ ಬೊಲ್ಲ ಎಂಬ ಕುದುರೆ ಏರಿ ಹೋದ. ಇಂದಿನ ಬುದ್ಧ ಕಲ್ಕಿಯ ಅವತಾರ ತಾಳಿ ಹೊಸ ಕೃತಯುಗವನ್ನು ಪ್ರಾರಂಭಿಸಲು ಅಶ್ವ ಎಂಬ ವಾಹನವೇರಿ ಬರಬೇಕಾಗಿದೆ ಎಂಬ ಸೂಚನೆ ಇದೆ. ಎಲ್ಲರೂ ಮಲಗಿರಲು ಯಾವನು ಎಚ್ಚರಿದ್ದು, ಷಟ್ ರಿಪುಗಳನ್ನು ಗೆದ್ದು, ಅಜ್ಞಾನವನ್ನು ತೊಡೆದು, ಸುಜ್ಞಾನ ಪಡೆದು, ಅಹಂಕಾರ ಎಂಬ ಅಶ್ವವನ್ನು ಗೆದ್ದು, ಕೃತಯುಗದ ಅಶ್ವಾವತಾರಿ ಕಲ್ಕಿಯಂತೆ ಜೀವನವನ್ನು ಸಾಗಿಸುವನೋ ಅವನೇ ಆ ಆ ಕಾಲದ ಬುದ್ಧನಾಗಬಲ್ಲ ಎಂಬ ಸಂದೇಶ ಇಲ್ಲಿದೆ. ಈ ದೃಷ್ಟಿಯಿಂದ ಬುದ್ಧ-ಅಮರ.



ಭಾಗ - ಈ

ದೇಶ : ಸಮಾಜ ಕವನಗಳು


ಗಂಗಾವತರಣ - ದೇಶ : ಸಮಾಜ ಕವನಗಳು

ಈ ವಿಭಾಗದಲ್ಲಿ ಏಳು ಕವನ. ಕರ್ನಾಟಕದಲ್ಲಿ-ಧಾರವಾಡದಲ್ಲಿ ಬೆಳೆದ ಬೇಂದ್ರೆ, ಸೊಲ್ಲಾಪೂರಕ್ಕೆ ಉಪಜೀವನದ ನಿಮಿತ್ತ ಹೋದಾಗ, ಕನ್ನಡ ಭಾಷೆಯ ಐಕ್ಯ, ಕನ್ನಡಗರ ಐಕ್ಯ ಹಾಗೂ ಕರ್ನಾಟಕದ ಐಕ್ಯ ಪ್ರಚಾರ ಮಾಡಿದರು. ಮರಾಠಿಯ ಪ್ರಾಬಲ್ಯವಿದ್ದ ಸೊಲ್ಲಾಪೂರ-ಕರ್ಮಯೋಗಿ ಸಿದ್ಧರಾಮ ಹಾಗೂ ರೇವಣಸಿದ್ಧರ ಭೂಮಿ. ''ಕನ್ನಡಿಗರನ್ನು ಕರ್ನಾಟಕದ ನಿಂದೆ ಸಹಿಸಬೇಡಿರಿ'' ಎಂದು ಎಚ್ಚರಿಸದರು. ಹನ್ನೆರಡು ವರುಷದವರೆಗೆ ಈ ವ್ರತವನ್ನು ಬೇಂದ್ರೆ ಪಾಲಿಸಿದರು.

ಕನ್ನಡ ಪ್ರದೇಶ ಮತ್ತು ಕನ್ನಡ ಸಾಹಿತ್ಯದ ಶ್ರೀಮಂತಿಕೆ ಅರಿತು, ವಿಶ್ವತಾಳ ಕೆಡದಂತೆ ಬಾಳಬೇಕು. ಕರ್ನಾಟಕದ ಕೀರ್ತಿ ಭಾರತವನ್ನು ದಾಟಿ ಜಗತ್ತಿಗೆ ತಲುಪಿ ನಿಲ್ಲಬೇಕು ಎಂದು ಬೇಂದ್ರೆ ಹಾರೈಸಿದರು. ಕನ್ನಡಿಗಗೆ ''ನೀವು ಯಾರು?'' ಎಂದು ಪ್ರಶ್ನಿಸುವ ಪರಿಸ್ಥಿತಿ ಬರಬಾರದು ಎಂದು ಸೂಚಿಸಿದರು. ಮೊದಲಿನ ಮೂರೂ ಕವನ ಕನ್ನಡ ಪ್ರಜ್ಞೆ ಬೆಳೆಸಿದವು. ಗೋಕರ್ಣದ ಸಮುದ್ರದ ದಂಡೆ, ಸೂರ್ಯಾಸ್ತಕ್ಕೆ ಪ್ರಸಿದ್ಧ ಸಮುದ್ರದ ತೆರೆಗಳ ಜೀಕಾಟ ಬೇಂದ್ರೆಯವರಿಗೆ ಹಾಡು ಬರೆಯುವ ಪ್ರೇರಣೆ ಕೊಟ್ಟಿದೆ.

ಬಂದಿಕಾರಾ ಶ್ರಾವಣ - ಭಾರತದ ಸ್ವಾತಂತ್ರ್ಯಕ್ಕೆ ಕೊಟ್ಟ ಕರೆಯಾಗಿದೆ. ಆದುದರಿಂದ ಇದು ದೇಶಭಕ್ತಿ ಗೀತವಾಗಿದೆಯೆ ಹೊರತು ಮಾಸ ಮಹಾತ್ಮ್ಯ ವರ್ಣಿಸುವದಿಲ್ಲ. ೧೯೪೨ರ ಸ್ವಾತಂತ್ರ್ಯ ಸಂಗ್ರಾಮದ ''ಮಾಡು ಇಲ್ಲವೆ ಮಡಿ'' ಧೋರಣೆ ಈ ಕವನ ಸೃಷ್ಟಿಗೆ ಪ್ರೇರಣೆ. ರೇಶನ್ ಕಾಲದಲ್ಲಿ ಜನರಿಗೆ ಸರಿಯಾಗಿ ಅನ್ನ ಪೂರೈಕೆ ಆಗುತ್ತಿರಲಿಲ್ಲ. ಅಂಥ ಸಾಮಾಜಿಕ ಪರಿಸ್ಥಿತಿಯನ್ನು ಕುರಿತು ''ಅನ್ನ ಮುಚ್ಚಿ ಬಾಳಬೇಡಿರಿ'' ಎಂದು ವ್ಯಾಪಾರಸ್ತರನ್ನು ಎಚ್ಚರಿಸಿದ್ದಾರೆ. ೧೯೪೪ರ ಅಕ್ಟೋಬರದಿಂದ ಆರು ತಿಂಗಳ, ಆಸ್ಪತ್ರೆಯ ವಾಸ ಮಾಡಿದಾಗ - ರೋಗಿ ಮತ್ತು ನರ್ಸ ಸಂಬಂಧ ಕುರಿತು ರಚಿಸಿದ ಕವನ ಮಾರ್ಮಿಕವಾಗಿದೆ.

- ಸಂ.



೧೮ ಒಂದೇ ಕರ್ನಾಟಕ

ಒಂದೇ ಒಂದೇ ಒಂದೇ ಕರ್ನಾಟಕ ಒಂದೇ ! ॥ ಪಲ್ಲವಿ ॥

೧

ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ
ಜಗದೇಳಿಗೆಯಾಗುವದಿದೆ ಕರ್ನಾಟಕದಿಂದೆ
ಇಲ್ಲಿಯ ಜನ-ಮನ-ಭಾಷೆಯು ಕನ್ನಡವದು ಒಂದೇ
ಒಂದೇ ಜನವೂ ಒಂದೇ ಮನವೂ ಕನ್ನಡಿಗರು ಎಂದೇ
ಕುಲವೊಂದೇ ಸ್ಥಲವೊಂದೇ ನೀತಿಯ ನೆಲೆಯೊಂದೇ
ಹೀಗೆನ್ನದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ !
ಕನ್ನಡವೆಂದೂ ಒಪ್ಪದು ಕರ್ನಾಟಕ ನಿಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ

೨

ಕನ್ನಡ ಮಾತೇ ಮಾತೆಯು, ಕರ್ನಾಟಕ ಒಂದೇ
ಅದು ದೈವತ ಅದು ಜೀವಿತ ಒಪ್ಪಿಹೆವದುವೆಂದೇ
ನಮ್ಮದು ನಿಮ್ಮದು ಅವರದು ಈ ಆಸ್ತೀಪಾಸ್ತೀ.
ನಾಡಿನ ತಾಯಿಗೆ ಸೇರಿದೆ, ಬೇರೆಯ ಮನೆ ನಾಸ್ತೀ
ಕನ್ನಡ ಕಾಯಕದಲ್ಲಿಲ್ಲವು ಕಮ್ಮೀಜಾಸ್ತೀ ॥
ಇದನೊಪ್ಪದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ !
ಕರ್ನಾಟಕ ಹಿತ-ವಿಹಿತವು ಕನ್ನಡ-ಕುಲದಿಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ

೩

ಕನ್ನಡವೂ ಭಾರತವೂ ಜಗವೆಲ್ಲವು ಒಂದೇ
ತುಂಬಿದೆ ಕನ್ನಡ ಕುಲವನ್ನೊಪ್ಪುವ ಕುಲದಿಂದೇ
ಕನ್ನಡ ದೀಕ್ಷೆಯ ಹೊಂದಿದ ಪ್ರತಿಯೊಬ್ಬನು ಆರ್ಯ
ಕನ್ನಡ ತೇಜವು ಸಾರಲಿ ಕನ್ನಡಿಗರ ಕಾರ್ಯ
ಕನ್ನಡ ನಡೆ ಇರದವರೇ ಶೂದ್ರರು ಅನಿವಾರ್ಯ
ಇಂತರಿಯದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ !
ಉಗ್ಗಡಿಸಿರಿ ನಾಸ್ತಿಗೆ ಜಯ ಜಯ ಜಯ ಜಯವೆಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ !

– ರಚನೆ : ಸಪ್ಟೆಂಬರ ೧೯೩೮ರ 'ಜಯಂತಿ'ಯಲ್ಲಿ ಪ್ರಕಟ.

ಭಾವ : ಪರಿಹಾಸ ವಿನೋದ ಎಂಬಂತೆ ಬರೆದರೂ ಇಂದು ಅದು ಪರಮಾರ್ಥವಾಗಿ ನಿಂತಿದೆ.

ಶಬ್ದಾರ್ಥ : ನಾಸ್ತಿ=ಇಲ್ಲದಿರುವಿಕೆ, ಇರದೆ ಇರುವಿಕೆ.

ವಿಶೇಷ : ಕನ್ನಡದ ಅಭಿಮಾನ ಇಲ್ಲದವರು ಇಲ್ಲದಂತೆ ಆಗುವುದಕ್ಕೆ ಜಯಜಯಕಾರ ಘೋಷಣೆ ಮಾಡಲಾಗಿದೆ. ಕನ್ನಡ ಅಭಿಮಾನ ಇಲ್ಲದವರ ಸಂಖ್ಯೆ ಒಂದು ಮಹಾ ಆತಂಕ ಎಂಬ ಭಾವ ಇಲ್ಲಿದೆ. ಅಭಿಮಾನ ಇದ್ದವರು-ಆಸ್ತಿಕರು, ಅಭಿಮಾನ ಇಲ್ಲದವರು ನಾಸ್ತಿಕರು ಎಂಬ ಸೂತ್ರ ಸಾರಲಾಗಿದೆ. ಇದು ಈ ಕವನದ ಪರಮ+ಅರ್ಥ.

ಸ್ವಂತ ಆಸ್ತಿಯಾರದೂ ಇರಬಾರದು. ಎಲ್ಲರ ಆಸ್ತಿ ಕರ್ನಾಟಕದ್ದೇ ಎಂಬ ಭಾವ ಉದಯವಾಗಬೇಕು ಎಂಬುದು ಕವಿಯ ಆಶಯ. ೧೯೮೧ರಲ್ಲಿ ಬೇಂದ್ರೆಯವರು ಹೇಳಿದ್ದರು - Property Law=ಆಸ್ತಿ ಸಂಪತ್ತಿಯ ಕಾಯದೆ ಅನೈಕ್ಯ-ಒಡಕು-ಸ್ವಾರ್ಥ ಉದ್ದೀಪಿಸುತ್ತದೆ. ಆದ್ದರಿಂದ ಆಸ್ತಿ ಸಂಪತ್ತಿಯ ಕಾಯದೆಯ ರದ್ದತಿ ಆದಾಗ ದೇಶದ ಕಲ್ಯಾಣವಾದೀತು.

೧೯ ನೀವಾರಲಾ !

ನೀವಾರಲಾ ನೀವಾರಲಾ ನೀವಾರಲಾಽ
ಯಾರೋಽ ಯಾರೋಽ ॥ ಪಲ್ಲವಿ ॥
೧
ನೀವು ತುಳಿವೀ ತೊಡೆಗಳೋ
ನಿಮ್ಮೆಡೆಗಳೊ !
ನೀವು ಆಡುವ ಬಾಯಿಯೋ
ಅದೆ ತಾಯಿಯೋ !
ನೀವು ಅಪ್ಪುವ ತೋಳೊಳೇ
ನೀವು ಬದುಕುವ ಬಾಳೊಳೇ
ತಾಯಿ-ಎದೆ ತುಂಬಿರುವದಣ್ಣಾ
ಬರಿದೆ ಮರಗುವಿರೇತಕೆ
ಬನ್ನಿ ತಾಯಿಯ ಜೀತಕೆ
ಮೆಟ್ಟಿ ನಡೆದುದೆ ಕನ್ನಡ
ಮುಟ್ಟಿ ನುಡಿದುದೆ ಕನ್ನಡ
ಮಾಡಿರಯ್ಯಾ ಮಾಟವಾ
ಹೂಡಿರೋ ಹೊಸ ಆಟವಾ-
ನೀವಾರಲಾ ನೀವಾರಲಾ
ಯಾರೋಽ ಯಾರೋಽ..........

೨

ವರಯತೀಶ್ವರ ಸಂಗವೋ! ಆ-
ನಂದತೀರ್ಥರ ಲಿಂಗವೋ! ಬಸ-
ವಣ್ಣನವರಾ ಲಿಂಗವೋ
ಪೂಜ್ಯಪಾದರನಂಗವು
ಶಂಕರನ ನಿಃಸಂಗವು
ಬಂತೆ ಎಲ್ಲಕು ಭಂಗವುಽ ?
ಹೊಲೆಯ ಕಳೆವನು ಹೊಲೆಯನೇ ?
ನೆಲದ ಮಗ ಒಕ್ಕಲಿಗನೇ ?
ದುಡಿದು ಬದುಕುವ ಬಡವನೇ ?
ಏನು ನುಡಿವಿರಿ ? ಎಂತೆ ನಡೆವಿರಿ !
ರಸವು ಇದ್ದುದೇ ಹೃದಯವೋ !
ಇಳೆಯ ದೈವವು ಸದಯವೋ !
ನೀವಾರಲಾ ನೀವಾರಲಾ
ಯಾರೋಽ ಯಾರೋಽ.........

೩

ಬಾಯ್ತುಂಬಿ ನುಡಿಯುವ ಬ್ರಹ್ಮವು
ಕಾಲ್ ಕೈಗು ಕುಣಿಯುವ ಕರ್ಮವು
ಮೈದುಂಬಿ ತುಡಿಯುವ ಧರ್ಮವು
ಅವು ನಮ್ಮವೋ ಅವು ನಿಮ್ಮವೋ
ಜೀವ ನರ್ತಿಸಿ ನಡೆಯಿರಿ
ಹೃದಯ ಮೂರ್ತಿಸಿ ನುಡಿಯಿರಿ
ದಿವ್ಯ ಲಯವನೆ ಹಿಡಿಯಿರಿ.
ಎಲ್ಲೆ ಎಲ್ಲಿವೆ ನಾಡಿಗೆ?
ರಾಗ ಬೇರೆಯೆ ಹಾಡಿಗೆ?
ಕಾಯಿ ಬಂದಿವೆ ಪಾಡಿಗೆ.
ತಮಿಳರಣ್ಣಾ, ತೆಲಗುತಮ್ಮಾ, ಕೇರಳದ ಕಿರಿಸೋದರಾ
ಆರದಿರಲೈ ಆದರಾ
ಮಹಾರಾಷ್ಟ್ರನಿರು ನೀನುತ್ತರಾ
ನೆರೆಹೊರಿಕೆಯಾಗಲಿ ಹತ್ತಿರಾ.
ಬೆಳೆಸೋಣ ಇಬ್ಬರ ಎತ್ತರಾ
ಪಕ್ಕಕಿರಲೀ ಕೊಂಕಣಾ
ಕೊಡಗ ತುಳುವರು ತೆಂಕಣಾ
ಬಡಗ ತೊದಫ ಕುರುಂಬ ಇರುಳರು
ಕೈಗೆ ಕಟ್ಟಲಿ ಕಂಕಣಾ
ಹಿಂದಿಯುವನೂ
ಮುಂದಿಯುವನೇ!
ಅವನು ಎಲ್ಲರ ಬಂಧುವು
ಸ್ವೈರವೇ ಸ್ವಚ್ಛಂದವು
ನಡುವೆ ಕನ್ನಡ ಬಾಳಲಾ
ಆಳುವವನೇ ಆಳಲಾ
ನಾಟ್ಯ ನಡೆದಿರೆ ತಾಳಲಾ
ನೀವಾರಲಾ ನೀವಾರಲಾ
ಯಾರೋ ಯಾರೋ..........

೪

ಎಲ್ಲೊ ಇದೆ ಅರವಿಂದವು
ನೆಲಕೆ ಗಮಗಮ ಗಂಧವು
ಜೀವದೊಳು ಜಿನಬಂಧವು
ತಾಯಿ-ಬಾಳಿನ ಛಂದವು
ಪಂಪನೇ ರತ್ನಾಕರಾ
ಸರ್ವಜ್ಞಪ್ರಭುವೇ ಹರಿಹರಾ
ಶುಕರೂಪ ವಿಠಲಪುರಂದರಾ
ಜಯವು ಗರತಿಯ ಹಾಡಿಗೇ
ಕಲ್ಪಿ ಶಿಲ್ಪಿಯ ಗಾಡಿಗೇ
ಕಲ್ಲು ಹಾಡಿದ ನಾಡಿಗೇ!
(ಹಗೆಯು ಆಗಲಿ ಕಾಡಿಗೆ)
ಕರ್ತಾರ ಹಾಕಿದ ಕಮ್ಮಟಾ
ಚಾಮುಂಡರಾಯನ ಗೊಮ್ಮಟಾ
ತವ ನಿಧಿಯ ಹಾಗೆಯೆ ತೇಯಲಿ
ವಿಠಲವೆಂಕಟ ಮಲ್ಲಿಕಾರ್ಜುನ
ಕೃಷ್ಣ ಮಹಬಲ ಕಾಯಲಿ
ಅಸುರ ದುರ್ಗುಣ ಸಾಯಲಿ
ಮರ್ಯಾದೆ ಮೀರದೆ ನಡೆಯಿರಿ
ವಿಶ್ವತಾಳವ ಹಿಡಿಯಿರಿ
ಬೇಡ ಸೀಮಾಭಂಗವು
ಎಲ್ಲೆಡೆಗು ಶಿವಲಿಂಗವು
ರುದ್ರಭೂಮಿಯ ಭಸಿತವೇತಕೆ
ಹಸಿದು ಕಿಸಿವಿರಿ ಬಾಯನು ?
ನೋಡಿ, ನಡುಗುವ ತಾಯನು.
ನೀವಾರಲಾ ನೀವಾರಲಾ
ಯಾರೋऽ ಯಾರೋऽ..........

- ರಚನೆ : ಮಹಾನವಮಿ, ೧೯೪೮

ಭಾವ : 'ನೀವಾರಲಾ ಯಾರೋ ಯಾರೋ' ಎಂಬ ಕವನದ ಪಲ್ಲವಿಯನ್ನು ಒಂದು ದಸರೆಯ ದಿನದ ಮುಂಜಾವಿನ ಕನಸಿನಲ್ಲಿ ನವಯುಗದ ಯುವಕರ ತಂಡಕ್ಕೆ ನಾನು ಹೇಳುತ್ತಿದ್ದೆ. ಹಾಡು ಮರೆತು ಹೋಗಿದೆ. ಪಲ್ಲವಿ ಬೇರೊಂದು ಹಾಡನ್ನು ಹುಟ್ಟಿಸಿದೆ.

ಶಬ್ದಾರ್ಥ : ಜೀತ=ಕೂಲಿ, ದುಡಿತ, ಚಾಕರಿ. ತುಡಿ=ಮಿಡಿ, ಸ್ಪಂದಿಸು. ಎಲ್ಲೆ=ಸೀಮೆ.

ವಿಶೇಷ : ಪ್ರಾಂತ ಪ್ರಾಂತಗಳ ಐಕ್ಯ ಹಾಗೂ ಸಾಮರಸ್ಯದ ಸಂದೇಶ ಈ ಕವನದಲ್ಲಿದೆ.

೨೦ ಸಿದ್ಧರಾಮರ ವಚನವನ್ನು ನೆನೆದು

"ಕಲಿಕಾಲ ಕೆಟ್ಟದ್ದು, ನರರು ಸುರರಸುರರಿಗಿಂತ
ಬಲ್ಲಿದರು, ಆದ್ದರಿಂದ ಈ ಕ್ಷೇತ್ರದಲ್ಲಿ ಇದ್ದೂ
ಇಲ್ಲದಂತೆ ಸಮಾಧಿಯಲ್ಲಿ ನಿಲ್ಲುವೆನು"

- ಸಿದ್ಧರಾಮ ಪುರಾಣ (ಸಂ.೯, ಪದ್ಯ ೫೩)

೧

ಇದ್ದು ಇಲ್ಲದ ಹಾಗೆ ಇರುವೆನೆಂಬಿರಿ ತಂದೆ
ಗದ್ದುಗೆಯನೇರುವದದೆಂದು ಹೇಳಿ ?
ತಮ್ಮ ಹಿರಿಕೆರೆಯಲ್ಲಿ ಕಮಲವರಳುತ್ತಿಲ್ಲ.
ಮತ್ತೆ ಕಾಣುವದೆಂದು ಭಕ್ತಕೇಳಿ ?

೨

ತಮ್ಮಲ್ಲಿ ಸೊನ್ನಲಿಗೆ ಸೊನ್ನಲಿಗೆಯಲಿ ತಾವು
ಹೀಗಿದ್ದು ಬರಿ ಹೊನ್ನೆ ಹೊಳೆಯುತಿಹುದು.
ಹೊನ್ನಿನಲಿ ಹುದುಗಿದ್ದ ಸಿದ್ಧಹಸ್ತದ ಅಭಯ
ಬಡತನವನಷ್ಟನ್ನೇ ತೊಳೆಯುತಿಹುದು.

೩

ತೋಟದೊಳಗೆತ್ತಲೂ ಆರಾಮವೆನಿಸಿದರು
ಸಿದ್ಧರಾಮನ ಸೊಲ್ಲು ಕೇಳುತಿಲ್ಲ.
ತಮ್ಮ, ತಮ್ಮವರ, ತಮ್ಮಂಥವರ ಕತೆವಚನ
ಹನ್ನೆರಡು ತಿಂಗಳೂ ಹೇಳುತಿಲ್ಲ.

೪

ಧೂಳಿಮಾಕಾಳನೇ ಮೈಗೊಂಡು ಬೀಸುತಿರೆ
ನಿಮ್ಮ ಬೇವೇ ತಂಪು ಸೂಸುತಿರಲು
ಬಿಸಿಲೆಷ್ಟು ಕಾದೀತು ಬೆವರೆಷ್ಟು ಹೋದೀತು
ನಿಮ್ಮ ಕೆರೆಯೇ ಮೈಯ ಮೀಸುತಿರಲು

೫

ಆದರೂ ತಮ್ಮ ಕಣ್ ತಮ್ಮ ಕೈ ತಮ್ಮಂತ್ರ
ಕಣ್ತುಂಬಿ ತಲೆದುಂಬಿ ಕಿವಿಯ ತುಂಬಿ
ಬರದಿರಲು, ಹೊಳೆದೀತು ಲಿಂಗಕಾಂತಿಯದೆಂತು
ಕಲ್ಲನ್ನೊ ಕಣಗಿಲನೊ ಬರಿದೆ ನಂಬಿ ?

೬
ಏಕತಾರಿಯ ಏಕನಾದದಂದದಿ ಮಿಡಿದು
ನುಡಿಯದಿರೆ ಹಗಲಿರುಳು ಪ್ರಾಣತಂತು
ನಿಮ್ಮ ಶರಣರ ಬಿಂಬ ಕಣ್ಣಿನಲಿ ಕಳೆಗೊಂಡು
ಮಿಂಚೀತು ಎದೆಯಲಿ ತ್ರಿಶೂಲವೆಂತು ?
೭
ಭಾಗ್ಯನಗರದ ಭಾಷೆ ಪುಣ್ಯನಗರಿಯ ಭಾಷೆ
ಬೆಂಗಳೂರಿನ ಭಾಷೆ ಬೆಳಗುತಿರಲು
ಸೊನ್ನಲಿಗೆಯಲಿ ಮೂರು ಸೇರಿ ಮುಪ್ಪುರಿಗೊಂಡು
ಒಪ್ಪೀತೆ ಎಂದಾರೆ ತೊಳಗದಿರಲು !
೮
ವಿದ್ಯೆಗೆತ್ತಿದ ಕೈಯು ಬುದ್ಧಿಗೆತ್ತಿದ ಕೈಯು
ಕರಿಹೊಲದ ಅರಳಿ ಹೂವಾಗಿಕೊಂಡು
ಮಲ್ಲಯ್ಯ ನೆಟ್ಟಿರುವ ಸಿದ್ಧ ದೀಪಸ್ತಂಭ-
ವೆಂಬಂತೆ ನಾಲ್ಕುದೆಸೆ ತಾಗಿಕೊಂಡು.
೯
ಹೊನ್ನೆಂಬ ಹೆಣ್ಣೆಂಬ ಮಣ್ಣೆಂಬ ಮೆಟ್ಟಿಲವ
ಮೀರಿ ಕಟ್ಟಿದ ಪುರವು ಮೆರೆವುದೆಂದು ?
ಎದೆಯಲ್ಲಿ ಸುಧೆಯಾಗಿ ನಿಮ್ಮ ವಚನಾಮೃತವು
ಕಣ್ಣಿಗಂಜನವಾಗಿ ತೆರೆವುದೆಂದು ?
೧೦
ರೇವಣರು ಮೆಟ್ಟಿದ್ದ ಸ್ಥಳವೀಗ ಹಸುರೆಯಿದೆ
ಮಲ್ಲಯ್ಯನೆಡೆಗೀಗ ಕಾಂತಿಯಿಹುದು.
ತಾವು ಕಟ್ಟಿಸಿದ ಕೆರೆ ಈಗಲೂ ಬತ್ತದಿದೆ
ಪ್ರಭುವಾದ ವಬಟ್ಟಿದೆಡೆ ಶಾಂತಿಯಿಹುದು.
೧೧
ಆದರೇನೆಲ್ಲೆಲ್ಲು ಗುಂಭಮೌನವೆ ತುಂಬಿ
ಮೂಢನ ಸಮಾಧಿಯೊಳು ಕತ್ತಲಿಸಿದೆ
ವೈಭವಕೆ ಕಳೆಯಿಲ್ಲ ಜ್ಞಾನಕ್ಕೆ ಬೆಳೆಯಿಲ್ಲ
ಅಜ್ಞಾನವೇ ಸುತ್ತ ಬತ್ತಲಿಸಿದೆ.

೧೨
ಈ ತಮ್ಮ ನೆಲೆವೀಡು ಸಿದ್ಧರಸಗಳ ಬೀಡು
ಎಂದು ಕಬ್ಬಿಣವನ್ನು ಹೊನ್ನುಗೊಳಿಸಿ
ಬೆಳವೊಲವ ಮೆರೆಸಿ ಮೆರೆಯುವದು ಸಿಂಗರವಾಗಿ
ಸೊಸ್ನಲಿಗೆ ಎಂಬುದನು ನನ್ನಿಗೊಳಿಸಿ?
೧೩
ದೇಹ-ದೇವಾಲಯದಿ ಪ್ರಾಣಲಿಂಗಗಳಿಲ್ಲ
ಮನದ ಕೆರೆ-ಕಾಲುವೆಗೆ ಕಟ್ಟೆಯಿಲ್ಲ.
ಚಿತ್ತಗಳ ಬಿತ್ತಿಲ್ಲ, ಸಂಕಲ್ಪ ಹೊತ್ತಿಲ್ಲ
ಹಳೆಯ ಆಶ್ರಯವೀಗು ಬಿಟ್ಟೆಯಿಲ್ಲ.
೧೪
ವಿಟ್ಠಲನ ಮುದ್ರೆಯಲಿ ಭಕ್ತಿ ಸೆರೆಯೊಳಗಿಹುದು
ಶಕ್ತಿ ಭಂಡಾರದಲಿ ಮರೆಯೊಳಿಹುದು.
ದತ್ತಪಾದಗಳಲ್ಲಿ ಗುಪ್ತ ಒಳಗಿಳಿದಿಹುದು.
ಸಂಗಮ ವಿಭೂತಿಯಲಿ ತೆರೆಯೊಳಿಹುದು
೧೫
ಗಿರಣಿಗಳ ಧೂಮ-ಧೂಸರಿತ ಬಾಂದಳದಲ್ಲಿ
ಎಂದು ಮೆರೆವುದೊ ನಿಮ್ಮ ತ್ಯಾಗಧ್ವಜವು. !
ಮಣ್ಣಿನೀ ಮಕ್ಕಳನು ಬಂದು ಪೊರೆವುದು ಎಂದು
ಭೂತದಯೆಯಲಿ ಬಲಿತ ನಿಮ್ಮ ಭುಜವು?
೧೬
ಅಕ್ಕಗಳು ಅವ್ವಗಳು ವಚನರಚನೆಯ ಬಿಚ್ಚಿ
ನಾಲಗೆಯ ನೆಲಗಳಲಿ ಬಿತ್ತುತ್ತಿರಲು
ಅಪ್ಪಗಳು ಅಯ್ಯಗಳು ಮೂಕರಾಗಿಹರೇಕೊ
ಕನ್ನಡದ ಗುಡಿ ಮತ್ತೆ ಎತ್ತುತ್ತಿರಲು.
೧೭
ಸಾಧು-ಸಂತರ ವಾಣಿ ಭಕ್ತ-ದಾಸರ ವೀಣೆ
ಶರಣರಾವರಣಕ್ಕೆ ಮೊರೆಯುತ್ತಿದೆ.
ಬಾನುಲಿ ವಿಮಾನಗಳ ಠಂಕಾರರವದಲ್ಲಿ
ಯಾವುದೋ ಓಂಕಾರ ಬೆರೆಯುತ್ತಿದೆ.

೧೮
ಕನ್ನಡದ ಸೀಮೆಯಲಿ ಮುನ್ನಡೆಯ ಹೆಜ್ಜೆಯಲಿ
ವಿಶ್ವಮೈತ್ರಿಯ ಮೋಡಿ ಮೂಡಲುಂಟು.
ರೋಷ-ಸಂತೋಷಗಳ ಮಲ್ಲಗಾಳಗದಲ್ಲಿ
ಎದೆಯ ಕಾವಳಮಬ್ಬು ಓಡಲುಂಟು.
೧೯
ಪಡುವಲದ ಕೆನ್ನೀರ ತಳಿಯಲ್ಲಿ ಮುಳುಗಿದನು
ಕೆಂಡ ಕಾರುತ್ತ ಪ್ರೋಚ್ಚಂಡ ರವಿಯು
ಮೂಡಲದ ಮುಂಗಾಲು ಮೂಡಿದೊಡನೆಯೆ ಹಕ್ಕಿ
ಪಕ್ಕಿಗಳ ಒಡನೆಯೇ ಎದ್ದಕವಿಯು.
೨೦
ಸಿದ್ಧರಾಮನ ಕರುಣೆ ಸಾಕಾರವಾದಂತೆ
ಏಳು ಹೊಳೆಗಳ ನಾಡು ಏಳುತಿಹುದು
ದಿಕ್ತಟಕೆ ಮುದ್ದಿಟ್ಟು ಬರುವ ಸಂಗೀತವನು
ಜೀವವೇ ಕಿವಿಯಾಗಿ ಕೇಳುತಿಹುದು.
೨೧
ಏಳಿ ಜೀವದ ಮೇಳ ಕೇಳಿ ಭಾವದ ತಾಳ
ದಿವ್ಯಲಯದಲಿ ಬರುವ ಭವ್ಯರಾಗ
ಎಲ್ಲರೊಳಗಿಹನೊಬ್ಬ ಅವನು ಕಟ್ಟಿದ ಕಬ್ಬ
ಕರೆಯಲಿದೆ ಹಾಲನ್ನು ಕುಡಿಯಿರಾಗ.

- ರಚನೆ : ೨೯-೯-೧೯೪೪

ಭಾವ : ಸೊಲ್ಲಾಪುರಕ್ಕೆ ಬಂದ ಹೊಸದರಲ್ಲಿ ಸುತ್ತಲಿನ ಎಲ್ಲ ಪರಿಸ್ಥಿತಿಯನ್ನು ಕಂಡು ಉಂಟಾದ ಕ್ಷೋಭ. ಅನಂತರ ಬಂದ ಶಾಂತಿಯಲ್ಲಿ ತಲೆಯೆತ್ತಿದ ಧೈರ್ಯ ಈ ಕವನಕ್ಕೆ ಕಾರಣ.

ಶಬ್ದಾರ್ಥ : ಧೂಮ=ಹೊಗೆ, ಧೂಸರಿತ=ನಸುಕಂದು ಬಣ್ಣದ. ಕಾವಳ=ಕಪ್ಪು, ಕತ್ತಲೆ.

ವಿಶೇಷ : ಬೇಂದ್ರೆಯವರು ಕನ್ನಡ ವಿಷಯದ ಪ್ರಾಧ್ಯಾಪಕರಾಗಿ ಸೊಲ್ಲಾಪುರದ ಡಿ. ಎ. ವಿ. ಮಹಾವಿದ್ಯಾಲಯದಲ್ಲಿ ೧೯೪೪-೫೬ (೧೨ ವರ್ಷ) ಸೇವೆ ಸಲ್ಲಿಸಿದರು. ಇದು ಸುಖ ಸ್ಮರಣೆ.

ಬೇಂದ್ರೆಯವರ ೨ನೇ ಮಗ-ರಾಮ (ಹಾಡು ಖಂಡಕಾವ್ಯದ ನಾಯಕ)ನಿಗೆ ಸಿದ್ದರಾಮ ಎಂದೇ ಹೆಸರಿಟ್ಟಿದ್ದರು. ೧೯೪೪ರಲ್ಲಿ ಆವನು ಸತ್ತಾಗ ಅವನ ಚಿತಾಭಸ್ಮವನ್ನು ಸಿದ್ದರಾಮೇಶ್ವರ ಕೆರೆಯಲ್ಲಿ ವಿಸರ್ಜಿಸುವ ದುರ್ದೈವ. ಇದು ದುಃಖದ ಸ್ಮರಣೆ.

೨೧ ಪಡುವಲ ಕಡಲ ಅಂಬಿಗರ ಹಾಡು

ಏ। ಲೇಲಾಲಿ ಲೇಸೋ। ಲೇಲಾಲಿ ಲೋ ॥ ಪಲ್ಲವಿ ॥

೧

ಕಡಲೀನ ನಡಿಗೆಗೆ ಹಾಡುವೆನೋ।
ತೆರೆಗಳ ಲೀಲೆಯ ನೋಡುವೆನೋ।
ಗಾಳೀಯ ಛಂದಕೆ ತೂಗುವೆನೋ।
ಮುಂದಕೆ ಮುಂದಕೆ ನೂಗುವೆನೋ।
ಏ। ಲೇಲಾಲಿ

೨

ಪಡುವಲ ಕಡಲಿದು ಏನಂದವೋ।
ಉಕ್ಕೇರಿ ಬರುತಿದೆ ಆನಂದವೋ।
ಬಂಧನ ಬಂದಿತು ಎಲ್ಲಿಂದಲೋ।
ಬಿಡುಗಡೆ ಇಂದೂನು ಅಲ್ಲಿಂದಲೋ।
ಏ। ಲೇಲಾಲಿ

೩

ದಿನದಿನ ಬಹನಿಲ್ಲಿ ರವಿ ಶಾಂತಿಗೆ।
ದಣಿವಾಗಿ ತಣಿಗಾಗಿ ವಿಶ್ರಾಂತಿಗೆ।
ಶ್ರೀಗಂಧ ಚಂದನ ಯಾಲಕ್ಕಿಗೆ।
ಬಂದವು ಏನೇನೋ ಈ ದಿಕ್ಕಿಗೆ।
ಏ। ಲೇಲಾಲಿ

೪

ಮುತ್ತೇನು ಮೆಣಸೇನು ಲಾವಂಗವೋ।
ಕುದುರೇನು ಹವಳೇನು ಅಬರಂಗವೋ।
ಬೇಹಾರ ಆಹಾರ ಸಂಹಾರವು।
ಮತಮೂಢ ಹುಂಕಾರ ಠಂಕಾರವು।
ಏ। ಲೇಲಾಲಿ

೫

ಬರುತಿತ್ತು ಸಂಪತ್ತು ದಿನ ಸಂಜೆಗೆ।
ಈಗಿಲ್ಲಿ ದಿಕ್ಕಿಲ್ಲ ನೀರ್ಗಂಜಿಗೆ।
ಹೀಗಾದರೂ ಏನು ನಯನೀತಿಗೆ।
ಈಗಲು ಸರಿ ಯಾರು ಈ ಜಾತಿಗೆ।
ಏ! ಲೇಲಾಲಿ......

೭
ಒಪ್ಪಾಗಿ ಉಪ್ಪಾಗಿ ಈ ಬೇಲವೂ !
ತರುತಿದೆ ಸುಖ-ದುಃಖ ಸಮ್ಮೇಳವು।
ಬಂದುದು ಬರಲೆನ್ನಿ ನಮ್ಮೊಟ್ಟಿಗೆ।
ಹೊಡೆಯಿರಿ ಕಡೆಯಿರಿ ಈ ನಿಟ್ಟಿಗೆ।
ಐ। ಲೇಲಾಲಿ

ಭಾವ : ಗೋಕರ್ಣಕ್ಕೆ ಹೋದಾಗ ಅಲ್ಲಿಯ ಗೆಳೆಯರೊಂದಿಗೆ ಸಮುದ್ರವಿಹಾರ ಮಾಡಿ ಅನುಭವಿಸಿದ ಆನಂದ ಗೀತ.

ಶಬ್ದಾರ್ಥ : ಅಬರಂಗ=ಅಭ್ರಕ, ಕಾಗೆ ಬಂಗಾರ. ಕುದುರು, ಹವಳ=ಸಮುದ್ರ ಪದಾರ್ಥ. ಬೇಲ=Bail=ದೋಣಿಯಲ್ಲಿಯ ನೀರನ್ನು ಮೊಗೆದು ಹಾಕು. ನೀರೆತ್ತಿ ಹೊರಗೆ ಚೆಲ್ಲುವ ಯಂತ್ರ ಸಲಕರಣೆ.

ವಿಶೇಷ : ಸಮುದ್ರದ ತೆರೆಗಳ ತಾಕಲಾಟ ಮತ್ತು ತೂಗಾಟವು ಈ ಕವನದ ಛಂದಸ್ಸಾಗಿದೆ. ಮಾತ್ರಾ ಗಣಗಳ ಸ್ವಚ್ಛಂತ ಹೊಂದಾಣಿಕೆ ಇಲ್ಲಿದೆ.



೨೨ ಬಂದಿಕಾರಾ ಶ್ರಾವಣಾ

೧

ಬಂದಿಯೊಳಗಿದ್ದವರ ಬಂಧನವ ಬಿಡಿಸುವಾ
ಬಂದಿಕಾರಾ ಶ್ರಾವಣಾ
ಬಂಧನದೊಳಿಹರೊ ಜಗವಂದಿತರನಿಂದಿತರು
ಬಂದೆ ಬಿಡಿಸೈ ಶ್ರಾವಣಾ
ಅಂಧಕಾರವಿದಲ್ಲ ಮಂದೇಹ ಸಂಘವಿದೆ
ಸಂದೇಹವೇ ಶ್ರಾವಣಾ ?
ಅಂದು ಗಾಯತ್ರಿ ಮನದಂದು ಕಿವಿದುಂಬಿಸಿದೆ
ಇಂದಾವುದೋ ಶ್ರಾವಣಾ ?

೨

ಬಂದು ಗೀತೆಯ ಹಾಡಿನೊಂದು ಯೋಗವ ಹೇಳಿ
ಒಂದುಗೂಡೋ ಶ್ರಾವಣಾ.
ಒಂದು ಶ್ರುತಿಯವ ನೀನವುಂದ ನಂದನವಾಸಿ
ಮಂದಹಾಸಾ ಶ್ರಾವಣಾ.
ನಂದಗೋಪನ ಕಾಂತೆಗಂದೊಪ್ಪಿಸಿದೆ ತಾನೆ
ಬಂಧಮುಕ್ತನ ಶ್ರಾವಣಾ.
ಇಂದು ಬಂದಿಹುದು ಮತ್ತೊಂದು ಸಮಯವು ಅಂತೆ
ತಂದೆ ಬಿಡಿಸೈ ಶ್ರಾವಣಾ.

೩

ಮುಂದಿರುವ ಹೊಲಗಳಲಿ ಇಂದಿರೆಯೆ ನಲಿವಂತೆ
ಚೆಂದವೇನೋ ಶ್ರಾವಣಾ.
ಬಂಧು ನೀ ಬೆಳೆಗೆ ಉಕ್ಕಂದ ನೀ ಹೊಳೆಗೆ ಆ-
ನಂದಸಿಂಧೋ ಶ್ರಾವಣಾ.

೪

ಚಂಡರಾಹುಗ್ರಾಸದಿಂದ ಬಿಡಿಸೈ ಜಗದ
ಚಂದಿರನನೇ ಶ್ರಾವಣಾ.
ನಿಂದಿಸುತ ಬಾಯ್ಮುಚ್ಚಿ ಸ್ಪುಂದಿಸುತ ಬಡವರಾ-
ಕ್ರಂದಿಸುವರೋ ಶ್ರಾವಣಾ.

೫
ಬಂಧ ಮುಕ್ತಿಯ ದಿನವೆ ಬಂದೆಯಾ ಬಾ ಬಳಿಗೆ
ಎಂದು ಕರೆಯೋ ಶ್ರಾವಣಾ
ದುಂದುು-ಕಂಸನ ಕೊಂದು, ತಂದೆ-ತಾಯ್ ಹೊರತಂದ
ಕಂದನ್ನ ಕರೆ ಶ್ರಾವಣಾ.
ಕೇದಗೆಯ ಹೊಡೆ ತೂರಿ ಊದು ನಿನ್ನ ತುತೂರಿ
ಮೋದ ಬೀರೋ ಶ್ರಾವಣಾ
ನಾದವಿದು ಯಾವುದೊ ಅಗಾಧ ತಳದಿಂ ಬಂತು
ಊದೋದಿದೋ ಶ್ರಾವಣಾ.
೬
ಅಷ್ಟಮಿಯ ದಿನ ಮಧ್ಯರಾತ್ರಿ ಜನರಿಗೆ ಜಾತ್ರಿ
ಇಷ್ಟದವನಿಷ್ಟರಲ್ಲಿ
ಹುಟ್ಟಿ ಬರುವನೊ ಚಂದ್ರ ಕುಟ್ಟಿ ಬಂದಂತೆ ತಮ
ದಿಟ್ಟ ದಿಟವಾಗುವಲ್ಲಿ.
'ಕತ್ತಲೆಯ ತುಟ್ಟತುದಿ ಹತ್ತಿರವೆ ಬೆಳಕುಬದಿ'
ಎಂದು ಸಾರೋ ಶ್ರಾವಣಾ.
ಮುಂದೆ ಬರುವ ಸ್ವತಂತ್ರ ವಂದಿಮಾಗಧ ನೀನು
ಬಂಧುರಾಂಗಾ ಶ್ರಾವಣಾ

- ರಚನೆ : ಗುರುವಾರ, ೧೩-೮-೧೯೪೭

ಭಾವ : ಬಂದಿಕಾರಾ ಶ್ರಾವಣಾ ನನ್ನ ಶ್ರಾವಣಗೀತಗಳಲ್ಲಿ ಒಂದು. ಶ್ರಾವಣದಲ್ಲಿಯೇ ಶ್ರೀ ಕೃಷ್ಣ ಜನ್ಮವಾಯಿತು. ಶ್ರೀ ಅರವಿಂದರ ಜನ್ಮವಾಯಿತು. ಅದೇ ತಿಂಗಳಲ್ಲಿ ನಮಗೆ ಸ್ವಾತಂತ್ರ್ಯ ದೊರಕಿತು.



೨೩ ಅನ್ನಯಜ್ಞ

೧

ಕೂಸುಗಳಿಗೆ ಹಾಲು ಇಲ್ಲ, ಪಶುಬಲಿಯೇ ನಡೆದಿದೆ
ಕಾಳು ಇದೆ ಕೂಳು ಇಲ್ಲ, ಹಣದ ಹುಚ್ಚು ಹಿಡಿದಿದೆ.
ಕತ್ತಲಲ್ಲಿ ಬೆಳಕೆ ಇಲ್ಲ, ಜಗಕೆ ಬೆಂಕಿ ಹತ್ತಿದೆ.
ಎಲ್ಲ ಇದೆ ಎಲ್ಲ ಇಲ್ಲ, ಇಲ್ಲೆ ಸುತ್ತುಮುತ್ತಿದೆ.
ಸಾಕು ಎಂಬುವಂತೆ ನೀಡು, ಬೇಕು ಎಂಬ ಹೊತ್ತಿಗೆ
ಬೆಣ್ಣೆ ಎಣ್ಣೆ ಎರೆಯಬನ್ನಿ ಹಸಿದ ಹೊಟ್ಟೆ-ನೆತ್ತಿಗೆ.

೨

ಬರುವ ಸಾವ ನೆನೆದು ಕೆಲವು ತಿನ್ನುತಿಹವು ಹೆಚ್ಚಿಗೆ
ಕಾಳು ಸಾಲದೀಗ ಜನದ ಇರುವ ಹೊಟ್ಟೆಕಿಚ್ಚಿಗೆ.
ಇದ ಕಂಡೂ ಕಂಡು ಕೂಡ ಏಳಬೇಡ ರೊಚ್ಚಿಗೆ
ಇದರ ಹೊಟ್ಟೆಯಲ್ಲಿ ಹುಟ್ಟಿತೀ ಪಿಶಾಚಿ ಹುಚ್ಚಿಗೆ
ಬಾಳ್ಮೆಯಲ್ಲಿ ತಾಳ್ಮೆ ಬೇಕು ಬದುಕಬೇಕು ಎಂದರೆ
ಜೀವವೆ ಸಾವಾಗಬಹುದು ಬಚ್ಚಬರಿಯೆ ನೊಂದರೆ.

೩

ಖಣವು ರಣವು, ಜನವು ಹೆಣವು ಸಾವಿಗಾಗಿ ದುಡಿವರೇ ?
ಯಾರ ಬಾಳಿಗಾಗಿ ಯಾರೊ ಯಾವೊ ಕೈಗೆ ಮಡಿವರೇ ?
ಕಾವ ಕೈಯ್ಯೆ ಕೊಲ್ಲುತಿಹವು! ಮರಣದತ್ತ ನಡೆವರೇ ?
ಸಾವಿಗಾಗಿ ತಪಿಸುವವರು ಬಾಳ-ಬೀಜ ಹಿಡಿವರೇ ?
ಕಣ್ಣೀರಿನ ಕಡಲ ನಡುವೆ ತೇಲುತಿಹವು ನೆಲಗಳು
ತಾಯಿ-ಹಾಲ ಕುದಿಯುತಿಹುದು ಕೆಂಪೇರಲು ಜಲಗಳು.

೪

ಇದ್ದ ನೆಲವ ಹೊಲವ ಮಾಡಿ ಬಿತ್ತಬೇಕು ಕಾಳನು.
ಬದುಕಲಿರುವ ಬಾಯಿಗಳಿಗೆ ತುತ್ತಬೇಕು ಕೂಳನು
ಅನ್ನದಾನ ಮಹಾಯಜ್ಞ! ಅನ್ನಹೀನ ಆಳನು.
ಅನ್ನ ಮುಚ್ಚಿ ಬಾಳಲೆಳಸುವವನು ಮಹಾಖೂಳನು
ನೆಲದ ಹುರುಡಿನಲ್ಲಿ ಹುರುಳಿಗಿಂತ ಜೊಳ್ಳೆ ಹೆಚ್ಚಿಗೆ
ಗೆದ್ದು ಸತ್ತು ಪಡೆಯುವವರು ಹುಚ್ಚ ಜನರ ಮೆಚ್ಚಿಗೆ.

೫
ಮತ್ತೆ ನೆಲದ ಎದೆಯ ಮೇಲೆ ತೆನೆಯ ಧ್ವಜವು ನಿಲ್ಲಲಿ.
ಸಾವಿಗಿಂತ ಬಾಳು ಮೇಲು ಎಂಬ ಮಾತು ಗೆಲ್ಲಲಿ.
ವಿಷದ ಒಡಲಿನಿಂದೆ ರಸದ ಊಟೆ ಚಿಮ್ಮಿ ಚೆಲ್ಲಲಿ.
ಪ್ರೇಮವೆ ಹಣ್ಣಾಗಿ ಬರಲಿ ಕವಿಯ ಬಲ್ಲ ಸೊಲ್ಲಲಿ.
ಹೊನ್ನ ನೆಕ್ಕಿ ಬಾಳ್ವರಿಲ್ಲ, ಅನ್ನ ಸೂರೆಮಾಡಿರಿ.
ಅಣ್ಣಗಳಿರಾ ಅನ್ನದಲ್ಲಿ ಮಣ್ಣ ಕಲಿಸಬೇಡಿರಿ.

- ರಚನೆ : ಬುಧವಾರ, ೧೩-೧೨-೧೯೪೪

ಭಾವ : ಅನ್ನವು ಎಲ್ಲರಿಗೂ ಲಭಿಸಬೇಕು. ಅದರಿಂದ ಅವರು ಸ್ವತಂತ್ರರಾಗಿ ಬದುಕಬೇಕು. ತಿಂದ ಅನ್ನ ಪ್ರೇಮದ ಪರಿಪಾಕಗೊಳ್ಳುವುದೇ-ಅನ್ನಯಜ್ಞ.

ಶಬ್ದಾರ್ಥ : ಹರುಡು=ಸ್ಪರ್ಧೆ. ಹುರುಳ್-ಹುರುಳು=ಅರ್ಥ, ಸಾರ, ಯೋಗ್ಯತೆ. ಜಳ್ಳು-ಜೊಳ್ಳು=ಹುರುಳಿಲ್ಲದ.



೨೪ ಸರ್ಗ

೧

ಇವನಾರೊ ಸಂನ್ಯಾಸಿ, ಅತ್ತೊಬ್ಬ ಬಿಕನಾಸಿ
ಇಲ್ಲೊಬ್ಬ ದರವೇಶಿ ನರಳುತಿಹನು
ಅಲ್ಲೊ ನಡುಹರೆಯದವ ಮಾಡಿದ್ದ ಮರೆಯದವ
ಮಗ್ಗಲಿಗೆ ಆಗೀಗ ಹೊರಳುತಿಹನು

೨

ಜಳಕ, ಔಷಧ, ಗಂಜಿ ಮೇಲಿನವರಿಗೆ ಅಂಜಿ
ಹೊತ್ತುಹೊತ್ತಿಗೆ ಸುತ್ತು ಸಾಗುತಿಹುದು
ಹತ್ತು ಮಂತ್ರದ ಬೊಂಬೆಗಳ ಮಧ್ಯದಲ್ಲೊಂದು
ಆರೆಜೀವ ಜೀವನವ ತಾಗುತಿಹುದು

೩

ವೇಷದ ವಿರಕ್ತಿಯಲಿ ಅನುರಕ್ತಿ ಇಣುಕುತಿದೆ
ಕಣ್ಗೊನೆಗೆ ಕಾರುಣ್ಯ ಓಡುತಿಹುದು
ಅಡಕ-ನಗೆ ಕುಲುಕುಲಿಸಿ ಕಣ್ಣಮುಚ್ಚಣಿಕೆಯಲಿ
ಮುಟ್ಟಾಟ ಹುಡುಕಾಟವಾಡುತಿಹುದು

೪

ನೀರ್ಗೆಂಪು ತುಟಿಯಲ್ಲಿ ಸಪ್ಪೆ-ನಗೆ ಹರವುತಿದೆ
ಬತ್ತಿ ತೀರಿದ ಹಣತಿ ಹೊತ್ತಿದಂತೆ
ಬಿಟ್ಟಬೇಸರಿಕೆಯಲಿ ಆರಲಿಹ ಆರತಿಯು
ದೇವರಿಲ್ಲದ ಗುಡಿಗೆ ಎತ್ತಿದಂತೆ

೫

ಎತ್ತರದ ಹಸಿರು-ಹಣೆ ಹಾಳ ಬಿತ್ತರಿಸುತಿದೆ
ರವಿ ಸಂದ ಪಡುವಲದ ನೆನಪು ತಂದು
ತುಂಬೆದೆಯು ತುಂಬಿ ಗೋಣಗುಟ್ಟುತಿದೆ ಮರೆಯಲ್ಲಿ
ಒಲ್ಲೆನುತ ಚಲಿಸುತಿದೆ ರಕ್ತಬಿಂದು

೬

ರೋಗಿಗಳ ಕೋಣೆಡಿಗೆ ನಡೆನಡೆದು ಆಸರದಿ
ಬೇಸರದ ನಡಿಗೆ ನಡುನಡುಗುತಿಹುದು
ನಿದ್ದೆಯಲಿ ನಡೆದಂತೆ ಕನವರಿಸಿ ನುಡಿದಂತೆ
ಅಪ್ಪೈಕೆಯಲಿ ಬೇರೆ ಬೆಡಗು ಇಹುದು


೭
ನಾಡಿಗಳ ಸ್ಪಂದನಕೊ ಯಾವ ಆಕ್ರಂದನಕೊ
ಬೆರಳ ತುದಿ ತುಟಿಯಂತೆ ಅದಿರುತಿಹುದು
ಹೇಗೊ ಹಾಕಿದ ಹೆರಳು ಕೆದರಿಕೊಂಡಾ ಕುರುಳು
ಎಕ್ಕೆಕ್ಕಿ ಯಾರನೋ ಒದರುತಿಹವು
೮
ಎಲೆ ಕರುಣೆ ಈ ತರುಣೆ ನಿನಗೆ ಋಣಿಯಾಗಿಹಳು
ನಿನ್ನ ಕಣೆಗಾಗಿ ಕಾದಿಹಳು ಒಳಗೆ
ನಿನ್ನ ಕಿರಣಕೆ ಬಹಳು ಪಲ್ಲವಾಧರೆಯಾಗಿ
ಆ ವರೆಗೆ ನೋಡುವಳು ಮೇಲೆ ಕೆಳಗೆ

- ರಚನೆ : ಸೊಲ್ಲಾಪೂರ, ೧೯೪೪

ಭಾವ : ತರುಣ ರೋಗಿಯ ಸೇವೆ ಮಾಡುವ ವಿಧವೆ ದಾಯಿಯ ಮನಸ್ಸಿನ ತೂಗಾಟದ ಚಿತ್ರಣ.

ಶಬ್ದಾರ್ಥ : ಅಡಕನಗೆ=ಮಿತವಾದ ನಗೆ. ಎಕ್ಕೆಕ್ಕಿ=ಒಂದರ ಮೇಲೊಂದು ನುಗ್ಗಿ.





ಭಾಗ - ಉ

ಪ್ರೇಮ ಗೀತಗಳು

ಗಂಗಾವತರಣ - ಪ್ರೇಮ ಗೀತಗಳು

ಬೇಂದ್ರೆ ಕಾವ್ಯದಲ್ಲಿ ಪ್ರೇಮದ ಆವಿಷ್ಕಾರ ಒಂದು ಸ್ಥಾಯಿ ಜೀವಂತ ಸೆಲೆ. ಇದನ್ನು ಆಧರಿಸಿ ಒಂಬತ್ತು ಹಾಡುಗಳಿವೆ. ಅಪರೂಪ ರಾಗದಲ್ಲಿ ಚೆಲುವಿನ ಮಹತಿ, ಒಂದು ಹಾಡಿನಲ್ಲಿ- ಮಿಲನದ ಆನಂದ ಮತ್ತು ವಿರಹಿ ಚುಂಬಿತದಲ್ಲಿ ವಿರಹದ ಅಗ್ನಿಪರೀಕ್ಷೆ-ಸತ್ತ್ವಪರೀಕ್ಷೆ ವರ್ಣಿಸಲಾಗಿದೆ. ದವನ-ಕವನದ ಭಾವ-ಸಖಿ-ಸಖಿಯರ ಪ್ರೇಮ ಕವನ. ಪ್ರೇಮ-ದವನದಂತೆ ಸುಗಂಧ ಬೀರಬೇಕು ಎಂಬ ಆಶಯ ಪ್ರಮುಖ. 'ತಾಜಮಹಲ' ಕವನ - ಅಷ್ಟಷಟ್ಪದಿಯಲ್ಲಿ ಇದ್ದು; ''ಪ್ರೇಮದ ಸ್ಮಾರಕ ಕಲ್ಲಾದರೆ, ಕಲ್ಲಿಗೆ ಇರುವ ಅಳಿವು ಅದಕ್ಕೂ ಇರುವದು'' ಎಂಬ ಚಿಂತನೆ ಪ್ರಮುಖ. ಶಿವ-ದೃಷ್ಟಿ-ಶಿವ ಮತ್ತು ಶಕ್ತಿಯ ಮಿಲನವು ತಾರಕ ಸಂಹಾರಕ್ಕೆ ಕಾರಣವಾದ ವಸ್ತು ಈ ಭಾವಗೀತಕ್ಕೆ ಪ್ರೇರಣೆ. ಗಮಾಗಮಾ ಗಮಾಡಸ್ತಾವ ಮಲ್ಲಿಗೆ, ಹಿಂದs ನೋಡದs ಮತ್ತು ಕೊಡುವುದೇನು? ಕೊಂಬುದೇನು? ಈ ಮೂರು ಭಾವಗೀತಗಳನ್ನು ಹಲವರು ಸುಗಮ ಸಂಗೀತ ಪದ್ಧತಿಯಲ್ಲಿ ಹಾಡಿ ಅಮರಗೊಳಿಸಿದ್ದಾರೆ.

ಒಂದು ಹಾಡು, ವಿರಹಿ-ಚುಂಬಿತ, ದವನ-ಕವನ ಮತ್ತು ಶಿವ-ದೃಷ್ಟಿ ಹಾಡಬಹುದಾದ ಭಾವಗೀತಗಳಾಗಿವೆ. ಗಮಗಮಾ ಗಮಾಡಸ್ತಾವ ಮತ್ತು ಕೊಡುವದೇನು? ಕೊಂಬುದೇನು? ಎಂಬ ಭಾವ ಗೀತಗಳಲ್ಲಿ ನಾಟ್ಯಾಂಶವಿರುವುದರಿಂದ ಇವು ಅತ್ಯುತ್ತಮ ರಂಗಗೀತಗಳೂ ಆಗಿವೆ.

ಬೇಂದ್ರೆಯವರ ಒಲವಿನ ಸಿದ್ಧಾಂತ, ಪ್ರೇಮ ಮತ್ತು ವಿರಹದ ಅವಸ್ಥೆಗಳನ್ನು ಸೂಕ್ಷ್ಮವಾಗಿ ವಿವರಿಸುವಲ್ಲಿ ಸಫಲವಾಗಿದೆ.

- ಸಂ.

೨೫ ಅಪರೂಪ ರಾಗ

೧

ಆಹಾಽ ಚೆಲುವೆ, ಓಹೋಽ ಚೆಲುವೆ, ಏನುಽ ಚೆಲುವೆಯೋ
ನಿನ್ನ ನೀನೊ ಏನೊ ಏನೊ ನೋಡಿಽ ನಲಿವೆಯೋ

೨

ರೂಪಕೇಕೊ ಹೆಸರುಽ ದೆಸೆಯೊ ಮೈಯ್ಯೇ ಬೇಕೋ?
ಆಹಾಽ ಚೆಲುವೆ, ಅಲ್ಲೆ ಈಸಿ ಇರಲು ಸಾಕೋ
ಗಾನಲೋಲೆ, ನಾಗಲೀಲೆಯಾಗಿ ಒಲಿವೆಯೋ ॥
ಆಹಾ ಚೆಲುವೆ..............

೩

ಬಾನಿನಲ್ಲಿ ಬರೆದ ಗೆರೆಯ ಹಾಗೆ ಮೆರೆವೆಯೋ
ಆಹಾಽ ಚೆಲುವೆ, ಆಳದಲ್ಲಿ ನನ್ನ ಕರೆವೆಯೋ
ಇಲ್ಲೆ ನಾನು ಎಲ್ಲೊ ನೀನು ; ಕಿವಿಯೊಳುಲಿವೆಯೋ ॥
ಆಹಾ ಚೆಲುವೆ..............


೪

ಹಾಳಿಪಟವು ಗಾಳಿಯಲ್ಲಿ ತೇಲುವಂತೆಯೋ
ಆಹಾ ಚೆಲುವೆ, ಆದ ಆಸೆಯನ್ನು ಹೋಲುವಂತೆಯೋ
ನೆಲಕೆ ಅಂಟಬೇಡವೆಂದು ಮೆಯ್ಯ ಕೊಲುವೆಯೋ॥
ಆಹಾ ಚೆಲುವೆ..............

- ರಚನೆ : ಶುಕ್ರವಾರ, ೨೭-೧೧-೧೯೪೨

ಭಾವ : ಈ ಕವನದ ಧಾಟಿ ಮತ್ತು ಪಲ್ಲವಿ ನಾನು ಒಂದು ಬೆಳಗಿನ ಕನಸಿನಲ್ಲಿ ಹೇಳುತ್ತಲಿದ್ದದ್ದು. ಆದರ ಭಾವವೂ ಸ್ವಪ್ನಾಕಾಶದಂತೆ ಅತಿವಿಶಾಲವಾಗಿದೆ.

ಶಬ್ದಾರ್ಥ : ತಿಳಿವೆ=ಜ್ಞಾನ, ತಿಳುವಳಿಕೆ.



೨೬ ಒಂದು ಹಾಡು

೧
ಕೂಡಿರೆ ಕೈ ಮೈ ತಾಲಕೆ ತಾಲ
ಅಲ್ಲಿದೆ ನೃತ್ಯದ ನಿತ್ಯದ ಸೊತ್ತು
ಹೊಂದಿರೆ ಒಂದೆನೆ ಪ್ರಾಸಕೆ ಪ್ರಾಸ
ಅದುವೇ ಕಾವ್ಯವಿಲಾಸದ ಗೊತ್ತು.
ಕೂಡಿರೆ ಹೊಂದಿರೆ ಚಿತ್ತಕೆ ಚಿತ್ತ
ಪವಣಿಸಿದಂತದು ಮುತ್ತಿಗೆ ಮುತ್ತು.
೨
ವಾಣಿಗೆ ವೀಣೆಯು ಅಚ್ಚರಿದಂತೆ
ಇರದಿರೆ ಏನದು ಆ ಹಾಡು?
ದನಿಯಲಿ ನಾದವು ಹುರಿಗೊಂಡಂತೆ
ಇರದಿರೆ ಅದು ಜೀವದ ಪಾಡು.
ಜೀವಕೆ ಜೀವ ನೆರೆ ಬಂದಂತೆ
ಇರದಿಹುದೇ ನರಕದ ಜೋಡು.
೩
ಏನಾ ಆಸೆ! ವ್ಯರ್ಥಪಿಪಾಸೆ
ಚಿಗುರೆಯು ಚಂದ್ರಗೆ ಕಣ್ಣಿಟ್ಟಂತೆ
ಹೊನ್ನಿಯು ಬೆಳ್ಳಿಗೆ ಮರುಳಾದಂತೆ
ಆಳವನರಿಯದ ಹುಸಿಯೊಲವು
ಊಳದ ಬಿತ್ತದ ಬರಿ ಹೊಲವು.

ಭಾವ : ನಾಯಕ ನಾಯಿಕೆ ಮಿಲನದ ಹಾಡು.

ಶಬ್ದಾರ್ಥ : ಪವಣಿಸು=ಪೋಣಿಸು. ಅಚ್ಚರಿ=ಅಚ್ಚೊತ್ತು; ಅಚ್ಚು=ಸಲುಗೆ, ಸ್ನೇಹ, ಪ್ರೀತಿ. ಪಿಪಾಸೆ=ನೀರಡಿಕೆ, ಬಾಯಾರಿಕೆ.

ವಿಶೇಷ : ಈ ಪದ್ಯ ಅಪೂರ್ಣ ಎಂದು ಬೇಂದ್ರೆಯವರೇ ಭಾವ ಸಂದರ್ಭ ಕೊಟ್ಟಿದ್ದಾರೆ.

೨೭ ವಿರಹಿ-ಚುಂಬಿತ

೧
ಕಾಮವಿದು ಮೈಗಾವು
ಜೀವದ ಬಾವು
ಚಿತ್ತದ ನೋವು
ಎನ್ನರಸಿ
೨
ಪ್ರೇಮವದಕದೆ ಮದ್ದು
ಉಳಿದುದನೊದ್ದು
ಬಂತೀ ಮುದ್ದು
ನಿನ್ನರಸಿ
೩
ವಿರಹಿ ಬಿಟ್ಟುಸಿರಂತೆ
ಅದರಾ ಚಿಂತೆ
ಯಾರಿಗೆ ಅಂತೆ
ಇದು ಸಂತೆ
೪
ತೇಲುವದು ಪರದೇಸಿ
ಇರಲೂ ಹೇಸಿ
ಆ ದರವೇಶಿ
ಇರುವಂತೆ
೫
ಜನುವು ಜನುವುದ ದಾಹ
ಎಂದಿಗೆ ಸ್ನೇಹ
ದೊರೆವುದೊ ಆಹ
ಎಂದುರಿದು
೬
ಇದುವೆ ಇರುಳಿನ ಹಾದಿ
ಬೆಳಕಿನ ಬೂದಿ
ಅದಕೆ ಅನಾದಿ
ಎಂದರಿದು

೭
ಉಳಿವುದೇ ತಾ ಬಾಳಿ
ಹೇಳಿ ಕೇಳಿ
ಕೊನೆಗೂ ಗಾಳಿ
ಈ ಉಸಿರು.

೮
ಕೊಲ್ಲುವವನೇ ಕಾವ
ತಾಳೆನೆ ನೋವ
ಇಂದಿಗೆ ಜೀವ
ಬರಿ ಹೆಸರು.

೯
ಆಸೆಯುಸಿರನು ಚಾಚಿ
ಹೊರಟ ಪಿಶಾಚಿ
ಗಾಳಿಯ ಬಾಚಿ
ಬರುತಿಹುದೋ.

೧೦
ನರಕ ತಪ್ಪಿಸಿ ಚಿನ್ನ
ಕಾವುದು ನನ್ನ
ಮುಕ್ತಿಯು ನಿನ್ನ
ಹೊರತಿಹುದೋ?

ಭಾವ : ಗೀತ ಕಥೆಯಲ್ಲಿ ಬರಬೇಕಾದ ಹಾಡು. ವಿರಹದಿಂದ ಪಾರಾಗುವುದು ಒಂದು ಅಗ್ನಿ ಪರೀಕ್ಷೆ. ವಿರ
ತಪ್ಪಿಸಲುಬಾರದ ಘಟನೆ. ಅದನ್ನು ಸ್ವೀಕರಿಸಿ ಬಾಳಿ ತೋರಿಸುವುದೇ ಸಾರ್ಥಕತೆ.

೨೮ ದವನ-ಕವನ

೧
ನೀನು ಈವೆ ನನಗೆ ದವನ
ನಾನು ಈವೆ ನಿನಗೆ ಕವನ!
ನನ್ನ ಭಾವಕೇನೆ ಎನ್ನು
ಅದುವೆ ಪ್ರೇಮ ಮೋಹವು
ನಿನ್ನ ಭಾವಕೇನು ಎನಲಿ?
ನನಗೆಯೆ ಸಂದೇಹವು

೨
'ಶುಷ್ಕವಾದರೇನು ದವನ
ಮೈಗಂಪನು ತರದೆ ಪವನ?''
ಎನ್ನಬಹುದು ನೀನು ಎತ್ತಿ-
ಕಟ್ಟ ನಿನ್ನ ಕಾಣಿಕೆ
ನನ್ನ ಕವನ ತೋರಬಹುದು
ಬರಿಯ ಮಾತ ಪೋಣಿಕೆ.


೩
ಪ್ರೇಮ ಮಾಡೆ ಮೋಹ-ಹವನ
ಕಟ್ಟಿಕೊಂಡಿತೆನ್ನ ಕವನ
ದವನ-ಗಿವನ ಕಂಪು-ಗಿಂಪು
ಎಲ್ಲ ಮರೆತ ಮೇಲೆಯು
ಮೆರೆವುದಿದರ ಭಾವ ಇದಕೆ
ಇಲ್ಲ ಹೊತ್ತು ವೇಳೆಯು.

೪
ನಾನು ನೀನು ಬರಿಯ ನೆವನ
ಕೂಡಿಹವಿದೊ ದವನ ಕವನ
ಒಂದು ಭಾವ ಒಂದು ಹಾವ
ಗೋಪು ಹೆಣೆದುಕೊಂಡವು
ಬಾಡದಂತೆ ಬದುಕುವಂಥ
ಬಾಳ ನೆಲೆಯ ಕಂಡವು

೫
ನನ್ನ ನಿನ್ನ ಜೀವ ಜವನ
ದವಡೆ ಮೀರಿಯೊಂದು ಭುವನ-
ದಲ್ಲಿ ಒಂದನೊಂದ ಕಂಡು
ಗುರುತು ಹಿಡಿದು ಮುತ್ತವೇ ?
'ದವನಗಂಪೆ' 'ಕವನದಿಂಪೆ'
ಎಂದು ಎದೆಯನೊತ್ತವೇ ?
೬
ಚಿಂತಿಸುತಿಹೆ ಅವನ ಇವನ
ಕಾಣೆ ತೆರೆದ ಹೃದಯಭವನ
ಬಾಡಬೇಡ ದವನದಂತೆ
ಮುಗಿಯಬಹುದು ಬೇಗ ಸಂತೆ
ಕಂಪಿಗೆ ಗರಿ ಮೂಡಿದಂತೆ
೭
ಹಾರಿ ಸಾರಿ ಬಾ
ಸಖಿ ಸಖನಿಗೆ ಕೂಡಿದಂತೆ
ಆರಿ ಏರಿ ಬಾ.

ಭಾವ : ಪ್ರೇಮದ ಗೀತಕಥೆ. ಪ್ರಿಯಕರ ಮತ್ತು ಪ್ರೇಯಸಿಯರಲ್ಲಿ ಪತ್ರ ಪ್ರೇಮ ಬೆಳೆದಂತಿದೆ.

ಶಬ್ದಾರ್ಥ : ನೆವ=ನೆಪ, ನಿಮಿತ್ತ. ಹಾವ=ಅಂಗ ವಿನ್ಯಾಸದಿಂದ ಪ್ರಕಟಿಸುವ ಭಾವ, ಶೃಂಗಾರ ಚೇಷ್ಟೆ, ಬೆಡಗು. ಜವ=ಯಮ.



೨೯ ಗಮಗಮಾ ಗಮಾಡಸತಾವ ಮಲ್ಲಿಗಿ

ಗಮಗಮಾ ಗಮಾಡಸತಾವಽ ಮಲ್ಲಿಗಿ। ನೀವು ಹೊರಟಿದ್ದೀಗ ಎಲ್ಲಿಗೆ?
ಗಮಗಮಾ.......... ॥ ಪಲ್ಲವಿ ॥

೧
ತುಳುಕ್ಯಾಡತಾವ ತೂಕಡಿಕಿ
ಎವಿ ಅಪ್ಪತಾವ ಕಣ್ಣ ದುಡುಕಿ
ಕನಸು ತೇಲಿ ಬರತಾವ ಹುಡುಕಿ ॥
ನೀವು ಹೊರಟಿದ್ದೀಗ ಎಲ್ಲಿಗೆ?

೨
ಚಿಕ್ಕ ತೋರಸ್ತಾವ ಚಾಚಿ ಬೆರಳ
ಚಂದ್ರಾಮ ಕನ್ನಡೀ ಹರಳ
ಮನಸೋತು ಆಯಿತು ಮರುಳ ॥
ನೀವು ಹೊರಟಿದ್ದೀಗ ಎಲ್ಲಿಗೆ?

೩
ಗಾಳಿತಬ್ಬತಾವ ಹೂಗಂಪು
ಚಂದ್ರನ ತೆಕ್ಕಿಗಿದೆ ತಂಪು
ನಿಮ ಕಂಡರ ಕವದಾವ ಜೊಂಪು ॥
ನೀವು ಹೊರಟಿದ್ದೀಗ ಎಲ್ಲಿಗೆ?

೪
ನೆರಳಲ್ಲಾಡತಾವ ಮರದ ಬುಡಕಽ
ಕೆರಿ ತೆರಿ ನೂಗತಾವ ದಡಽಕ
ಹೀಂಗ ಬಿಟ್ಟು ಇಲ್ಲಿ ನನ್ನ ನಡಽಕ
ನೀವು ಹೊರಟಿದ್ದೀಗ ಎಲ್ಲಿಗೆ?

೫
ನಮ್ಮ ನಿಮ್ಮ ಒಂದತನದಾಗ
ಹಾಡು ಹುಟ್ಟಿ ಒಂದು ಮನದಾಗ
ಬೆಳದಿಂಗಳಾತು ಬನದಾಗ ॥
ನೀವು ಹೊರಟಿದ್ದೀಗ ಎಲ್ಲಿಗೆ?

೬
ನಾವು ಬಂದೆವಲ್ಲಿದಿಲ್ಲಿಗೆ
ಬಾಯಿ ಬಿಟ್ಟವಲ್ಲ ಮಲ್ಲಿಗೆ
ನೀರೊಡೆದಿತಲ್ಲ ಕಲ್ಲಿಗೆ
ನೀವು ಹೊರಟದ್ದೀಗ ಎಲ್ಲಿಗೆ ?॥
೭
ಬಂತ್ಯಾಕ ನಿಮಗ ಇಂದ ಮುನಿಸು
ಬೀಳಲಿಲ್ಲ ನಮಗ ಇದರ ಕನಸು
ರಾಯಾ ತಿಳಿಯಲಿಲ್ಲ ನಿಮ್ಮ ಮನಸು
ನೀವು ಹೊರಟದ್ದೀಗ ಎಲ್ಲಿಗೆ ?॥

ಭಾವ : ಒಂದು ಗೀತ ಕಥೆಯಲ್ಲಿ ಬರಬೇಕಾದ ಹಾಡು. ದವನದ ಹುಣ್ಣಿಮೆಯ ಜಾತ್ರಿಯ ರಾತ್ರಿಯು ಇದೇ ಮಾಲೆಗೆ ಸೇರಬೇಕು. ನಾಟ್ಯಗೀತ.



೩೦ ಹಿಂದಽ ನೋಡದಽ

(ಒಂದು ಹಳೆಯ ಚಿತ್ರವನ್ನು ಕುರಿತು)

ಹಿಂದಽ ನೋಡದಽ । ಗೆಳತಿ
ಹಿಂದಽ ನೋಡದಽ ॥ ಪಲ್ಲವಿ ॥

೧

ಒಂದೇ ಬಾರಿ ನನ್ನ ನೋಡಿ
ಮಂದ ನಗೀ ಹಾಂಗಽ ಬೀರಿ
ಮುಂದಽ ಮುಂದಽ ಮುಂದಽ ಹೋದ ॥ ಹಿಂದಽ.....

೨

ಗಾಳಿ ಹೆಜ್ಜೆ ಹಿಡದ ಸುಗಂಧ
ಅತ್ತಽ ಅತ್ತಽ ಹೋಗುವಂದ
ಹೋತ ಮನಸು ಅವನ ಹಿಂದಽ ॥ ಹಿಂದಽ.....

೩

ನಂದ ನನಗ ಎಚ್ಚರಿಲ್ಲ
ಮಂದಿಗೊಡವಿ ಏನಽ ನನಗಽ
ಒಂದೇ ಅಳತಿ ನಡದದ ಚಿತ್ತ ॥ ಹಿಂದಽ.....

೪

ಪೂಜಿ ಹಿಂದ ಧಾರಧಾಂಗ
ಕೊಳ್ಳದೊಳಗ ಜಾರಿಧಾಂಗ
ಹೋತಽ ಹಿಂದ ಬಾರಧಾಂಗ ॥ ಹಿಂದಽ.....

- ರಚನೆ : ಮಂಗಳವಾರ, ಜುಲೈ ೧೯೪೨

ಭಾವ : ಅಪರೂಪ ಅನುಭವದ ವಿರಹಗೀತ.

೩೧ ತಾಜಮಹಲ


೧

ಭರತಖಂಡವನಾಳಿದಂಥ ಭೂಪತಿಯೊಬ್ಬ
ಮರ್ತ್ಯದೇಹವನೊಂದು ಮೆಚ್ಚಿ ಜೀವಿತಸಾರ-
ವಾದ ಪ್ರೇಮವನದಕೆಯಿತ್ತು, ಅಪರಂಪಾರ
ವೈಭವದ ಮಂದಿರವನದಕೆ ಕಟ್ಟಲು, ಕಬ್ಬ-
ಬಿಲ್ಲ ಮಾಡಿದ ಕುಸುಮಶರನು ಸೋಲುತ, 'ಅಬ್ಬ!
ಕಲ್ಲಲುಂಟೇ ನಲ್ಲೆಗೊಲಿದು ನಲಿವ ಪ್ರಕಾರ!'
ಎಂದ; ಅಂದಿಂದಿಗೂ ಪ್ರೇಮಯಾತ್ರೆಗೆ ಯಾರ
ಎದೆಯು ಒಲೆದಿದೆ ಅವಗೆ ಇದನು ಕಂಡರೆ ಹಬ್ಬ.

೨

ಬೆಲೆ ಕಟ್ಟಬರದ ಈ ಪ್ರೇಮ-ಸ್ಮಾರಕ ಕೊನೆಗೆ
ಕಾಲಲೀಲೆಗೆ ಈಡೆ? ಎದುರಿಸುವರೇ ಜವನ?
ಮಣ್ಣ ಪ್ರಕೃತಿಗೆ ಸದಾ ಮಣ್ಣ ಆಟವೆ ಸಾಜ
ಅಂದು ಕಥೆಯಾದೀತು ಇಂದಿನದ್ಭುತ ತಾಜ;
ಬಿಟ್ಟಾವು ಈ ಕಥಾಕಲ್ಪವೃಕ್ಷದ ಗೊನೆಗೆ
ಪ್ರೇಮಸ್ಮಾರಕಕೆ ಸಾವಿರದ ಸಾವಿರ ಕವನ.

ಭಾವ : ತಾಜಮಹಲ ಎಂಬ ಅದ್ಭುತವನ್ನು ಕಂಡು ಬಂದ ಬಳಿಕ ಬರೆದ ಕವನ. ಪ್ರೇಮದ ಸ್ಮಾರಕವು ಪ್ರೇಮ ತತ್ತ್ವದ ಜೀವಂತಿಕೆಯ ಲಕ್ಷಣ.



೩.೨ ಶಿವ-ದೃಷ್ಟಿ

೧
ಅವನ ನೋಟ ಅವಳ ಕೂಟ ಏನೊ ಆಟವಾಡಿತು
ಏನೇನೋ ಮಾಡಿತು.
ಕೂದಲನ್ನು ಹಣೆಗೆಯಂತೆ ಹಿಕ್ಕಿ ಹಿಕ್ಕಿ ಬಾಚಿತು।
ಕುರುಳಿಗೆ ಕುಡಿ ಚಾಚಿತು॥
೨
ಹಣೆಯ ಓರೆ ತಿಂಗಳಲ್ಲಿ ಉಬ್ಬಿ ಉಬ್ಬಿ ಹಬ್ಬಿತು।
ಮತ್ತೆ ಮುತ್ತಿ ತಬ್ಬಿತು॥
ಕಣ್ಣ ಚಿಕ್ಕೆಗಳಲಿ ಕೆಳೆಯನೆಳಸಿ ಬಳಸಿ ಸಂದಿತು।
ಒಂದುಗೂಡಿ ನಿಂದಿತು॥
೩
ಕೆನ್ನೆಗಳಿಗೆ ಕಿರಣ ಹರಡಿ ಮೆಲ್ಲನೆ ತುಟಿ ಮುಟ್ಟಿತು।
ಮೆಲುನಗೆಯೊಲು ತಟ್ಟಿತು॥
ಕೊರಳಿನಲ್ಲಿ ಜೋತು ಹೆಗಲಿನಲ್ಲಿ ಸೋತು ಬದ್ದಿತು।
ಬಾಹುಲತೆಯ ತಿದ್ದಿತು॥
೪
ಕೈ ಕೈಯನು ಹಿಸುಕುವಂತೆ ಬೆರಳಿನೊಡನೆ ಆಡಿತು।
ತಂಪು ಮೆಲುಪು ನೋಡಿತು॥
ಎದೆಯ ಆಳದಲ್ಲಿ ಮುಳುಗಿ ಅದರ ಹರುಹ ಬೆಳಗಿತು।
ಅದರೆತ್ತರಕುಳಿದಿತು॥

೫
ಪಕ್ಕೆಗಳಿಗೆ ತೆಕ್ಕೆ ಬಿದ್ದು ಕಂಕುಳನ್ನು ಸೋಂಕಿತು।
ಬೆನ್ನ ತಟ್ಟಿ ನೂಂಕಿತು ॥
ನಡುವಿಗೆ ನಡುಪಟ್ಟೆಯಾಗಿ ತೊಡೆಗಳಲ್ಲಿ ತಂಗಿತು।
ಧ್ಯಾನದಲ್ಲಿ ಇಂಗಿತು ॥
೬
ಅಡಿಯಿಂದಲೂ ಮುಡಿಯ ವರೆಗು ಅಳೆದು ಬೆಳೆದು ಹೊಳೆದಿತು।
ಮೈಯ್ಯನೆಲ್ಲ ತೊಳೆದಿತು ॥
ಅಂತರಂಗದಲಿ ತರತ್ತರಂಗವಾಗಿ ಮೂಡಿತು
ಅಂತರಾತ್ಮಗೂಡಿತು।

ಭಾವ : ಹರಿಹರನ ಗಿರಿಜಾ ಕಲ್ಯಾಣದಲ್ಲಿಯ ಗಿರಿಜಾ ದೃಷ್ಟಿಯನ್ನು ಕುರಿತು ಬರೆದ ಶ್ಲೋಕದಿಂದ ಪ್ರೇರಿತ. ಶಿವ-ಶಕ್ತಿ ಮಿಲನದ ಸಹಜತೆ ಇಲ್ಲಿ ವ್ಯಕ್ತವಾಗಿದೆ. ಇಲ್ಲಿಯ ಕಾಮ ದೈವಿಕ ಕಾಮ. ತಾರಕ ಸಂಹಾರಕ್ಕಾಗಿ ಶಿವಶಕ್ತಿ ಮಿಲನದ ಅಪರಿಹಾರ್ಯವಾದ ಪ್ರಸಂಗ.



೩೩ ಕೊಡುವುದೇನು ? ಕೊಂಬುದೇನು?

೧

ಕೊಡುವದೇನು ? ಕೊಂಬುದೇನು ?
ಒಲವು, ಸ್ನೇಹ, ಪ್ರೇಮ,
ಹೊರಗೆ ಬರಿದು, ಒಳಗೆ ಬಲಿದು
ಇದ್ದವರಿಗೆ ನೇಮ.

೨

ರವಿಯು ಶಶಿಯು ತಂಪು ಬೆಳಕು
ಛಂದದ ಋತುಮಾನ
ಒಲಿಸಿ ಒಲಿವ ನಲಿಸಿ ನಲಿವ
ಜೀವ ದಿವ್ಯಗಾನ

೩

ಹೃದಯ ಹೀನ ! ಜೀವ ದೀನ !
ದೇವ ಬಡವನೇನೋ ?
ನೆಲವು ನೀರು ಗಾಳಿ ಬೆಳಕು
ಬಾನು ತುಂಬ ಜೇನು.

೪

ಕಷ್ಟದಲ್ಲು ಅವನ ಕರುಣೆ
ಮಾಲೆಮಾಲೆಯಾಗಿ
ನಮ್ಮ ಕಟ್ಟಿ ಎಳೆವುದಣ್ಣ
ಮುಕ್ತಿಶಾಲೆಗಾಗಿ

೫

ಅಮೃತದೊರತೆಗೇನು ಕೊರತೆ ?
ಅವನ ಹೊರತೆ ಬಾಳು
ಎದೆಯ ಒಲುಮೆ ಅವನ ಕುಲುಮೆ
ಬೇರೆ ಒಲುಮೆ ಹಾಳು.

೬

ಕೊಟ್ಟು ಕೊಂಡು ಬೆಳೆವುದೆಲ್ಲ
ಪ್ರೇಮಕಲ್ಪವಲ್ಲಿ
ಹೂವೊಳಿಲ್ಲಿ ಚಿಕ್ಕೆಯಲ್ಲಿ
ಜೀವ ಜಾತದಲ್ಲಿ.

೭
ಕಾಯದುಸಿರ ಕಳೆದು ನೋಡು
ಜೀವದುಸಿರನೆಳೆದು ನೋಡು
ಅವನ ಒಲವ ನಂಬಿ
ನಲಿವು ಬಲವು ಹಲವು ಚಿಲವು
ಜಗದ ಮೂಲವೆಂಬಿ
ಜೀವನಯನ ತೆರೆಯೆ ಕಾಂಬಿ
ಒಲವಿನಲ್ಲೆ ತುಂಬಿ.

ಭಾವ : 'ತುಂಬಿ ಬಂದಿತ್ತು' ಎಂಬ ಕವನದಂತೆ ಈ ಕವನ ನನ್ನ ತಲೆದಂಡ ನಾಟಕಕ್ಕಾಗಿ ಬರೆದದ್ದು. ಈ ಹಾಡನ್ನು ಕಿನ್ನರಿ ಬೊಮ್ಮಯ್ಯ ಹೇಳುತ್ತಾನೆ ಎಂದು ಕಲ್ಪಿಸಲಾಗಿದೆ. ಒಲವಿನ ಮಹತ್ತ್ವವನ್ನು ಸಾರಲಾಗಿದೆ.





ಭಾಗ - ಊ

ತತ್ತ್ವ : ಸೃಷ್ಟಿ ಕವನಗಳು

ಗಂಗಾವತರಣ - ತತ್ತ್ವ ಸೃಷ್ಟಿ ಕವನಗಳು

ಈ ವಿಭಾಗದಲ್ಲಿ ಎಂಟು ಕವನಗಳಿವೆ. ''ತತ್ತ್ವ ಸೃಷ್ಟಿ ಎಂಬುದು ವಿಭಜನೆಯ ಶಿರೋನಾಮವಾಗಿದ್ದರಿಂದ ಜೀವನದಲ್ಲಿ ತತ್ತ್ವದ ಅರಿವು ಮಾಡಿಕೊಳ್ಳುವುದು ಅವಶ್ಯ. ತಮ ಮತ್ತು ರಜವನ್ನು ಗೆದ್ದು ತತ್ತ್ವವನ್ನು ಬೆಳೆಸಿಕೊಳ್ಳುವುದು ಪ್ರತಿ ಮನುಷ್ಯ ಎದುರಿಸಬೇಕಾದ ಆಹ್ವಾನ ಇದಕ್ಕೆ ಸಾಧನೆ ಅವಶ್ಯ ತತ್ತ್ವದಿಂದ ಕಾವ್ಯಸತ್ತ್ವ ಕಾವ್ಯಸತ್ತ್ವವೇ ಕವನ ಸೃಷ್ಟಿಯ ಬೆನ್ನೆಲುಬು!

ಮುಮುಕ್ಷು, ಜಿಜ್ಞಾಸು, ಸಾಧಕ ಮತ್ತು ಸಿದ್ಧ ಎಂಬ ನಾಕು ಅವಸ್ಥೆಗಳಿವೆ. ಇವುಗಳ ಪರಿಚಯ, ತಿಳಿದುಕೊಳ್ಳುವ ನಿಶ್ಚಯ, ಪ್ರಯತ್ನ ಅವಶ್ಯ. ಸಾಧಕನಿಗೆ ಸಿದ್ಧಿ ಸಾಧ್ಯ.

ಈ ದೃಷ್ಟಿಯಿಂದ ಜಿಜ್ಞಾಸೆ ಮತ್ತು ಹಂಸದ ಹಾಡು ಒಂದಃ ಗುಂಪು. ಜಿಜ್ಞಾಸು ಕೇಳಿಕೊಳ್ಳಬೇಕಾದ ಪ್ರಶ್ನೆ ಸಾಮಾನ್ಯನಿಗೆ ಪ್ರಮುಖ ಎನಿಸುವದಿಲ್ಲ. ಪ್ರಶ್ನೆಗಳಿಗೆ ಒಂದು ಉತ್ತರ ''ಹಂಸೋ ಸೋಹಂ''=ನಾನೇ ಅವನು (ಪರಮಾತ್ಮನು) ಹಂಸದ ಹಾಡು.

''ಜೋಗಿ'' ಬೇಂದ್ರೆಯವರ ಜಿಜ್ಞಾಸೆ ಮೂಡಿಸಿದ ರಮ್ಯ ಮಾಯಾಲೋಕ. ಆದರಿಂದ ಮುಕ್ತರಾಗಲು ತಾಯಿ-ಅಂಬಿಕೆ ಅನುಸರಿಸಿದ ನಾಟಜಪವೇ ಹಾದಿ. ಇದು ಸಾತ್ವಿಕ ಪಥದ ತಾತ್ವಿಕ ನಿಲುವು.

''ಬದುಕು ಮಾಯೆಯ ಮಾಟ'' ಮತ್ತು ''ನಸುಕಿನ ಮೌನ'' ಇವು ''ಗೆಳೆಯರ ಗುಂಪು'' ೧೯೪೮-೪೯ರಲ್ಲಿ ಆಚರಿಸಿದ ಮೌನ ಸಪ್ತಾಹಗಳ ಫಲ. ಮೌನ ವ್ರತವೂ ಹೌದು ; ಧ್ಯಾನವೂ ಹೌದು. ಆ ಧ್ಯಾನದಲ್ಲಿ ಆದ ಸೃಷ್ಟಿ ಈ ಎರಡು ಕವನ.

ಹೂವೆ, ಮಲ್ಲಿಗೆ ಮತ್ತು ನಸುಕು ಬಂತು ನಸುಕು - ಇವು ಕವನ ಸೃಷ್ಟಿಗೆ ಆಲಂಬನ ಹಾಗೂ ಉದ್ದೀಪನ ವಿಭಾವಗಳು.

- ಸಂ.

೩೪ ಹಂಸದ ಹಾಡು

ಕೇಳಿಲೆ ಕೆಳದಿ ಹಂಸದ ಹಾಡು
ಈ ಹಾಡಿಗೆ ಬೇರಾವುದು ಈಡು ॥ ಪಲ್ಲವಿ ॥

೧

ಹಂ ಹಂ ಎನ್ನುತ ಹೊರಟಿತು ಉಸಿರು
ಸಃ ಸಃ ಎನ್ನುತ ಹೊಕ್ಕಿತು ಉಸಿರು
ಹಂ ಸೋ ಹಂ ಸಃ ಎನುತಿದೆ ಉಸಿರು

೨

ಮಲಗಲಿ ಏಳಲಿ ಹಂ ಸೋ ಹಂ ಸಃ
ಕೂಡಲಿ ಮಾಡಲಿ ಹಂ ಸೋ ಹಂ ಸಃ
ಹಗಲೂ ಇರುಳೂ ಹಂ ಸೋ ಹಂ ಸಃ

೩

ಉಸಿರಲಿ ಹಾರುವ ಜೀವದ ಹಂಸ
ಶ್ವಾಸೋಚ್ಛ್ವಾಸದ ರೆಕ್ಕೆಯ ಹಂಸ
ಒಳಗೂ ಹೊರಗೂ ಒಂದೇ ಹಂಸ.

೪

ಹಂ ಎನೆ ನಾನು ಸಃ ಎನೆ ತಾನು
ಇದನೆ ಎನ್ನುವೆವು ನಾನೂ ನೀನೂ
ಬೆಸುಗೆ ಹಾಕಿತದು ಆಕೆಯು ಅವನು.

೫

ಪ್ರಾಣವ ಕುಡಿವುದು ಜೀವದ ಜ್ಯೋತಿ
ಹಾಲ ಕುಡಿಯುವೊಲು ಹಂಸದ ಜಾತಿ
ನೀರನು ಬಿಡುವುದು ಅದರಾ ರೀತಿ

೬

ಪ್ರಾಣದೊಳಿರುವದು ಹಾಲೂ ನೀರು
ನೀರನು ಬೆರಸದ ಹಾಲನು ಹೀರು
ಬೆಂಕಿಯು ಕಂಡಾ ಹದವನು ತೋರು.

೭

ಹಂಸೋ ಹಂಸಾ ಎನುತಿದೆ ಉಸಿರು
ಹಂಸಾ ಎನುತಿದೆ ಗಾಳಿಯ ಬಸಿರು.
ಬಯಲ ತುಂಬಿ ಈ ಹೆಸರೇ ಹೆಸರು.

೮
ಹಂಸವು ಕೇಳಿತು : ಎಲ್ಲಿಹೆ ಬ್ರಹ್ಮಾ?
ಬ್ರಹ್ಮವು ಹೇಳಿತು : ಇಲ್ಲಿಹೆ ತಮ್ಮಾ,
ಬಿಡುಗಡೆ ಇಲ್ಲವು ನಮ್ಮಾ ನಿಮ್ಮಾ.
೯
ತಿಳಿದು ಬದುಕಿದರೆ ಬಾಳೇ ಒಂದು
ತಿಳಿಯದ ನೀರಲಿ ಕಂಡೀತೆಂದು ?
ಹಮ್ಮಿನ ಹುರುಳಿನ ಆತನ ಹೊಂದು
೧೦
ಈ ಹಾಡನೆ ಇಡಿ ಜಗ ಹಾಡುವದು.
ಜೀವಕೋಟಿಯೂ ಇದಕಾಡುವದು
ಇದರರಿವಿರದೆಲ್ಲಾ ಬಾಡುವದು.

ಭಾವ : ಪ್ರಾಣೋಪಾಸನೆಯೇ ನಿಜವಾದ ಸಾಧನೆ. ಈ ಸಾಧನೆಯಿಂದ ಕಂಡ ಪ್ರಕಾಶವು ಜೀವಿತಕಾರ್ಯದ ಮಾರ್ಗಶಕ್ತಿಯಾಗುತ್ತದೆ. ನಮ್ಮ ನಿಮ್ಮ ಶ್ವಾಸದ ಧ್ವನಿತಾರ್ಥ ಅಥವಾ ದಿವ್ಯಧ್ವನಿ ಸೃಷ್ಟಿಸಿದ ಹಾಡು ಇದು.



೩೫ ಬದುಕು ಮಾಯೆಯ ಮಾಟ

೧
ಬದುಕು ಮಾಯೆಯ ಮಾಟ
ಮಾತು ನೊರೆ-ತೆರೆಯಾಟ
ಜೀವಮೌನದ ತುಂಬು ಗುಂಭ ಮುನ್ನೀರು
ಕರುಣೋದಯದ ಕೂಡ
ಅರುಣೋದಯವು ಇರಲು
ಎದೆಯ ತುಂಬುತ್ತಲಿದೆ ಹೊಚ್ಚ ಹೊನ್ನೀರು.
೨
ನಿಜದಲ್ಲಿ ಒಲವಿರಲಿ
ಚೆಲುವಿನಲೆ ನಲಿವಿರಲಿ
ಒಳಿತಿನಲೆ ಬಲವಿರಲಿ ಜೀವಕೆಳೆಯಾ
ದೇವ ಜೀವನ ಕೇಂದ್ರ
ಒಬ್ಬೊಬ್ಬನೂ ಇಂದ್ರ
ಏನಿದ್ದರೂ ಎಲ್ಲ ಇಲ್ಲೆ ತಿಳಿಯಾ.
೩
ಆತನಾಕೆಯೆ ನಮ್ಮ
ಜೀವನೌಕೆಯ ತಮ್ಮ
ಧ್ರುವ ಮರೆಯದಂತೆ ನಡೆಸುತ್ತಲಿರಲಿ
ಈ ನಾನು ಆ ನೀನು
ಒಂದೆ ತಾನಿನ ತಾನು
ತಾಳಲಯ ರಾಗಗಳು ಸಹಜ ಬರಲಿ.

ಪ್ರ : ಅಕ್ಟೋಬರ ೧೯೪೯ 'ಜಯಂತಿ' ಸಂ.೧೨, ಸಂ.೫ರಲ್ಲಿ ಪ್ರಕಟ.
'ನಂಬುಗೆ' ಎಂಬ ಶೀರ್ಷಿಕೆ ಇತ್ತು.

ಭಾವ : ನಾನು, ನೀನು, ತಾನು ಈ ಮೂರರ ಸಂಬಂಧಸೂತ್ರ ಅರಿತಾಗ ಮಾಯೆಯ ಆಟ ಅರ್ಥವಾದೀತು. ಒಂದು ಮೌನವಾರದ ಚಿಂತನದ ಭಾವಸಂಪತ್ತು ಈ ಕವನ.

೩೬ ಜಿಜ್ಞಾಸೆ

೧

ಏನು ? ಯಾಕೆ ? ಎಲ್ಲಿ ? ಯಾರು ?
ಎಂದು ತೊದಲನಾಡಿದೆ.
ಅಂದಿನಿಂದ ಇಂದುವರೆಗು
ಅದೇ ಹಾಡ ಹಾಡಿದೆ.

೨


ಹತ್ತು ದೇಶ ನೋಡಿದೆ.
ನೂರು ಶಾಸ್ತ್ರ ಓದಿದೆ
ಮೊದಲು ತೊದಲು ಮಾತಿನಲ್ಲೆ
ಇನ್ನೂ ಇದೆ ಅರಿವಿನಲ್ಲೆ

೩

ಏನು ? ಯಾಕೆ ? ಎಲ್ಲಿ ? ಯಾರು ?
ಇನ್ನೂನು ಕೇಳುವೆ
ಏದೆಯಲವಿತು ಕುಳಿತ ಗುರುವೆ !
ಹೇಳು ಏನ ಹೇಳುವೆ ?


೪


ಕತ್ತಲುಗಳ ದಾಟ ದಾಟ
ಬೆಳಕು ಬೆಳಕು ಎಂದೆನು
ಸಾವು ಸಾಸಿರಗಳ ಸಾರಿ
ಅಮೃತ ಎನುತ ಬಂದೆನು.



೫
ಪಟೆಯ ತೆರೆಯು ತೆರೆಯುತ
ದಿಟವು ಮೇರೆವರೆಯುತ
ಬಂದರೇನು ಎಂದಿನಂತೆ
ಮುಂದೆಯು ಹಿಂದಿದ್ದ ಚಿಂತೆ
೬
ಇದು ಅದೃಷ್ಟ ಇದು ಅಗಮ್ಯ
ಎನುತ ಎನುತ ಸಾಗಿದೆ
ನಿನ್ನ ಪಾದದೆಡೆಗೆ ತಲೆಯು
ಅಡಿಗಡಿಗೂ ಬಾಗಿದೆ.
೭
ಎಲ್ಲಿ ಏನು ರಮ್ಯವಾಗಿ
ಕಂಡರೆ ಮರುಳಾಗಿದೆ.
ಆದರತನದ ಅಗಮ್ಯತೆಗೆ
ಸೋತು ತಲೆಯ ತೂಗಿದೆ.
೮
ಕಾಣುತಲಿದೆ ಭವ್ಯವು
ನೋಡುತಲಿದೆ ದಿವ್ಯವು.
ಒಂದನೊಂದು ಅರಸಿ ಮರೆಸಿ
ಆಗ ಈಗ ಬಿಡಿಸಿ ಬೆರಸಿ
೯
ಜೀವವು ಸಂಭ್ರಮದೊಳೆಂದು
ನಿನ್ನನ್ನೇ ಕರೆದಿದೆ.
ಇಗೋ ಸೃಷ್ಟಿಪುಟದೊಳೆಲ್ಲು
ನಿನ್ನ ಹೆಸರೆ ಬರೆದಿದೆ.

೧೦
ಮಾನವ ಚಾರಿತ್ರ್ಯದಲ್ಲಿ
ಎಷ್ಟೋ ಪ್ರಳಯವಾಗಿವೆ.
ಸ್ತ್ರೀಯ ಪ್ರೇಮ ಪುರುಷ ಭಾಗ್ಯ
ಕಾದು ಕಾದು ಮಾಗಿವೆ.
೧೧
ನಾಗರಿಕತೆ ಮುಳುಗಿವೆ.
ಸಂಸ್ಕೃತಿಗಳು ಬೆಳಗಿವೆ
ಅಧಃಪತನವಾಗುತಿರಲು
ಅವತಾರವು ತೇಗುತಿರಲು
೧೨
ಉದ್ಧಾರದ ಆಸೆಯಾಗಿ
ಮೂಲಜಲಕೆ ಮರಳಿವೆ
ಅಂತರಂಗದತ್ತ ನಯನ
ತಾನಾಗಿಯೆ ಹೊರಳಿವೆ.
೧೩
ಹೃದಯ ಹೂಡಿ ಹತ್ತು ಆಟ
ಇಳಿಸಿ ಪ್ರೇಮಪಾಕಕೆ
ಊಟೆಯಾಗಿ ಎತ್ತಲಿಹುದು
ನರರ ನರಕ ನಾಕಕೆ.
೧೪
ವಿಧಿವಿಲಾಸ ನಡೆದಿದೆ
ಹಳೆಯ ಹಾದಿ ಹಿಡಿದಿದೆ
ಪ್ರಕೃತಿ ತನ್ನ ಹಾಸ ಹಾಸಿ
ಮಾಯೆ ತನ್ನ ಬಲೆಯ ಬೀಸಿ






೧೫
ಬಯಲಿನಲ್ಲಿ ಗಾಳಿಯಾಡಿ-
ದಂತೆ ನಮ್ಮ ಆಡಿಸಿ
ಕ್ರೀಡಿಸುವದು, ಬಾ ಕರುಣಿಸಿ
ಬೇರೆ ಆಟ ಮೂಡಿಸಿ.
೧೬
ನಿನಗೆ ಲೀಲೆ ಸೇರುವಾಗ
ನನಗೆ ಏಕೆ ಬೇಸರ ?
ಕಟ್ಟಿ ಮುರಿದು ಕೆಡಿಸು ಬೆಳಿಸು
ನೀನೆ ನನಗೆ ಆಸರ.
೧೭
ಸಾಗಲಿಂತು ಚಕ್ರವು
ನಿನ್ನ ರೀತಿ ವಕ್ರವು
ನೀನು ಬಾ ಅನಂತನಾಗಿ
ಜೀವ ಇರಲಿ ಅಮೃತವಾಗಿ
೧೮
ತಾಪ, ಪಾಪ, ನೋವು, ದುಃಖ,
ಚಿಂತೆ ಭೋಗದಾಟವು.
ನಟನ ಹಾಗೆ ಎನಿಸಲೆನಗೆ
ನಿನ್ನ ಕಲೆಯ ಮಾಟವು.
೧೯
ಏನು ಆಟ ! ಏನು ಮಾಟ !
ಕುತೂಹಲಕೆ ಆಡುವೆ
ಪ್ರಪಂಚವನು ಚಿತ್ರಿಸುತ್ತ
ನೀನೊ ಕಥೆಯ ಮಾಡುವೆ

೨೦
ತಿಳಿಯದೆಂದು ತಿಳಿದಿತು
ಇಷ್ಟು ನನಗೆ ಹೊಳೆದಿತು
ಅಷ್ಟರಲ್ಲೆ ತೃಪ್ತಿ ನನಗೆ
ದಿನವು ಇದೊ ವಿನೋದ ನಿನಗೆ
೨೧
ಆದರೇನು ಮತ್ತೆ ನಾನು
ಏನು ? ಏಕೆ ? ಕೇಳುವೆ
ಹಳೆಯದನ್ನೆ ಹೊಸೆಯಿಸಿ ನೀ
ರಸ ಹುಟ್ಟಿಸಿ ಹೇಳುವೆ.

ಭಾವ : ಏನು? ಯಾಕೆ? ಎಲ್ಲಿ? ಯಾರು? ಎಂಬ ಪ್ರಮುಖವಾದ ನಾಕು ಮೂಲಭೂತ ಪ್ರಶ್ನೆಗಳಿಗೆ ಉತ್ತರ ಹುಡುಕುವ ವಿಲಾಸ. ಇದು ಜಿಜ್ಞಾಸೆ. ಇದು ಜೀವಂತಿಕೆಯ ಲಕ್ಷಣ.



೩೭ ಜೋಗಿ

೧
ಊರ ತುದಿಯ ಆ ಮೂರು ಬಟ್ಟೆ ಮುಗಿದಲ್ಲಿ ಕೊಳ್ಳವೆಲ್ಲಿ
ಹಳ್ಳ ಅಡಗಿ ಹರಿದಲ್ಲಿ, ತುಡುಗು-ದನ ತೊಂಡು ಮೇಯುವಲ್ಲಿ
ದಿಕ್ಕು ತಪ್ಪತಾರ ತಪ್ಪಿ ಹೊಕ್ಕರಽ ಕಕ್ಕಾವಿಕ್ಕಿಯಾಗಿ
ಇರುಳು ಅಂತನಽ ಹಗಲಽ ಗೂಕತಾವ ಅಲ್ಲಿ ಜೋಡ ಗೂಗಿ
೨
ಅದನ ದಾಟಿ ಆ ಮಸಣವಾಟಿ, ಎಡಕಾಗಿ ಅದರ ಆಚಿ
ಕಾಮ ತನ್ನ ಹಚ್ಚಂಗಿ ಹಾಸಿಧಾಂಗಲ್ಲಿ ನೀರ ಪಾಚಿ
ಹೊಚ್ಚಿ ಹೊಂಡವನು ಮೆಚ್ಚ ಮಾಡತಾವೊ ಕಂಡ ಕಣ್ಣುಗಳಿಗೆ.
ಪಾಚಿ ಸರಿಸಿದಾಗ ಕಪ್ಪು ನೀರು ಕರಿತಾವ ಒಳಗ ಬಳಿಗೆ.
೩
ಅದರ ಮುಂದ ಗವಿಗುಡ್ಡ ಅಡ್ಡ ಬರತಽದ ನಮ್ಮ ಬಲಕ
ಅತ್ತತ್ತ ಹರುಹಿ ಹತ್ತೊತ್ತಿ ಬಂದ ಕಾಳಮ್ಮಗಿರುವ ಹೊಲಕ
ಆ ಹೊಲದ ನಟ್ಟನಡುವಿರುವ ಹುಣಿಸಿಮರ ಏರಿ ನೋಡಿದಾಗ
ಹತ್ತ ಗಿಡದ ಗುಂಪೊಂದು ಕಾಣತದ ಸಣ್ಣ ಏರಿಮ್ಯಾಗ.
೪
ಅಲ್ಲಿ ತೊಗಲಬಾವಲೀ ಚೀರತಾವ ಭರತಿ ಹಗಲಿನೊಳಗ
ಹಿಂಡು ಪಾರಿವಾಳ ಹೊಕ್ಕು ಹೊರಡತಾವ ಮತ್ತ ಒಳಗ ಹೊರಗ.
ಅಲ್ಲಿ ಹಬ್ಬಿ ಹರುಹ್ಯಽದ ಬೇವಿಗೇ ಸುತ್ತ ಅಮೃತಬಳ್ಳಿ
ಹಾಲ ಸುರವತಾವ ಆಲ ಅಲ್ಲಿ ಅಲ್ಲಾಡತಾವ ಅಳ್ಳಿ.
೫
ಅತ್ತಿಗಿಡಕ ಹತ್ಯಾವ ಹಲಸಿನ್ಹಂಗ ಬುಡಕು ಕೆಂಪು ಹಣ್ಣು
ಜೇನು ತುಂಬಿ ತೊಟಗುಟ್ಟತಾವ ಅದ ಬಯಸತಾವ ಕಣ್ಣು
ಈ ತೋಪಿನ್ಯಾಗ ಬೆಳದಽದ ಹ್ಯಾಂಗೋ ಮೂಲ್ಯಾಗ ತಪ್ಪಿ ಮಾವು.
ಅದರಡಿಗೆ ಹುತ್ತ ಅದರಾಗ ಐತೆ ಒಂದೇಳ ಹೆಡೆಯ ಹಾವು.

೬

ಆ ಮಾವಿನೊಳಗ ಈ ಸುಗ್ಗಿಯೊಳಗ ಬಂದಽದ ಕೋಗಿಲೊಂದು
ತನ್ನ ಜೋಡಿ ಕರೆದ್ಹಾಂಗ ಕರೀತಽದ ನನ್ನ ಬಾರಽ ಅಂಧು
ಕೂಗೇ ಕೂಗತಽದ ಕೂಗೇ ಗೂಗತಽದ ಗಿರಣಿ ಕರೆಯೊ ಹಾಂಗ
ತೆರಪು ಇಲ್ಲ ಒಂದಳತಿ ಕೂಗತಽದ ಬ್ಯಾಸರಿಲ್ಲಧಾಂಗ.

೭

ತಿಳಿಯದ್ಯಾವದೋ ಕಂಪು ಎಳೀತಽದ ತುಂಬಿ ಹುಚ್ಚು ಆಗಿ
ಎಚ್ಚರಿಲ್ಲದಽ ಎತ್ತೊ ತಿರಗತಾವ ದಿಕ್ಕು ತೋರದಾಗಿ.
ಬಂತು ಸುಗ್ಗಿ ಬಂದಽದ ಸುಗ್ಗಿ ಬರತಽದ ಸುಗ್ಗಿ ಎಂದು
ಕುಹೂ ಅನ್ನತದ ಕುಹೂ ಅನ್ನತದ ಕುಹೂಕ್ಕುಹೂ ಅಂದು.

೮

ತಾರ ಪಂಚಮದಾಗ ಕೋಗಿಲಾ ಕೂಗತಽದೊ ಜೋಗಿ
ಯಾವ ಬಣ್ಣ ಅದಕಾವ ಕಣ್ಣು ನಾ ನೋಡಲೇನು ಹೋಗಿ ?
ತೋಟವೆಲ್ಲ ಹೂವಾಗಿ ನಿಂತು ತೊಂಗೆಲ್ಲ ಗೊಂಚಲಾಗಿ
ಪಾಡು ಆಗತಾವ, ಹಣ್ಣು ಆಗತಾವ, ಅದರ ಲಯಕೆ ತೂಗಿ.

೯

ಮುಂಜಾವತೊಟ್ಟು ಇರು ಹಂಗು ಬಿಟ್ಟು ಬರಿ ಹಾಂಗ ಕೂಗತಽದೋ
ತಲಿ ಕಾವಿನೊಳಗ ಇಮ್ಮಾವಿನೊಳಗ ಬಿಸಿಗಾಲ ನೂಗತಽದೋ
ಕೊಳಲ ನುಡಿಸಿಧಾಂಗ ಕುಹೂಹುಹೂಹೂ ಉಲಿತಽದೊ ಜೋಗಿ
ಬೇರೆ ಕೆಲಸದಾಗ ಮನಸು ತೊಡಗದೋ ನೋಡಲೇನು ಹೋಗಿ ?

೧೦

ಬಂದೆ ಜೋಗಿ ಬಾ, ಬಾರೊ ಜೋಗಿ ಬಾ, ಏನು ಹೊತ್ತು ಬಂದಿ
ನೀನೆ ಹೇಳಿದಾ ನಾವು ಜಪಿಸುವಾಗ ಬಂತೊ ಸುಗ್ಗಿ ಸಂಧಿ.
ತಲೆಯ ಯಾವದೋ ನಾಡಿಯೊಳಗ ಸುರುವಾತು ಸುಗ್ಗಿ ಸೊಲ್ಲು
ಮುಂದೆ ಕೇಳಿದರ ಅದಽ ತುಂಬಿತೋ ಮೂಲೆ ಮೂಲೆಯಲ್ಲು.

೧೧

ಗುಡಿಗೆ ನಾನು ಹೊರಟಾಗ ಕರೀತದ ಕುಹೂಕ್ಕುಹೂ ಎಂದು
ಮನದ ಜಪದ ನಡುನಡುವೆ ನುಡೀಽತಽದ ಓಂ ಕುಹೂ ಎಂದು.
ಕನಸಿನೊಳಗ ನಾ ಸ್ವರಾ ಕೇಳಿ ಮಾಮರಾ ಆಗತೇನೋ
ಅಂತ ಭ್ರಮಾ ಆಗ್ಯಽದ ಮನಕ ನೀ ಬಂದೆ ಜೋಗಿ ಏನೋ !

೧೨
ಯಾವ ಸ್ವರಾ? ಇದು ಯಾವಕೋಗಿಲಾ ? ಯಾವ ಮರವೊ ಏನೋ
ಯಾಕ ಹೀಂಗ ಅಸರಂತ ಕೂಗತದ ಏನು ಇದಕೆ ಬ್ಯಾನ್ಯೊ ?
ಸುತ್ತು ಗುಡ್ಡ ನುಗ್ಗಾಗಿ ಹೋದವೋ ಓಗೊಟ್ಟು ಇದಕss
ಬಿಸಿಲು ಕುಣಿದು ಬೆವತsದ ಈಗ ಬಂದsದ ಮಳಿಯ ಹದಕss.

- ರಚನೆ : ೧೯೪೨

ಭಾವ : ಧಾರವಾಡದ ಸುತ್ತಲಿನ, ಸೋಮೇಶ್ವರ ಗುಡಿಯ ಹಾದಿಯ ನಿಸರ್ಗದ ಮಾಯೆಯಿಂದ ಒಳ ಜೀವನದೊಳಗಿನ ಕಾಳ ರಾತ್ರಿಯ ಭಯಾನಕ ಸಂಶಯಾಕುಲಿತ ಭಾವನೆಯಿಂದ ಉದಿತವಾದ ಭಾವಗೀತ.

ಶಬ್ದಾರ್ಥ : ತೊಂಡು=ತುಂಟತನ, ತುಡುಗುತನ. ಹಚ್ಚಂಗಿ=ಹಚ್ಚು-ಹಸಿರು+ಅಂಗಿ=ತೊಡುಗೆ. ಪಾಚಿ=ಹಾವಸೆ. ಹಂಗು=ದಾಕ್ಷಿಣ್ಯ, ಋಣ.

ವಿಶೇಷ : ದಿ|| ತೀ.ನಂ.ಶ್ರೀ ಅವರು ಧಾರವಾಡದಲ್ಲಿ ಪ್ರಾಧ್ಯಾಪಕರಾಗಿರುವಾಗ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕವನಾರ್ಥದ ರಹಸ್ಯ ದರ್ಶನ ಮಾಡಿಸಿದರು. ಈ ಸಂಪೂರ್ಣ ಕವನ ಬೇಂದ್ರೆಯವರ ತಾಯಿ, ಗೋಂದವಲೇಕರ ಮಹಾರಾಜರಿಂದ ರಾಮ ನಾಮೋಪಾಸನೆಯ ಉಪದೇಶ ಪಡೆದು ಸಾಧನೆ ಮಾಡುವಾಗ ಅನುಭವಿಸಿದ ಕಾಳರಾತ್ರಿ ಈ ಕವನದ ಪ್ರಾಣ. ಇಲ್ಲಿಯ ಜೋಗಿ-ಯೋಗಿ-ಗೋಂದವಲೇಕರ ಮಹಾರಾಜರೇ. ಬಂದsದ ಮಳಿಯ ಹದಕss ಎಂಬ ಉಕ್ತಿ ಸಫಲತೆಯ ಪೂರ್ಣತೆಯ ಸೂಚನೆಯಾಗಿದೆ. ಮಳೆಯ ಹದವು ಸಾಧನೆಯಲ್ಲಿ ಆನಂದಾನುಭೂತಿಯ ಸ್ಪರ್ಶವಾಗಿರುತ್ತದೆ.



೩೮ ಮಲ್ಲಿಗೆ

ಆ, ಹಾ, ಹಾ, ಮಲ್ಲಿಗೆ
ಬರುವೆನೆ ನಿನ್ನಲ್ಲಿಗೆ ॥ ಪಲ್ಲವಿ ॥

೧

"ಚುಕ್ಕೆ ಹೊಳಪು ಬೆಳಗಿದಾಗ
ಬೆಳಗು ಬೆಳ್ಳಿ ತೊಳಗಿದಾಗ
ತಿಂಗಳಿನ್ನೂ ಮುಳುಗದಾಗ
ಬರುವೆನೆ ನಿನ್ನಲ್ಲಿಗೆ
ಹೇ ಸುಗಂಧ-ಗಂಧ-ಮೋಹನೇ
ಏ ಮಂದಪವನವಾಹನೇ
ಹಾ ತಲುಪಿದ ಅವಾಹನೇ
ಆ, ಹಾ, ಹಾ, ಮಲ್ಲಿಗೆ"

೨

ನಸುಕು ಸುಸಿಲ ಸಮಯವಾಗೆ
ಸೌಸವವದು ಸೂಸಿ ತಾಗೆ
ಕಾಣದೆ ಅದು ಬರುವ ಹಾಗೆ
ಬರುವೆನೆ ನಿನ್ನಲ್ಲಿಗೆ
ಹೇ ಚೂತಾಂಕುರ ಚಾಮರೇ
ಏ ನಿನ್ನಿದಿರೇ ತಾಮರೇ
ಹಾ ಬೇರೆ ಸೋಮ-ಕಾಮರೇ
ಆ, ಹಾ, ಹಾ, ಮಲ್ಲಿಗೆ.

೩

ಸವಿಗನಸಿನ ಕಾಲದಲ್ಲಿ
ಉಷೆ ಕುಣಿಯುವ ತಾಲದಲ್ಲಿ
ನಿನ್ನ ಮೋಹಜಾಲದಲ್ಲಿ
ಬರುವೆನೆ ನಿನ್ನಲ್ಲಿಗೆ.
ಹೇ ಕೋಕಿಲ-ನುತಿ-ಗಾಯನೇ
ಏ ಬಾನ ಬಾಯಿ 'ಆ' ಎನೇ
ಹಾ ಗಾಳಿಗೊಳಲು 'ಹೋ' ಎನೇ
ಆ,ಹಾ,ಹಾ, ಮಲ್ಲಿಗೆ.

೪

'ಮೂಗಾಳಿಯ ಮೂಗುದಾರ
ಎಳೆವುದು ಹೇ ಮಧುಪ ಬಾರ
ಮಧುಚುಂಬನ ಬೇಗ ತಾರ'
ಹಾಡುವದೀ ಗಾಳೀ
ಒಲವಿನ ಹೊಸ ಕಾಳೀ
ಕವಿಯ ರೂಪ ತಾಳಿ
ಆ, ಹಾ, ಹಾ, ಮಲ್ಲಿಗೆ

- ಪ್ರ : ೪-೬-೧೯೪೦ 'ಜೀವನ ಪತ್ರಿಕೆ' ಸಂ.೧, ಸಂ.೮

ಭಾವ : ಬೆಳದಿಂಗಳ ರಾತ್ರಿಯಲ್ಲಿ ಅಚ್ಚ ಬಿಳಿ ಮಲ್ಲಿಗೆ ಹೂವಿನ ಸುಂದರ ವರ್ಣನೆ. ೪ನೆ ನುಡಿಯಲ್ಲಿ ಬರುವ 'ಮಧುಚಂಬನ ಬೇಗ ತಾರ' ಎಂಬ ಸಾಲು ಮಲ್ಲಿಗೆ ಹೂವಿನ ಅತ್ಯಂತ ಮಧುರವಾದ ಸುವಾಸನೆಗೆ ಮನಸೋತು ಆ ಸುವಾಸನೆಯನ್ನು ಕವಿ ವರ್ಣಿಸಿದ ರೀತಿ ಅನನ್ಯ.

ಶಬ್ದಾರ್ಥ : ಆವಾಹನೆ=ಸ್ವಾಗತಿಸುವಿಕೆ, ಬರಮಾಡುವಿಕೆ. ಚೂತಾಂಕುರ=ಚೂತ+ಅಂಕುರ= ಮಾವಿನ+ಮೊಳಕೆ-ಚಿಗುರು. ತಾಮರೆ-ತಾವರೆ=ಕಮಲ.

ವಿಶೇಷ : ಸಾಧನಕೇರಿಯ ನಮ್ಮ ಮನೆಯ (೧೩, ಶ್ರೀಮಾತಾ) ಅಂಗಳದಲ್ಲಿ ಮಲ್ಲಿಗೆಯ ಪೊದೆಗಳಿದ್ದವು. ಅದರ ಬದಿಬದಿಗೆ ಮಾವಿನ ಮರಿಗಳು. ವಸಂತಕಾಲದಲ್ಲಿ ಸಾಮಾನ್ಯವಾಗಿ ರಾತ್ರಿಯಲ್ಲಿಯೇ ಹೂವು ತೆಗೆದಿಡುವ ವಾಡಿಕೆ. ಒಂದು ದಿನ ಅವುಗಳನ್ನು ಹಾಗೆಯೇ ಬಿಟ್ಟು ಬೆಳುದಿಂಗಳಲ್ಲಿ ಅವುಗಳ ಬಿಳಿಬಣ್ಣದ ಸೌಭಾಗ್ಯ ಕಂಡುಂಡು ನಸುಕು ಪ್ರಣಯಗೀತದಂತೆ ಬಂತು ಮಲ್ಲಿಗೆ ಎಂಬ ಈ ಕವನ. ಇದು ದವನ-ಕವನ ಭಾವಗೀತದಂತಿದೆ. ನಾಟ್ಯಗೀತವೂ ಆಗಬಹುದು.



೩೯ ಹೂವೆ

೧
ಇದ್ದಲ್ಲಿ ಇರು ಹೂವೆ
ಗಾಳಿಹೊಳೆಯೊಳು ನಾವೆ
ತೂಗಾಡುತಿರುವಂತೆ ತೂಗುತ್ತಿರು.
೨
ಸವಿಯೆ ಚೆಲುವಿನ ಜೇನು
ಹೂ ಕೀಳಬೇಕೇನು ?
ನೋಟ ಕೂಟವು ಸಾಕು ಮಾಗುತ್ತಿರು.
೩
ಎಲರಲೆಯ ಪರಿಮಳಿಸಿ
ನಾತ - ಗೀತವನಳಿಸಿ
ಮೈಮನದಿ ನಂದನವನರಳಿಸುತಿರು.
೪
ಮೈಯ ಬಾನೊಳಗೆತ್ತು
ಅಲ್ಲಿ ಬೆಳಕನು ಬಿತ್ತು
ಮಣ್ಣನ್ನು ಕಂಪತ್ತ ಹೊರಳಿಸುತಿರು.

ಭಾವ : ಹೂವಿನ ಕಂಪು ಮಣ್ಣಿನ ಜೀವನ ಪರಿವರ್ತನೆ.



೪೦ ನಸುಕು ಬಂತು ನಸುಕು

೧

ಬೆಳಗು ಗಾಳಿ ತಾಕಿ ಚಳಿತು
ಇರುಳ ಮರವು ಒಡೆದು ತಳಿತು
ಅರುಣ ಗಂಧ ಹರುಹಿ ಒಳಿತು
ನಸುಕು ಬಂತು

೨


ಬೆಳಕು ಬಳ್ಳಿ ಬಿಟ್ಟು ಕುಡಿ
ಬಯಲಲೆತ್ತಿ ಹಗಲಗುಡಿ
ಅಡಗಿಸಿಟ್ಟು ರವಿಯ ಮಿಡಿ
ನಸುಕು ಬಂತು.

೩

ಬೆಳಗು ಸೂಸುತಿರಲು ಸುಸಿಲು
ಅದನು ಮೂಸುತಿರಲು ಉಸಿಲು
ಬೆಳಕು ಹೂತು ಆತು ಬಿಸಿಲು
ನಸುಕು ಬಂತು.

ಭಾವ : ನಸುಕಿನ ಮಿಶ್ರಭಾವದ ಅಭಿವ್ಯಕ್ತಿ

ಶಬ್ದಾರ್ಥ : ಚಳಿತು=ದಣಿದು, ಉತ್ಸಾಹಗುಂದಿ.



೪೧ ನಸುಕಿನ ಮೌನ

೧

ಸದ್ದಿಲ್ಲ ಸುಳಿವಿಲ್ಲ; ರವಿರಾಜ ಮೂಡುವನು
ಬೆಳಗುವನು ಅಡಗುವನು ಬೇಸರೆಲ್ಲವ ದೂಡಿ
ಮೌನ ಮೊರೆಯಿಡುವಂತೆ ಕಡಲು ತೆರೆತೆರೆದಾಡಿ
ಮರ್ಯಾದೆ ಮೀರದಿದೆ. ಅಗೊ ಅಲ್ಲಿ ಮೋಡವದು
ಎಲ್ಲೊ ಸುಮ್ಮನೆ ಸುರಿದು ಇಹುದು ಬಿಲ್ಲನು ಕೂಡಿ,
ನಿಶೆಯ ಕೌಮುದಿ; ಬಾನಬಯಲಗಡಲಿನ ನೌಕೆ
ಆರು ಕಾಲಕು ತೇಲಿ; ಮಲೆಯ ಜಡೆಯಲಿ ಮೂಡಿ
-ಸೂಸಿ ಸೌಸವ; ಇರವೆ? ಮಾತು ಬೇಕೇ ಏಕೆ?


೨

ಹುಸಿನಗೆಯು, ಕುಡಿನೋಟ, ಹಿಗ್ಗುಹಿಗ್ಗಿನ ಕೇಕೆ
ಮರುಳಾಟ, ಅಳುವು ಹಸಿವಿನ ಕೂಗು; ದನಿಮೋಡಿ
ಒಂದೆ ಬಸಿರಿನ ಬದುಕು ಒಂದೆ ಹೃದಯುವ ನೀಡಿ
ತಣೆಯುವೇ? ಶ್ರುತಿಯಾಗು-ನಾದಮಾತೃಕೆ ಆಕೆ;
ಕೂಸು-ಮಾತಿಗೆ ಮೌನ ತಾಯಿ ಮಡಿಲು ಸದ್ಯೆವ;
ಮಾತು ಮೌನದ ಪ್ರತಿಮೆ, ಮೌನ ಮಾತಿನ ದೈವ.

- ರಚನೆ : ೨೫-೫-೧೯೪೮/ಪ್ರ : ಅಕ್ಟೋಬರ, ೧೯೪೯ 'ಜಯಂತಿ' ಸಂ.೧೨, ಸಂ.
-'ಮೌನ' ಎಂಬ ಶೀರ್ಷಿಕೆ ಇತ

ಭಾವ : 'ಗೆಳೆಯರ ಗುಂಪು' ಆಚರಿಸಿದ ಮೌನವಾರದಲ್ಲಿ ಆದ ರಚನೆ. ಮೌನದ ಸ್ಥಿತಿ ಈ ಕವನ ರಚನೆಗ
ಚಾಲನೆ ಕೊಡುತ್ತದೆ. ಮಾತು ಮತ್ತು ಮೌನದ ಸಂಬಂಧದ ಅರಿವು ಮೂಡಿದೆ.

ಶಬ್ದಾರ್ಥ : ಸೌಸವ=ಪರಿಮಳ, ಸುವಾಸನೆ.



ಭಾಗ - ೫

ಅನುಭಾವ ಗೀತಗಳು

ಗಂಗಾವತರಣ - ಅನುಭಾವ ಗೀತಗಳು

ಈ ವಿಭಾಗದಲ್ಲಿ ಒಂಬತ್ತು ಕವನಗಳು. ಸಾತ್ವಿಕರಿಗೆ ಅನುಭಾವ ಸಾಧನೆಯತ್ತ ಎಳೆತ. ಬೇಂದ್ರೆ ಕಾವ್ಯ ಸೃಷ್ಟಿಯಲ್ಲಿ ಮೂರು ಹಂತ. ಕವನ ಸೃಷ್ಟಿ ಬೇಂದ್ರೆಯವರಿಗೆ ದಿವ್ಯ ಅನುಭವ ಎಂಬುದು ಮೊದಲ ಹಂತ. ಕವಿಯ ಕರ್ತೃವಿನ - ಅಂಬಿಕಾತನಯದತ್ತನ ಸಂಶೋಧನೆಯ ಅನುಭಾವ ಎರಡನೆಯ ಹಂತ. ಇದಕ್ಕೂ ಕಾರಣವಾದ ಔದುಂಬರದತ್ತನ ಸಾಕ್ಷಾತ್ಕಾರದ ಅನುಭಾವ ಬೋಧ ಮೂರನೆಯ ಹಂತ.


ಎರಡನೆಯ ಹಂತದ ಈ ಗೀತಗಳಲ್ಲಿ ಮತ್ತೆ ಮೂರು ಒಳ ವಿಭಾಗಗಳಿವೆ. ತನ್ನ ಕವನಗಳ ಸೃಷ್ಟಿಗೆ ಕಾರಣ - ಅನಾಹತ ಚಕ್ರದೊಳಗಿನ-ಮಹಾದೇವನಿರಬಹುದೇ ಎಂಮ ಹುಡುಕಾಟ - ಯಾವ ದೇವನಿವನು? ಬೇಂದ್ರೆಯವರ ಕುಲದೇವತೆ - ಲಲಿತೆ. 'ಒಳಗನುದ್ದೀಪಿಸುತ ಒಳಗೆ ಕುಳಿತೆ' ಎಂಬ ಅನುಭಾವ - ಯಾವ ಬಾನುಲಿ ಕೇಂದ್ರದಲ್ಲಿ. ತಾಯಿ-ಅಂಬಿಕೆ 'ಚಂದ್ರಬಿಂಬದಲ್ಲಿ'ದ್ದು ನಾದಾ, ಭಾವಾ, ತಾಳ , ಲಯ, ಛಂದರಾಗ ನೇಡಿ ಮಾತುಗಳನ್ನೇ ಅರಳಿಸಿ ಪಡೆಯುತ್ತಿರುವ ಪೂಜೆ' ಎಂಬ ಪ್ರತ್ಯಕ್ಷದರ್ಶನ - ಗಾಳಿಗಡಲಿನಲ್ಲಿ. ಈ ಅನುಭಾವ-'ಕನಸೆನಲೋ? ವಾಸ್ತವಾ' ಎಂದು ಸಾಕ್ಷಿ ಹೇಳಿದ್ದಾರೆ ಬೇಂದ್ರೆ. 'ಸರಸ್ವತಿ ಸೂಕ್ತ' ಮತ್ತು 'ಅಗ್ನಿ ಸೂಕ್ತ' ಪಾರಂಪರಿಕ ರೀತಿಯ ಸ್ತೋತ್ರಗಳಲ್ಲ, ಇಲ್ಲಿಯ ಸರಸ್ವತಿ-ಕವಿಯ ತಮದ ನಿವಾರಣೆ ಮಾಡಿದ್ದಾಳೆ. ಆವು-ಆಕಳಾಗಿ ಹಾಲು ಕುಡಿಸಿ ಕವಿಗೆ ಪ್ರೇರಣೆ ಕೊಟ್ಟಿದ್ದಾಳೆ. ಕವಿಯ ತವಕವೇ - ಅಗ್ನಿ; ಈ ಬೆಂಕಿ-ಬೆಳಕಾಗಬೇಕು ಎಂಬ ಅಭೀಪ್ಸೆ ಕವಿಯದು.

ಎರಡನೆಯ ವಿಭಾಗದ ಗೇಯಗೀತಗಳಾದ 'ಕಣ್ಣು ಕಾಣಿಕೆ'-ಕವಿಯ ಅಂತರಂಗದ ಮೃದಂಗ, 'ಏಲಾಗೀತೆ' ಕವಿ ಕವನದ ಆಂದೋಲನಕ್ಕೆ ತೃಪ್ತಿ ಪಡೆದುದನ್ನು ಸಾನುನಾಸಿಕ ಸ್ವರಗಳು ಸೂಚಿಸುತ್ತವೆ. ತುಂಬಿ-ಬಸವಣ್ಣನವರ ಚಾರಿತ್ರ್ಯದ ಮಹಿಮೆ.

ಮೂರನೆಯ ವಿಭಾಗದ 'ಭರತವಾಕ್ಯ'-ಸಹಕಾರ್ಯ ಮತ್ತು ಸಹಬಾಳ್ವೆಗಾಗಿ ಬೇಂದ್ರೆ ಅಂಬಿಕಾತನಯದತ್ತನಲ್ಲಿ ಸಲ್ಲಿಸಿದ ಪ್ರಾರ್ಥನೆ. ಇದು 'ಔದುಂಬರಗಾಥೆ' ಎಂಬ ಬೇಂದ್ರೆ ಜೀವನ ಮಹಾಕಾವ್ಯದ - ವಿಶ್ವ ಸಂದೇಶ.

- ಸಂ.

೪೨ ಸರಸ್ವತಿ ಸೂಕ್ತ



೧

''ಅಂಚೆ ಏರಿ ನೀರಿನಾಕೆ
ಗಾಳಿಯಲ್ಲಿ ಸುಳಿದಳೋ
ಬೆಳಕಿನಲ್ಲಿ ಬೆಳೆದಳು''
ಗಾಳಿ ನೀರನಾಡಿಸಿರಲು
ವೀಣೆಯಂತೆ ಬಾರಿಸಿ
ತೆರೆಗಳಾಗಿ ಬೆಳಕುಬಂತು
ಕವಿವ ತಮ ನಿವಾರಿಸಿ ॥ ಅಂಚೆ ಏರಿ.........

೨

ನೀರಿನುಸಿರೆ ಮೇಲೆ ಹಾರಿ
ಬೆಳಕು-ಹಕ್ಕಿ ಬೆನ್ನ ಏರಿ
ಬಿಳಿಯ ಮೋಡ ಬೆಳಕಿನಲ್ಲಿ
ತೇಲುವಂತೆ ಬಂದಳೋ
ನೋಡು ಕಂದ ಎಂದಳು ॥ ಅಂಚೆ ಏರಿ.........

೩

ಅಹಾ ಆಹಾ ಏನು ಮುಖ!
ತುಂಬಿ ಬಂದ ಹಾಗೆ ಸುಖ
ಇದುವೆ ನನ್ನ ಜೀವ ಸಖ
ಎಂದು ನುಡಿಯು ಬಂದಿತು
ಜೀವ ತಾನೆ ಎಂದಿತು ॥ ಅಂಚೆ ಏರಿ.........

೪

ತುಟಿಯ ಮೇಲೆ ಏನು ನಗೆ!
ಏನುಭಾವ ಏನು ಬಗೆ!
ದಾರಿ-ದೀಪ ಇದು ನನಗೆ!
ಕೊನೆಯ ವರೆಗು ತೋರಿತು.
ಅಣುಕಣಕೂ ಸೇರಿತು ॥ ಅಂಚೆ ಏರಿ ....

೫

ಹೊಳೆವುದೇನು? ಏನು ಕಣ್ಣೊ!
ಮಿಡಿದರೊಡೆವ ದ್ರಾಕ್ಷಿ ಹಣ್ಣೊ
ಅದರ ರಸವನುಣ್ಣು ಉಣ್ಣು
ಎಂದೆ ಜೀವ ಭಾವಕೆ
ಅದನು ಕಂಡ ಜಾವಕೆ ॥ ಅಂಚೆ ಏರಿ ....

೬
ಆಗ ಬಯಲೆ ಆವು ಆಗೆ
ಆದುವೆ ಹಾಲು ಕರೆದ ಹಾಗೆ
ಸುತ್ತು ಹಾಲು ಕರೆದಿತು
ಗಾಳಿ ಮೇರೆವರಿದಿತು ॥ ಅಂಚೆ ಏರಿ.........

೭
ಅಷ್ಟರಲ್ಲಿ ಕೇಳಬಂತು
ನುಡಿಸಿದಂತೆ ಪ್ರಾಣತಂತು
ಏರಿದಂತೆ ಇಂಚರ
ಆಕೆಗಿರುವ ಆಸರ ॥ ಅಂಚೆ ಏರಿ.........

೮
''ಹಾಲು ಬೇಕೆ ನೀರಿನಾಕೆ
ಕಂಡು ಕಂಡು ಸುಮ್ಮನೇಕೆ?
ಬಾ ಎಂದು ಕರೆದಿತು
ಹಾಲಿನಲ್ಲಿ ಹರಿದಿತು'' ॥ ಅಂಚೆ ಏರಿ.........

೯
''ಏನು ಸವಿಯೊ ಅದನೆ ಕುಡಿ
ನಿನ್ನ ರುಚಿಯ ಹದವ ಹಿಡಿ
ನನ್ನನೇನು ಕೇಳುವೆ
ಆದರೂನು ಹೇಳುವೆ'' ॥ ಅಂಚೆ ಏರಿ.........

೧೦
ನೀರು ಇರದ ಹಾಲು ಕೊನೆಗು
ಅಲ್ಲವೇನೊ ನೀರಸ
ಹೇಳು ನನ್ನ ಸಾರಸಾ
ಎಂಬ ಮಾತ ಕೇಳಿದೆ
ಕಣ್ಣು ತೆರೆದು ಹೇಳಿದೆ ॥ ಅಂಚೆ ಏರಿ..........

೧೧
''ಅಂಚೆ ಏರಿ ನೀರಿನಾಕೆ
ಗಾಳಿಯಲ್ಲಿ ಸುಳಿದಳೋ
ಬೆಳಕಿನಲ್ಲಿ ಬೆಳೆದಳು''



- ರಚನೆ : ಮಂಗಳವಾರ, ೨೧-೭-೧೯೪

ಭಾವ: 'ಸರಸ್ವತಿ'ಗೆ ಸಲ್ಲಿಸಿದ ಎರಡನೆಯ ಪ್ರಾರ್ಥನೆ. ಶ್ರುತಿ-ದರ್ಶನ ಸಾಮರಸ್ಯದ ಅನುಭಾವದ ಹಿನ್ನೆಲೆ ಇದೆ.
ಶಬ್ದಾರ್ಥ : ಅಂಚೆ=ಹಂಸ. ಆವು=ಹಸು, ಆಕಳು. ಇಂಚರ=ಮಧುರಸ್ವರ. ಸಾರಸ=ಒಂದು ಜಾತಿಯ ನೀರು ಹಕ್ಕಿ, ಕೊಕ್ಕರೆ

೪೩ ಅಗ್ನಿಸೂಕ್ತ

೧

ಕಲ್ಮಲ ಮಲ್ಮಲ ಜಂಜಣವೆಂದು
ಕುಣಿವುದು ಅಗ್ನಿಜ್ವಾಲೆ
ಗಾಳಿಯ ನೆಕ್ಕಲು ನಾಲಗೆ ಚಾಚುತ
ಉರಿದೇಳುತ್ತಿದೆ ಮೇಲೆ.

೨

ಹರಹರನೆಂದು ಹರಿಹರಿಯೆಂದು
ಹರಿಹಾಯುತ್ತಿದೆ ಸುತ್ತು.
ಕರಿಬಿಳಿದಾಗಿ ತಲೆ ಎತ್ತುತ್ತಿದೆ
ಅತ್ತೂ ಇತ್ತೂ ಎತ್ತು.

೩

ಬೆಂಕಿಯ ಮೊಳಕೆಯ ಕುಡಿಚಿಗುರೊಡೆದು
ಸಿಡಿಸಿಡಿದೇಳುತ್ತಿಹುದು.
ಕಿಡಿ ಕೆಂಡಾಗಿ ನಿಗಿನಿಗಿ ಮಾಗಿ
ಬೆಳಕಿನೊಳಲರಳುತ್ತಿಹುದು.

೪

ನೀಲಿ ಹಳದಿ ರಸಗೆಂಪು ಊದಿ ಹಸಿ-
ರೆನಿತೊ ಬಣ್ಣಗಳ ಸಾಲೆ.
ಮೇಲೆ ಮೇಲೆಸೆದು ಬೀಸಿದಂತಿಹುದು
ಚಿಗುರು ಪಕಳೆಗಳ ಮಾಲೆ.

ಭಾವ : ಋಗ್ವೇದದೊಳಗಿನ ಅಗ್ನಿಸೂಕ್ತ ಓದಿ ಹೊರಹೊಮ್ಮಿದ ಕವನ. ಬೆಂಕಿ ಬೆಳಕಾಗಬೇಕು, ಚಿಗುರಾಗಬೇಕು. ಪಕ್ವತೆಯನ್ನು ಕೊಡಬೇಕು ಎಂಬ ಆಶಯ ಇಲ್ಲಿದೆ.

೪೪ ಯಾವ ಬಾಸುಲಿ ಕೇಂದ್ರದಲ್ಲಿ

೧

ಯಾವ ಬಾಸುಲಿ-ಕೇಂದ್ರದಲ್ಲಿ ಹಾಡುತ್ತಿರುವೆ?
ನಿನ್ನ ರಾಗದ ಲಹರಿ ತೇಲಿ ಬಂದು
ನಮ್ಮನೆಚ್ಚರಿಸುತ್ತ ಕನಸು ಮರೆಯುವ ಹಾಗೆ
ಏಕೆ ಕಿವಿಗರೆಯುತ್ತ ಅಡಗಿ ಇರುವೆ?
ಕಣ್ತುಂಬಿ ಎದೆದುಂಬಿ ಎಂದು ಬರುವೆ?
ಪಿಕವಾಣಿ ಶುಕಪಾಣಿ ದಿವ್ಯರಾಣೀ
ಓ ದೇವಿ! ಓ ತಾಯಿ! ಮಾಯೆ ಲಲಿತೇ!
ಈ ಆಟ ಈ ಮಾಟ ಏಕೆ ಕಲಿತೆ?

೨

ಬರಿ ನಿನ್ನ ನೆರಳಾಟ ಹಸು ಬಿಸ ನೋಡುವದೊ?
ತೆರೆ ತೆರೆದು ಮೈತಳೆದು ಏಕೆ ತೋರೆ?
ಕಣ್ಣಿಗನ್ನವ ನೀಡಿ ಎದೆ-ಹಸಿವ ಕೆರಳಿಸುವೆ
ಈ ಲೀಲೆಯಲಿ ಯಾವ ಮೋಡಿ ಇಹುದೋ!
ನೆರಳು ತಿರುಳೂ ಕೂಡಿ ನೀನೆ ಅಹುದೋ
ಓ ಗೊಂಬೆ! ಏನೆಂಬೆ ಕಾಣೆನೆಂಬೆ
ದೇವಿ! ಮಾದೇವಿ! ಮಾಮಾಯಿ ಲಲಿತೇ!
ಒಳಗನುದ್ದೀಪಿಸುತ ಒಳಗೆ ಕುಳಿತೆ.

೩

ನಿನ್ನೊಂದು ಮೊಗವಾಗಿ ನಿನ್ನೊಬ್ಬ ಮಗುವಾಗಿ
ಬಾಳೇನು ಬದುಕೇನು ಜಪಿಸುತಿರುವೆ;
ನಿನ್ನ ಬಸಿರಿನ ನೀರಮೀನ ನಾನಾಗುತ್ತ
ಸುಮನ ಮನುವಾಗಿ ನಾ ಹೊರಗೆ ಬಂದು
ನಿನ್ನ ನಾಟಕದಲ್ಲಿ ಪಾತ್ರ ತಂದು
ಆಡುವೆನು ಹಾಡುವೆನು ನನ್ನ ನಾ ನೋಡುವೆನು
ದೇವ ದೇವನ ದೇವಿ ನಾಟ್ಯ ಲಲಿತೇ!
ದಯೆದೋರು ಶುಭ ಕೋರು ದೇವದಯಿತೇ!

ಕಲ್ಲು ಗುಡ್ಡವ ಕೊರೆದು ದೇವಾಲಯವ ತೆರೆದು
ಬಿಂಬದಲಿ ಸೌಂದರ್ಯ ತುಂಬುವಂತೆ
ಈಗೆನ್ನ ಮೈ ಕಟ್ಟಿ, ಕೈತಟ್ಟಿ ಮನಮುಟ್ಟಿ
ಕಲ್ಪಿಸುವ ಶಿಲ್ಪಿ ನೀನಾಗಬೇಕು.
ನಿನ್ನಿಂದ ನನ್ನೊಳ್ಳಿತಾಗ ಸಾಕು
ಆರಯಿಕೆ ಹಾರಯಿಕೆ ಒಂದೆ ಬಯಕೆ
ಚಿಚ್ಚಂಚಲೇ ದೇವಿ ಸಕಲ ಲಲಿತೇ!
ಅನುಪಮೇಯೇ ತಾಯಿ ಚಿರ ಅತುಲಿತೆ.

- ರಚನೆ : ೧೦-೫-೧೯೪೯/ಪ್ರ : ಜುಲೈ ೧೯೪೯, 'ಜಯಂತಿ' ಸಂ.೧೨, ಸಂ.೨
'ಲಲಿತೆ' ಎಂಬ ಶೀರ್ಷಿಕೆ ಇತ್ತು

ಭಾವ: ಲಲಿತೆ, ಬೇಂದ್ರೆ ಮನೆತನದ ಕುಲಾಚಾರದ ವ್ರತ. 'ಲಲಿತಾ ಸಹಸ್ರ'ದ ಉಪಾಸನೆಯನ್ನು ಬೇಂದ್ರೆಯವರು ೧೯೩೩-೩೫ ಸಾಕಷ್ಟು ಮಾಡಿದ್ದರು. ಅದರ ಮಹಾತ್ಮ್ಯದ ಚಿಂತನ.

ಶಬ್ದಾರ್ಥ : ಪಿಕ=ಕೋಗಿಲೆ. ಶುಕ=ಗಿಳಿ. ಅತುಲಿತೆ=ತುಲನೆಗೆ ಬಾರದ, ಸಮಾನವಿಲ್ಲದ, ಅಧಿಕ.



೪೫ ಯಾವ ದೇವನಿವನು ?

೧

ಮುಕುಟದಂತೆ ತಲೆ ಕೋಡು ಮೂಡುತಿದೆ ಯಾವ ದೇವನಿವನು ।
ಹಕ್ಕಿಯಂತೆ ಹಾರಾಡಿ ಬಯಲಲಲೀಸುವನು ನವೋನವನು ॥

೨

ಮೇಲು ಬಗೆಯ ಮೊಲೆ ಹಾಲನುಂಡು ಬೀರುವನು ಕಂಪಿನುಸಿಲು ।
ಕಣ್ಣಿನಿಂದ ಬೆಳುದಿಂಗಳುಗುಳಿ ಬೆರಸುವನು ಬೆಳಕು ಬಿಸಿಲು ॥

೩

ಕನಸಿನಣುಗನೋ, ಇವನ ಬಸಿರಿನಲೆ ಕನಸು ಬಂದವೇನೋ ।
ಮೀಸಲಾದ ತುಟಿಯಲ್ಲಿ ಕೂಸು-ನಗೆ ಮಿನುಗುವಂದವೇನೋ ॥

ನಿದ್ದೆ ಹೊದ್ದದಿಹ ಯಾವ ನಾಡಿನವನಣ್ಣ ಇಲ್ಲಿ ಬಂದೆ ।
ನನ್ನ ಎದೆಯೊಳೇ ಹುಟ್ಟಿ ಬಂದು ನನ್ನನ್ನೆ ಮುಸುಕಿ ನಿಂದೆ ॥

ಭಾವ : ಪ್ರತಿಯೊಬ್ಬನ ಹೃದಯದಲ್ಲಿ ಹನ್ನೆರಡು ದಲಗಳ ಒಂದು ಕಮಲವಿರುತ್ತದೆ. ಇದಕ್ಕೆ ಭಾರತೀಯ ಆಧ್ಯಾತ್ಮ ಯೋಗ ಸಾಧನೆಯಲ್ಲಿ ಅನಾಹತ ಚಕ್ರ ಎಂಬುದಾಗಿ ಗುರುತಿಸಲಾಗಿದೆ. ಇಲ್ಲಿ ಆಸೀನನಾಗಿರುವ ಪರಮಾತ್ಮನನ್ನು ಅವರವರೇ ಕಂಡುಕೊಳ್ಳಬೇಕು. ಇದು ಸಂಪೂರ್ಣ ಸಾಧನೆಯ ವಿಷಯ.



೪೬ ಗಾಳಿಗಡಲಿನಲ್ಲಿ

೧

ಗಾಳಿಗಡಲಿನಲ್ಲಿ ತೇಲಿ ಬರುತಲಿಹವು ನಾದಾ
ಭಂಡವಾಳದಂತೆ ತುಂಬಿ ವಿವಿಧ ಭಾವ ಮೋದಾ
ಯಾವ ಗೆಳೆಯ ಗುರುವಿನಿಂದ ಬಂದಿತೋ ಪ್ರಸಾದಾ
ಎನುವೆ ಹೈ ಹಸಾದಾ

೨

ಎಚ್ಚರವೋ ? ನೂತ್ನ ವಿಶ್ವ ; ಕನಸೆನಲೋ ? ವಾಸ್ತವಾ ;
ನಿದ್ದೆಯೆನ್ನೆ ಸಾಕ್ಷಿಯಿಹೆನು ; ಬೇರೆ ಏನೊ ಅನುಭವಾ
ಮೈ ಮನಗಳ ಹೆಣೆಯುತಿಹುದು ಏನು ಇದರದೀ ಜವಾ
ನವಜೀವದ ಸಂಭವಾ

೩

ತಾಯಿಗಣ್ಣು ತುಳುಕುತಿಹುದು ಚಂದ್ರಬಿಂಬದಲ್ಲಿ
ಚುಕ್ಕೆ ಅಣ್ಣ-ತಮ್ಮನಂತೆ ಕರೆವವಿರುಳಿನಲ್ಲಿ
ದಾರಿದೋರಿ ತೆರೆಯುತಿಹವು ಸೂರ್ಯಕಿರಣವೆಲ್ಲಿ
ಹೊತ್ತಿ ಚಿತ್ತದಲ್ಲಿ

೪

ಬಿತ್ತಿದಾಗ ಬೆಳೆಯು ಬಂತು ಯಾವ ಸುಗ್ಗಿ ಕಾಲಾ
ಕಾದ ಕಣ್ಣು ಮೋದದಿಂದ ತೋದು ತೊರೆಯೆ ಹಾಲಾ
ಎಷ್ಟಕೆಷ್ಟು ಕರುಣೆಯಿಂದ ಬೆಳೆದ ಹಾಗೆ ಆಲಾ
ಹಬ್ಬಿಕೊಂಡು ಮೇಲಾ

೫

ಮಾತು ಹೂತು ಪೂಜೆಯಾಗಿ ತೋರುತಿಹುದು ತಮ್ಮಡಿ
ನಡೆಯ ಗತಿಯೆ ತಾಳಲಯವು ಛಂದರಾಗ ನುಡಿ ನುಡಿ
ಆಡಿದಂತೆ ಮೂಡುತಿಹುದು ಕನ್ನಡವೇ ಕನ್ನಡಿ
ಪಾದಸಾಕ್ಷಿ ನಿನ್ನಡಿ

- ರಚನೆ : ಸೊಲ್ಲಾಪುರ, ೧೯೪೪

ಭಾವ : ಅನುಭಾವದ ಘಟನೆಯನ್ನು ಕುರಿತು.

ಶಬ್ದಾರ್ಥ : ತಮ್ಮಡಿ=ಅರ್ಚಕ.

೪೭ ಕಣ್ಣ ಕಾಣಿಕೆ

೧
ಅಂತರಂಗದಾ ಮೃದಂಗ ಅಂತು ತೋಂ ತನಾನಾ
ಚಿತ್ತ ತಾಳ ಬಾರಿಸುತ್ತಲಿತ್ತು ರಝಂರಝಣಾಣಾ
ನೆನವು ತಂತಿ ಮೀಟುತಿತ್ತು ತಂತನನನ ತಾನಾ ।। ಅಂತರಂಗದಾ ...
೨
ಹಲವು ಜನುಮದಿಂದ ಬಂದ ಯಾವುದೋನೊ ಧ್ಯಾನಾ
ಏಕನಾದದಂದದೊಂದು ತಾನದಾ ವಿತಾನಾ
ತನಗೆ ತಾನು ಸೋಲುತಿಹುದು ನೂಲುತಿಹುದು ಗಾನಾ ।। ಅಂತರಂಗದಾ .....
೩
ಕಲ್ಪದಾದಿಯಲ್ಲೆ ನನ್ನ ನಿನ್ನ ವಿರಹವಾಗಿ
ಎಲ್ಲೊ ಏನೋ ನಿನ್ನ ಹುಡುಕಿ ಕಾಂಬ ಕಣ್ಣೆ ಹೋಗಿ
ಮರವೆಗೊಂಡು ಬಿದ್ದೆ ನಾನು ನೆಲದ ಮಣ್ಣು ತಾಗಿ ।। ಅಂತರಂಗದಾ .....
೪
ಅಂತರಿಕ್ಷದಲ್ಲಿ ಮಸಗಿ ಕಳೆದ ಕಣ್ಣ ಸಂತೆ
ಮೈಯ್ಯ ಕಣ್ಣ ಕುಣಿಯೊಳಾಯ್ತು ಚಿತೆಯ ಹಾಗೆ ಚಿಂತೆ
ನೆಲದ ಎದೆಗೆ ಇರುಳು ಬರುವ ಮರುಳ ಉಲ್ಕೆಯಂತೆ ।। ಅಂತರಂಗದಾ .....
೫
ಕರುಳ ಕಲಕುಮಲಕಿನಲ್ಲಿ ಕುದಿದು ಕುದಿದ ಹಾಲೆ
ಹೃದಯದಾಜ್ಯವನ್ನು ನೆಕ್ಕಿ ಬಂದ ಕಿಚ್ಚು ಮೇಲೆ
ಹಸಿದ ಕಂಗಳಲ್ಲಿ ಹೊತ್ತಿತೆಂದೊ ಆಗಿ ಜ್ವಾಲೆ ।। ಅಂತರಂಗದಾ .....
೬
ಅದರ ನೋವೊ ಅದರ ಕಾವೊ ಬಲ್ಲದದುವೆ ಪಾಪ!
ಏಸು ತೋಡಿಕೊಂಡರೇನು ತೀರಲಹುದೆ ತಾಪ ?
ತನ್ನ ಸ್ನೇಹ ತಾನೆ ಉರಿಸಿ ಬೆಳಗಿಸುವದೊ ದೀಪ ।। ಅಂತರಂಗದಾ .....
೭
ಹಣೆಯ ಕಣ್ಣು ಹುರಿದ ಮೇಲನಂಗವಾದ ಭಾವ
ತಾನೆ ರಸವೆ ಆಯ್ತು ಸೋಕೆ ಮೂಲ ರತಿಯ ತೇವ
ಕಣ್ಣನಾರತಿಯನು ಎತ್ತಿ ಒತ್ತಿ ಬಂತು ಜೀವ ।। ಅಂತರಂಗದಾ .....

೮


ಎದೆಯ ತೊರಿಸಿ ಕಣ್ಣ ತೆರಿಸಿ ಹೋದ ಮಾಟ ನೋಟ
ಮರಳಿ ಬಂದು ಕಣ್ಣ ಕೊಟ್ಟು ಹೃದಯ ಜೀವ ಕೂಟ
ಸೃಷ್ಟಿಯನ್ನೆ ನಡೆಸುತಿಹುದು ಆಗಿ ಆಟ ಪಾಟ ॥ ಅಂತರಂಗದಾ .....

೯

ಕತ್ತಲಲ್ಲೆ ಬೆಳಕು ಮಿಂಚಿ ಪಡೆದಿತೇಳು ಬಣ್ಣ
ಮೂಕ ಮೌನ ತೂಕ ಮೀರಿ ದನಿಯು ಹುಟ್ಟಿಸಣ್ಣ
ಕಣ್ಣ ಮಣ್ಣ ಕೂಡಲಲ್ಲಿ ಹಾಡು ಕಟ್ಟಿತಣ್ಣ ॥ ಅಂತರಂಗದಾ .....

ಭಾವ : ಕವಿಯ ಕಣ್ಣು ಈ ನೆಲದ ಜೀವನವನ್ನು ನೋಡುತ್ತದೆ. ಆಗ ಕವಿಯ ಅಂತರಂಗದಲ್ಲಿ ಮಿಡಿದ ಮೃದಂಗದ ಭಾವ ಗೀತವಾಗುತ್ತದೆ.

ಶಬ್ದಾರ್ಥ : ವಿತಾನ=ಹರಡುವಿಕೆ, ವಿಸ್ತಾರ. ಮುಸಗಿ=ವಿಸ್ತರಿಸಿ, ವಿಜೃಂಭಿಸಿ. ಕುಣಿ=ತೆಗ್ಗು, ಹೊಂಡ. ಉಲ್ಕೆ=ನಕ್ಷತ್ರಖಂಡ. ಕಲಕುಮಲಕು=ತಳಮಳ, ಕ್ಷೋಭೆ. ಆಜ್ಯ=ತುಪ್ಪ ತೇವ=ಹಸಿ, ಒದ್ದೆ.



೪೮ ಏಲಾಗೀತೆ

೧
ಏಲಾವನ ಲವಲೀಬನ ಲವಂಗ ಬನಗಳಲಿಽ
ನಾಗಲತಾ ಸಂಕುಲ ಬನವಾಸಿಯ ಜನಗಳಲಿಽಽಽ
ಲೀಲಾಂದೋಲಿತ ದೋಲಾ ಲಲನಾ ಮಣಿಗಳಲಿಽಽ ॥ ಏಲಾವನ..........
೨
ಏಲಾಪದ ಲೀಲಾಪದ ಆಲಾಪದ ಸರಣಿಽ
ಸಖಿಸಖಿಯರ ಮೇಳಾಪದೆ ತೆರೆದಿರೆ ಎದೆ ಭರಣಿಽ
ಆಲಿಸುತಿವೆ ಮಾಲಿಸುತಿವೆ ಹರಿಣದ ಜತೆ ಹರಿಣಿಽ ॥ ಏಲಾವನ..........
೩
ಜಂ ಙಣನಮಾ, ಅಂ ಜ್ಞಂ ಓಂ, ಹಂ ಸಂ ಶಂ ಎಂಬಾ
ಅಂಬಾಗರೆವುದು ವಾಣಿಯ ವೀಣೆಯು ಬಾಯ್ತುಂಬಾ
ಬಾ ಅಮ್ಮಾ ಅಮ್ಮಾ ಬಾ ಬಾರೇ ಜಗದಂಬಾ ॥ ಏಲಾವನ..........
೪
ಉಸಿರುಸಿರಲಿ ಸರಿವರಿದೂ ಊದೂದುತ ನಲಿದು
ಧನಿಯೇ ನದಿಯೊಲು ಚಲಿಸಿತು ಕೊಂಕೊಂಕೆನೆ ಒಲೆದು
ಅಲೆಯಾಯಿತು ಬಲೆಯಾಯಿತು ಜಗದಗಲಕೆ ಸೆಲೆದು ॥ ಏಲಾವನ..........
೫
ಕಿನ್ನರಕಿನ್ನರಿ ಮಿಥುನವು ಅರೆಅರೆ ಮೈಗೂಡಿ
ನುಡಿಯಲಿ ಹುದುಗಿದ ಹುರುಳೊಲು ಹದುಳದೊಳೊಡಮೂಡಿ
ನಾಲಿಗೆ ನಾಡಿಯನಾಡಿಸಿ ಸ್ವರಮೂರ್ತಿಯ ಕೂಡಿ ॥ ಏಲಾವನ..........
೬
ನರನರಗಳಲಿಂಗಿಂಗೀ ನರನಾಳದೆ ತಂಗಿಽ
ಲಾಸ್ಯದಿ ಹಾಸ್ಯವ ಮಿಂಚಿಸಿ ಪರಶಿವನರ್ಧಾಂಗಿಽಽ
ತಾಲದಿ ಕಾಲವ ಸೊಲ್ಲಿಸುವಂತಿದೆ ಈ ಭಂಗಿಽಽ ॥ ಏಲಾವನ..........
೭
ನೆಲೆಗೆಡಿಸುವ ವಾಸನೆಗಳ ಎದೆಬೀಜವ ಸೀಳಿ
ರತಿರಮಣನ ನಿಜಜನಕನ ಎದೆಯಾಳವನಾಳಿ
ಹೃದಯಾಕೂತಿಯ ಅನುಪಮ ಲಾವಣ್ಯವ ತಾಳಿ ॥ ಏಲಾವನ..........

೮

ಸ್ವಾದದ ನಾದದ ಮೋದದ ಒಳಬಸಿರನೆ ಬಗೆದು
ಹುಂಕಾರದ ಒಳನೂಲನು ಮೆಲ್ಲನೆ ಹೊರದೆಗೆದು
ಶಬ್ದಕೆ ಹಾಸಿಗೆಯಾಗಿಹ ತನಿಮೌನದಿ ಮುಗಿದು ॥ ಏಲಾವನ..........

೯

ಯಾಳದ ಜತಿ, ಏಳೆಯ ಗತಿ ಏಳೇಳೇಳೆಂದು
ಎಬ್ಬಿಸಿ, ಮಬ್ಬನು ಚೆದರಿಸಿ ಬಾಳ್ ಬಾಳ್ ಬಾಳೆಂದು
ತಂತಿಯು ತಾಳಕೆ ಮಿಡಿದಿರೆ, ಎಲ್ಲಾಯಿತು ಒಂದು ॥ ಏಲಾವನ..........


೧೦

ಏಳೆಯ ಬಸಿರೊಳು ಮಲಗಿದ ಯಾವುದೊ ಗತಿ ಚಿತ್ರ
ದನಿ ಪಡೆದಿತು, ತಿಳಿದೆದ್ದಿತು ಕಣ್ಬಡೆದು ವಿಚಿತ್ರ
ಆಕ್ಷಣವನು ಈ ಕ್ಷಣವನು ಮಾಡಿತು ಸುಪವಿತ್ರ ॥ ಏಲಾವನ..........

ಭಾವ : ''ಏಲಾಗೀತ''ವು ಏಳಾ ಜಾತಿಯುನ್ನು ಕುರಿತು ಮಾಡಿದ ಧ್ಯಾನದಿಂದ ಉತ್ಪನ್ನವಾದುದು. ಏಳಾ
ಜಾತಿ ತ್ರಿಪದಿಯಂಥ ಗೀತ ಪ್ರಕಾರ.

ಶಬ್ದಾರ್ಥ : ದೋಲಾ=ತೂಗಾಡುವಿಕೆ, ಜೋಕಾಲಿ. ಮಾಲಿಸು=ಉಜ್ಜು, ತಿಕ್ಕು. ಹದುಳ-ಪದುಳ=ಸೌಖ್ಯ
ಕ್ಷೇಮ, ನೆಮ್ಮದಿ. ಆಕೂತಿ=ಭಾವನೆ. ಬಗೆದು=ಸೀಳಿ. ಕಿನ್ನರ ಕಿನ್ನರಿ=ಕುದುರೆಮುಖಿ, ಮನುಷ್ಯನ ಶರೀರ ಉಳ್ಳ
ಪುರುಷ ಹಾಗೂ ಸ್ತ್ರಿಯರು. ಇವರನ್ನು ದೇವತೆಗಳಾಗಿ ಭಾವಿಸುವ ಪರಿಪಾಠ ಉಂಟು. ಯಾಳ=ವಾದ್ಯ.

ವಿಶೇಷ : ನುಡಿ ೩ - ಅನುನಾಸಿಕಗಳ ಬಳಕೆ ಅತ್ಯಂತ ವಿರಳ. ಅವುಗಳಿಗೆ ಬೇಂದ್ರೆ ಚಲಾವಣೆಯಲ್ಲಿ
ತಂದದ್ದು ಒಂದು ಹೆಗ್ಗಳಿಕೆ. ಓಂ=ದಿವ್ಯ ಧ್ವನಿ ಎಂಬ ಶ್ರೇಷ್ಠ ಅರ್ಥವಿದೆ. ಹಂ ಹಾಗೂ ಸಂ ಈ ಅವರ್ಗೀಯ
ವ್ಯಂಜನಗಳಿಂದ ಅಧ್ಯಾತ್ಮ ಮಾರ್ಗದಲ್ಲಿ ಹಂಸ ಮಾರ್ಗ ಮತ್ತು ಸೋಹಂ ಸಾಧನೆ ಎಂಬ ಮಹತ್ವವಿದೆ.
ಶಂ=ಶುಭಸೂಚಕ.



೪೯ ತುಂಬಿ

೧

ಈ ಇದೂ ತುಂಬಿ ಆ ಅದೂ ತುಂಬಿ ಯಾವುದೂ ತುಂಬಿ ಇರದೇ
ತುಂಬಿ ಕಳೆದರೂ ತುಂಬಿ ಉಳಿದರೂ ತುಂಬಿ ತುಂಬಿ ಬರದೇ.
ಜನನ ಮರಣದಲಿ ಅಮೃತವೆಂದಿಗೂ ಅಹುದು ತುಂಬಿ ತುಂಬಿ
ಮೈದುಂಬಿ ತುಂಬಿ ಹಲಜೀವ, ದೇವ ಜಗದಂಬೆ ತುಂಬಿ ತುಂಬಿ.

೨

ಮೇಲೊಳಗು ಹೊರಗು ಪಡೆದಾತ ತುಂಬಿ ಹಡೆದಾಕೆ ತುಂಬಿ ತುಂಬಿ
ಬಯಲಲ್ಲು ಎಲ್ಲು ಮಡಿವವಳು ತುಂಬಿ ದುಡಿದವನು ತುಂಬಿ ತುಂಬಿ
ಕಲುಗುಡ್ಡ ತುಂಬಿ ಮರಬಳ್ಳಿ ತುಂಬಿ ಹಸುಹಕ್ಕಿ ತುಂಬಿ ತುಂಬಿ
ಅಣುರೇಣು ತುಂಬಿ ಪರಮಾಣು ತುಂಬಿ ಜೀವಾಣು ತುಂಬಿ ತುಂಬಿ.

೩

ತುಂಬಿದ್ದು ತಾನೆ ಎಂದೆಂದು ತುಳುಕದೆಂದೆಂದರೂನು ತುಂಬಿ
ತೂತೂಬು ತುಂಬಿ ಹೊರಸೂಸಿ ಚೆಲ್ಲಿ ತುಳುಕಾಡಿ ಮತ್ತೆ ತುಂಬಿ.
ಮುಮ್ಮೊದಲೆ ತುಂಬಿ ಮೊಳಕೆಯಲಿ ತುಂಬಿ ಚಿಚ್ಚಿಗುರಿನಲ್ಲಿ ತುಂಬಿ
ಎಲೆ-ನನೆಯು ತುಂಬಿ ಹೂ-ಹೀಚು ತುಂಬಿ ಮಿಡಿ-ಕಾಯಿ-ಹಣ್ಣು ತುಂಬಿ.

೪

ಕ್ರಿಮಿ-ಕೀಟ ತುಂಬಿ ಈಟೀಟು ತುಂಬಿ ದನಿಮೀಟು ತುಂಬಿ ತುಂಬಿ
ಇದ್ದದ್ದು ತುಂಬಿ ಇಲ್ಲದ್ದು ತುಂಬಿ ಅಹುದಲ್ಲದೆಲ್ಲ ತುಂಬಿ
ನರ ತ್ಯಾಗ ತುಂಬಿ ಸುರ ಭೋಗ ತುಂಬಿ ವರಯೋಗ ತುಂಬಿ ತುಂಬಿ
ಪೊಳ್ಳೆಲ್ಲ ತುಂಬಿ ಜೊಳ್ಳೆಲ್ಲ ತುಂಬಿ ಶೂನ್ಯಾಕಾರ ತುಂಬಿ.

೫

ನೆಲ ಹೂತು ತುಂಬಿ ಮನಸೋತು ತುಂಬಿ ಉಸಿರಾಟ ತುಂಬಿ ತುಂಬಿ
ಜಗವರಳಿ ಕಂಡು ಕಣ್ತುಂಬಿ ಮರಳಿ ಮರುಳಾಗಿ ತುಂಬಿ ತುಂಬಿ
ರಸದುಂಬಿ ತುಂಬಿ ನಾಲಗೆಯ ಎಂಬ ದುರದುಂಬಿ ತುಂಬಿ ತುಂಬಿ
ಝೇಂಕಾರ ಕೇಳಿ ಕಿವಿತುಂಬಿ ತುಂಬಿ ಓಂಕಾರ ತುಂಬಿ ತುಂಬಿ.

೬

ಅಗೊ ತುಂಬಿ ಬಳಗ ಹಲ ಬಿಂಬಿಯೊಳಗ ಒಳಸಿಂಬಿ ತೋಟ ತುಂಬಿ
ಉಕ್ಕಂದದಿಂದ ಚಕ್ಕಂದವಾಡಿ ಸಕ್ಕಂದವಾಗಿ ತುಂಬಿ
ಭೋರಾಡತಾವ ಹಾರಾಡತಾವ ಒಡಗೂಡತಾವ ತುಂಬಿ
ಒಳಗೋಡತಾವ ಹೊರದೂಡತಾವ ಒಳಮೂಡತಾವ ತುಂಬಿ.

೭

ಮೈಮುಟ್ಟಿ ಬಂತು ಮುಟ್ಟಾಟ ಇದರ ಅಟಮಟದ ಮಾಟ ತುಂಬಿ
ಮೈನವಿರ ನವಿಲು ತಕತೈಯ್ಯ ಕುಣಿದು ಥಕ್ಕಾಗಿ ನಿಂತು ತುಂಬಿ
ಜಲ್ಪನೆಯ ತುಂಬಿ ಕಲ್ಪನೆಯ ತುಂಬಿ ಎದೆಯಂತರಾಳ ತುಂಬಿ
ಆಪಾದ ತುಂಬಿ ಆಸ್ವಾದ ತುಂಬಿ ಆಮೋದ ಭೇಧ ತುಂಬಿ.

೮

ಆ ತುಂಬಿನಿಂದ ತುಟಿವರೆಗು ತುಂಬಿ ತುದಿವರೆಗು ತುಂಬಿ ತುಂಬಿ
ಅಂಗಾಂಗ ತುಂಬಿ ಲಿಂಗಾಂಗ ತುಂಬಿ ಆಲಿಂಗನಾಂಗ ತುಂಬಿ
ಆಚಾರ ತುಂಬಿ, ಉಚ್ಚಾರ ತುಂಬಿ, ಸಂಚಾರ ತುಂಬಿ ತುಂಬಿ
ವಿಶ್ರಾಂತಿ ತುಂಬಿ ಸ್ಥಿರ ಶಾಂತಿ ತುಂಬಿ ಕಡು ಕಾಂತಿ ತುಂಬಿ ತುಂಬಿ.

೯

ಅಂಭೋಜನೇತ್ರೆ ರಂಭೋರು ತನ್ನ ಕುಂಭುರೋಜಾತದಲ್ಲಿ
ಸುಚರಿತ್ರೆ ದಿವ್ಯವಾತ್ಸಲ್ಯದಲ್ಲಿ ಒರಗಿರಿಸಿ ನಾದವಲ್ಲಿ
ತಂಬೂರಿ ಶ್ರುತಿಗೆ ಸೀತಾರ ಜತಿಗೆ ದಿಡದಾದಿ ಮೀಟ ದಾಟ
ಕುಂಭಿನಿಯ ತುಂಬಿ ಅಂಬರವ ತುಂಬಿ ತುಂಬಿಸಿದಳೆಂಥ ಲಹರಿ!


೧೦

ಗುರುವಿಂದ ತುಂಬಿ ಅರವಿಂದ ತುಂಬಿ ತುಂಬುರುವಿನಿಂದ ತುಂಬಿ
ತಾಯೆಂದು ತುಂಬಿ ತಂದೆಂದು ತುಂಬಿ ಕಂದನ್ನ ತನ್ನ ತುಂಬಿ
ಅಂಬಿಕೆಯ ತುಂಬಿ ನಂಬಿಕೆಯ ತುಂಬಿ ಕಣ್ಗೊಂಬೆರಂಭೆ ತುಂಬಿ.
ಶ್ರೀಮಾತೆ ತುಂಬಿ ಈ ಮಾತೆ ತುಂಬಿ ತಂತಾನೆ ಬಂತು ತುಂಬಿ.

- ರಚನೆ : ೧೦-೮-೧೯೪೨

ಭಾವ : ಈಶೋಪನಿಷತ್ತಿನಲ್ಲಿ 'ಪೂರ್ಣಮಿದಂ ಪೂರ್ಣಮದಃ' ಎಂಬ ಪ್ರಾರ್ಥನೆ ಇದೆ. ಅದರ ಅನುಭವದ ಘೋಷ ಬೇಂದ್ರೆ ಸಲ್ಲಿಸಿದ ಗುರು ನಮನದಲ್ಲಿ ತುಂಬಿ, ತುಂಬಿ, ತುಳುಕಾಡಿ ಹರಿದು ಸಾಗಿದೆ. ಅದರ ಪ್ರತೀಕ ಈ ಕವನ.

ಶಬ್ದಾರ್ಥ : ಹೀಚು=ಮಿಡಿ, ಎಳೆಕಾಯಿ. ಮೀಟು-ಮೀಂಟು=ಸ್ಪಂದಿಸು, ತಂತಿವಾದ್ಯ ಮಿಡಿ, ತಂತಿವಾದ್ಯ ನುಡಿಸುವ ಕ್ರಿಯೆ. ದುರ+ದುಂಬಿ=ಶೂರ ವೀರಭ್ರಮರ. ಬಿಂಬಿ=ಪ್ರತಿರೂಪ, ಮಂಡಲಿ. ಉಕ್ಕಂದ-ಚಲುವೆ. ಆಟವಟ-ಆಟಮಟ=ಆತುರಪಡು. ಥಕ್ಕಾಗಿ=ಆಶ್ಚರ್ಯ ಪಟ್ಟು ಅಂಭೋಜ=ತಾವರೆ, ಕಮಲ. ಕುಂಭಿನಿ=ಭೂಮಿ, ನೆಲ. ರಂಭಾ+ಊರುಃ=ರಂಭೆಯ ತೊಡೆ. ಕುಂಭ+ಉರಸ್=ಕೊಡದಂತೆ ಇರುವ ಮೊಲೆ-ಎದೆ.



೫೦ ಭರತವಾಕ್ಯ

೧


ಕೂಡಿ ಓದಿ, ಕೂಡಾಡಿ, ಕೂಡಿ
ಅರಿಯೋಣ ಕೂಡಿ ಕೂಡಿ
ಕೂಡಿ ತಿಂದು, ಕೂಡುಂಡು ಕುಡಿದು
ದುಡಿಯೋಣ ಕೂಡಿ ಕೂಡಿ.

೨

ಕೂಡಿ ನಡೆದು, ಒಡಗೂಡಿ ಪಡೆದು
ನುಡಿ ಹೇಳಿ ಕೇಳಿ ಕೂಡಿ
ಕೂಡಿ ಬೆಳೆದು ಬೆಳಗೋಣು
ದೇವರೊಲು ಕೂಡಿ ಕೂಡಿ ಕೂಡಿ.

- ರಚನೆ : ೧೬-೭-೧೯೪೨
'ಪ್ರಾರ್ಥನೆ' ಎಂಬ ಶೀರ್ಷಿಕೆ ಇತ್ತು

ಭಾವ : ''ಓಂ ಸಹನಾವವತು। ಸಹನೌ ಭುನಕ್ತು॥ ಸಹವೀರ್ಯಂ ಕರವಾವಹೈ। ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ'' ಎಂಬುದು ಅತಿ ಪ್ರಾಚೀನ ಮಂತ್ರ. ಇಂದಿಗೂ ಅನೇಕರಿಗೆ ಪರಿಚಿತ. ಎಲ್ಲರೂ ಕೂಡಿ ಉಂಡು ವೀರರಾಗೋಣ ತೇಜಸ್ವಿಯಾಗೋಣ ಎಂಬುದನ್ನು ಗ್ರಹಿಸಿ, ಪುಷ್ಟರಾಗಿ ವೈರಭಾವನೆ ಬೆಳೆಸಿಕೊಂಡು ಹೋರಾಡುತ್ತ ಬಂದುದು ಇತಿಹಾಸ. ಈ ಮಂತ್ರದ ಜೀವಾಳವಾಗಿರುವ-''ಮಾ ವಿದ್ವಿಷಾವಹೈ''-ಯಾರನ್ನೂ ಎಂದಿಗೂ ದ್ವೇಷಿಸುವುದು ಬೇಡ ಎಂಬುದನ್ನು ಯಾರೂ ಗ್ರಹಿಸಿದಂತಿಲ್ಲ; ಪಾಲಿಸುತ್ತಿಲ್ಲ. ಇದು ಆಗಬೇಕಾದರೆ ಕೂಡಿ ಜೀವನ ಸಾಗಿಸಬೇಕಾದರೆ ಸಮಾನತೆಯ ಅರಿವು, ಸರಿಸಮಾನರಾಗಿ ದುಡಿಯುವಿಕೆ ಅವಶ್ಯ. ಪರಸ್ಪರರ ಅಭಿಪ್ರಾಯ ತಿಳಿದುಕೊಂಡು ಸಾಮರಸ್ಯದ ಬೆಳಕಿನಲ್ಲಿ ಜೀವನವನ್ನು ಸಾಗಿಸುವ ಪರಿವರ್ತನೆ ಆಗುವುದು ಅವಶ್ಯ. ಇದೇ ನವ ಮಾನವ ಆವಿರ್ಭಾವ. ಇದು ಅಂಬಿಕಾತನಯದತ್ತರ ಸಮಗ್ರಕಾವ್ಯದ ವಿಶ್ವ ಸಂದೇಶವಾಗಿದೆ. ಇಂಥ ಹೊಸಪ್ರಜ್ಞೆಯ ಜನಾಂಗದ ಸೃಷ್ಟಿಗಾಗಿ ಪ್ರಾರ್ಥನೆಯನ್ನು ಸತತವಾಗಿ ಸಾರುತ್ತ ಬಂದಿದೆ ಈ ಬೇಂದ್ರೆ ಕಾವ್ಯ.





ಡಾ॥ ದ. ರಾ. ಬೇಂದ್ರೆಯವರ ಜೀವನ ಕಥೆಯ ಹಂದರ

ಜನನ-ವಿವಾಹ

೩೧-೧-೧೮೯೬ : ಮಾಘವದ್ಯ ಪ್ರತಿಪದಾ-ಗುರುಪ್ರತಿಪದಾ, ಮನ್ಮಥನಾಮ ಸಂವತ್ಸರ-ಧಾರವಾಡ, ಪೋತನೀಸ ಓಣಿಯಲ್ಲಿ ಜನನ.

೧೮೯೯ : ನೀರಕುತ್ತು ದಾಟಿತು. ಜೇಷ್ಠವೋ ಶ್ರಾವಣವೊ ಇರಬೇಕು. ಹಾಲಗೇರಿ ಕೆರೆಯಲ್ಲಿ ಬಿದ್ದು ಜೀವಂತ ಪಾರಾದದ್ದು.

೧೯೦೭ : ತಂದೆ-ರಾಮಚಂದ್ರ ತೀರಿಕೊಂಡರು.

೧೯೦೨-೧೯೧೩ : ಧಾರವಾಡದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಮ್ಯಾಟ್ರಿಕ್ ಪಾಸಾಗುವವರೆಗೆ.

೧೯೧೩ : ಅಜ್ಜಿ-ತಾಯಿಯ ತಾಯಿ. ಗೋದುಬಾಯಿ ತೀರಿಕೊಂಡರು,

೧೯೧೪ : ಪುಣೆಯ ಫರ್ಗ್ಯುಸನ್ ಕಾಲೇಜು ಸೇರಿದ್ದು.

೧೯೧೬-೧೭ : ವಿವಿಧ ಛಂದಸ್ಸುಗಳಲ್ಲಿ, ಕನ್ನಡ, ಮರಾಠಿ, ಇಂಗ್ಲೀಷ್ ಹಾಗೂ ಸಂಸ್ಕತದಲ್ಲಿ ಕವಿತಾ ರಚನೆ ಹಾಗೂ ಶ್ರೇಷ್ಠ ಕವಿಗಳ ಕವನಗಳ ಅನುವಾದ.

೧೯೧೮ : ಬಿ. ಎ. ಪದವಿ. ಜೂನ್ ೪ರಂದು. ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕ. (ಈಗಿನ ವಿದ್ಯಾರಣ್ಯ ಹೈಸ್ಕೂಲು)

೧೯೧೯ : ಲಕ್ಷ್ಮೀಬಾಯಿ ಅವರೊಂದಿಗೆ ಹುಬ್ಬಳ್ಳಿಯಲ್ಲಿ ವಿವಾಹ. 'ವಾಗ್ಭೂಷಣ' ಸಂಪಾದಕ ವರ್ಗದಲ್ಲಿ ಸೇರ್ಪಡೆ.

ಸಂತತಿ

೧. : ಕ್ಷೇಮೇಂದ್ರ (ಜನನ : ೧೯೨೨ ಧಾರವಾಡ; ಮರಣ ; ೧೯೨೩)
'ಮೊದಲಿನ ಫಲವೊಂದು ಮೀಸಲು ಮಣ್ಣಿಗೆ.'

೨. : ರಾಮು (ಜನನ ೧೯೨೪ .ಹಾನಗಲ್ಲ : ಮರಣ ೧೯೪೪)
'ಹುಸಿನಗುವ ಕೂಸಿನ ಹೊಸ ಹೊಸ ಆಟಿಕೆ.'

೩. : ಭಾಸ್ಕರ (ಜನನ ೧೯೨೭ ಧಾರವಾಡ ; ಮರಣ ೧೯೨೭)
'ಭೆಟ್ಟಿಗೆ ಬಂದನು ಹೊಸದೊಬ್ಬ ಕಂದನು ಅಥಿತಿಯೋ ಎಂಬಂತೆ.'

೪. : ಪಾಂಡುರಂಗ (ಜನನ:೧೯೨೮, ಧಾರವಾಡ ಮರಣ : ೧೮-೧೧-೨೦೦೩)
'ಹುಡುಗನ ಒಡನಾಟವು ಹುಡುಗಾಟ ಮಾಡಿದವು.'

೫. : ಲಲಿತಾ (೧೯೩೪, ಧಾರವಾಡ; ಮರಣ ೧೯೩೪)
'ಆ ಕೂಸ ಕಳಕೊಂಡು ನೀನೆಂತೊ ಉಳಕೊಂಡು
ಲಾಲಿತ್ಯವಿಲ್ಲದ ಶೈಲಿಯೊಲು.'
('ನೀ ಹಿಂಗ ನೋಡಬ್ಯಾಡ ನನ್ನ' ಕವನದ ವಸ್ತು)

೬. : ವಾಮನ (ಜನನ : ೧೯೩೫, ರಾಣೆಬೆನ್ನೂರು)

೭. : ಪ್ರೇಮಾ (ಜನನ : ೧೯೩೭, ಧಾರವಾಡ; ಮರಣ : ೧೯೩೭)

೮. : ಮಂಗಲಾ (ಜನನ : ೧೯೩೯, ಧಾರವಾಡ)

೯. : ಆನಂದ (ಜನನ : ೧೯೪೩, ಧಾರವಾಡ; ಮರಣ : ೧೯೪೪)

ಇತರ

೧೯೨೨ : ದಾವಣಗೇರಿಗೆ ಸಾಹಿತ್ಯ ಸಮ್ಮೇಲನಕ್ಕೆ ಹೋದದ್ದು.

೧೯೨೨ : ''ಕೃಷ್ಣಾಕುಮಾರಿ'' ಮೊದಲನೆಯ ಆವೃತ್ತಿ ಪ್ರಕಟವಾದದ್ದು.

೧೯೨೩ : ವಿಜಾಪೂರದ ಸಾಹಿತ್ಯ ಸಮ್ಮೇಲನಕ್ಕೆ ಹೋದದ್ದು.
'ಜಯ ಕರ್ನಾಟಕ' ಪತ್ರಿಕೆಯೊಂದಿಗೆ ಸಂಬಂಧ, ಮಧುರಚೆನ್ನರ ಭೆಟ್ಟಿ..

೧೯೨೪ : ತಾಯಿ-ಪಾರ್ವತಿ-ಅಂಬಿಕೆ ತೀರಿಕೊಂಡದ್ದು,
'ತಾಯಿ ಗಿಡವು ಮಾಯವಾಯಿತಲೇ!'
- 'ಜೇನುಹುಟ್ಟು' ಕೈ ಬರಹ ಪತ್ರಿಕೆ ಎಳೆಗೆಳೆಯರಾದ ವಿದ್ಯಾರ್ಥಿಗಳ ಮೂಲಕ ಹೊರಡಿಸಿದ್ದು.

೧೯೨೬ : 'ಸ್ವಧರ್ಮ' ಪತ್ರಿಕೆಯ ಸಂಪಾದಕರು.
- ಗೆಳೆಯರ ಗುಂಪಿನಿಂದ ನಾಡ ಹಬ್ಬ ಪ್ರಾರಂಭ.

೧೯೨೮ : 'ನನ್ನದು ಈ ಕನ್ನಡ ನಾಡು' ಕವನ ಸಂಗ್ರಹದ ಸಂಪಾದಕರು.

೧೯೨೯ :
I) ಕಕ್ಕ ಬಂಡೋಪಂತ ಬೇಂದ್ರೆಯವರು ದ. ರಾ. ಬೇಂದ್ರೆಯವರಿಗೆ ೫-೧೧-೧೯೨೯ ರಂದು ವಾಸಕ್ಕಾಗಿ ಸಾಧನಕೇರಿಯಲ್ಲಿ ಒಂದು ಮನೆಯನ್ನು ಕಾಣಿಕೆಯಾಗಿ ಕೊಡಿಸಿದ್ದು.
೧೩, ಶ್ರೀಮಾತಾ, ಸಾಧನಕೇರಿ, ಧಾರವಾಡ - ನಿವಾಸ.
'ಮಲೆನಾಡ ಸೆರಗಿನ ನೆರೆಗಿದ್ದ ಮನೆಯೊಂದು ಮಮತೆಯ
ಕುರುಹಾಗಿ ತಾ ದೊರಕಿತು.'
II) ಬೆಳಗಾವಿಯ ಸಮ್ಮೇಳನದಲ್ಲಿ -
'ಹಕ್ಕಿ ಹಾರುತಿದೆ ನೋಡಿದಿರಾ' ಕವನ ವಾಚನ.
III) ೧೧-೧೧-೧೯೨೯ ರಂದು ಶ್ರೀ ಆಲೂರ್ ವೆಂಕಟರಾವ್ ಇವರಿಂದ 'ಜಯ ಕರ್ನಾಟಕ' ಕೊಂಡದ್ದು.
ಸಂಪಾದಕರಾಗಿ ಕಾರ್ಯ ನಿರ್ವಹಣೆ.
''ಜಯ ಕರ್ನಾಟಕವೆನ್ನುತ ಗೆಳೆಯರ ಕನ್ನಡದಾಸೆಯು ಗುಡಿಕಟ್ಟಿತು.''
'ನರಬಲಿ' - ಕವನವು ಬಲಿಮಾಡಿತೆನ್ನನು,
ಹೆಳವನಿದ್ದಲ್ಲಿಗೆ ಹೊಳೆ ಬಂದಿತು.''

೧೯೩೦ : 'ಹಕ್ಕಿ ಹಾರುತಿದೆ' ಕವನ ಸಂಗ್ರಹದ ಸಂಪಾದಕರು.

೧೯೩೨ : ಹಿಂಡಲಗಿ ಜೇಲುವಾಸ. ಮುಗದ ಎಂಬ ಹಳ್ಳಿಯಲ್ಲಿ ದಿಗ್‌ಬಂಧನವಾಸ.
''ಪ್ರಾಣದ ಒಗರಷ್ಟು ಹಿಂಡಿತು ಹಿಂಡಲಗಿ,
ಮುಗದದ ಮಳೆಗಾಗಿ ಮುಂದೆಳೆದಿತು.''

೧೯೩೨ : ''ಗರಿ'' ಮೊದಲನೆಯ ಆವೃತ್ತಿಯು ಹೊರ ಬಂದದ್ದು.

೧೫-೮-೧೯೩೩ : 'ಜಯ ಕರ್ನಾಟಕ' ಸಂಬಂಧ ಮುಕ್ತಾಯ.
ಗೆಳೆಯರ ಗುಂಪಿನ ಸೊತ್ತೋಟ, ವಿಘಟನೆ.

೧೯೩೩ : ಎಂ. ಎ. ಅಭ್ಯಾಸಕ್ಕಾಗಿ ಪುಣೆಗೆ ಪ್ರಯಾಣ.
'ಪುಣೆಯಲ್ಲಿ ಕಳೆದಂಥ ಅಜ್ಞಾತವಾಸವ ನೆನೆದರೆ ಮೈಯೆಲ್ಲ ಜುಮ್ಮೆನ್ನುತ್ತ'

೧೯೩೪ : ''ಮೂರ್ತಿ'' ಮೊದಲನೆಯ ಆವೃತ್ತಿ ಪ್ರಕಟವಾದದ್ದು.

೧೯೩೪ : ''ಕಾಮಕಸ್ತೂರಿ'' ಮೊದಲನೆಯ ಆವೃತ್ತಿ ಪ್ರಕಟವಾದದ್ದು.

೧೯೩೫ : ಎಂ. ಎ. ಪದವಿ ಪಡೆದದ್ದು,
ಮುಂಬೈಯಲ್ಲಿ ಸಾಹಿತ್ಯ ಸಮ್ಮೇಳನದ ಕವಿ ಸಮ್ಮೇಳನಕ್ಕೆ ಅಧ್ಯಕ್ಷ.

೧೯೩೫-೪೦ : ಡಾ|| ಮಾಸ್ತಿಯವರ ಸಹಾಯ ಹಸ್ತ ಲಭಿಸಿದ್ದು.
''ದೈವದ ಕೃಪೆಯೆಂದು ಆದ ತಿಳಿದೆನು.''

೧೯೩೬ : ವಿಜಯನಗರ ಷಟ್ ಶತಸಾಂವತ್ಸರಿಕ ಉತ್ಸವದ ಕೆಲಸಕ್ಕಾಗಿ
ಹೈದರಾಬಾದ ಪ್ರವಾಸ.

೧೯೩೭ : 'ಸಖೀಗೀತ'ದ ಮೊದಲನೆಯ ಆವೃತಿ ಪ್ರಕಟಗೊಂಡದ್ದು.

೧೯೩೮ : ನಾದಲೀಲೆ, ಉಯ್ಯಾಲೆ, ಪ್ರಕಟಗೊಂಡದ್ದು,
''ಜೀವನ'' ಪತ್ರಿಕೆಯ ಸಂಪಾದಕ ಆದದ್ದು.

೧೯೩೯ : ''ನಿರಾಭರಣ ಸುಂದರಿ,'' ಹಾಗೂ ''ಸಾಹಿತ್ಯ ಮತ್ತು ಸಂಶೋಧನೆ,''
ಕೃತಿಗಳು ಪ್ರಕಟಗೊಂಡದ್ದು.

೧೯೪೦ : ಧಾರವಾಡದಲ್ಲಿ ಸಾಹಿತ್ಯ ಸಮ್ಮೇಳನ.

೧೯೪೧ : ಗದಗ-ವಿದ್ಯಾದಾನ ಸಮಿತಿ ಹೈಸ್ಕೂಲಿಗೆ-ಹೆಡ್ ಮಾಸ್ತರ ಆಗಿ ಹೋದದ್ದು.

೧೯೪೨ : ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಸ್ಕೂಲಿಗೆ ಶಿಕ್ಷಕ.

೧೯೪೩ : ಫೆಬ್ರುವರಿಯಲ್ಲಿ ಪಾಂಡಿಚೇರಿ-ಶ್ರೀಮಾತಾರವಿಂದರ ದರ್ಶನ.
– ಪೂನಾ ಬಿ. ಎಂ. ಸಿ. ಸಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ,
''ಮೇಘದೂತ'' ಪ್ರಕಟಗೊಂಡದ್ದು.

೧೯೪೪ : ಸೊಲ್ಲಾಪುರದ ಡಿ. ಎ. ವ್ಹಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಆದದ್ದು.

೧೯೪೪ : ರಾಮ ಹಾಗೂ ಆನಂದ ತೀರಿಕೊಂಡದ್ದು ಸೊಲ್ಲಾಪುರದಲ್ಲಿ.

೧೯೪೫ : ಸೊಲ್ಲಾಪುರ ನೀಲಾನಗರದಲ್ಲಿ ವಾಸ ಪ್ರಾರಂಭ.

೧೯೪೬ : ಗೆಳೆಯರಿಂದ ಸನ್ಮಾನ. ೫೦ನೆಯ ಹುಟ್ಟು ಹಬ್ಬ.
''ಹಾಡು-ಪಾಡು'' ಪ್ರಕಟಗೊಂಡದ್ದು.

೧೯೪೭ : ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದು.

೧೯೪೮ : ಗಾಂಧೀ ಮರಣ, ಜೆ.ಕೃಷ್ಣಮೂರ್ತಿ ಮತ್ತು
ಶ್ರೀ ಗುಳವಣಿ ಮಹಾರಾಜರ ದರ್ಶನ.

೧೯೫೦ : ಶ್ರೀಅರವಿಂದರ ನಿರ್ವಾಣ ; ಡಿಶೆಂಬರ-೫.. ಹೆಂಡತಿಗೆ ವಿಷಮ ಜ್ವರ.

೧೯೫೧ : ''ಗಂಗಾವತರಣ'' ಪ್ರಕಟಗೊಂಡದ್ದು . ಸಂಖ್ಯಾಯೋಗ ವಿಚಾರ,
ಮರಾಠಿಯಲ್ಲಿ ವಿಪುಲವಾಗಿ ಬರವಣಿಗೆ.

೧೯೫೨ : ಪ್ರಭಾಕರ ಮಹಾರಾಜರ ದರ್ಶನ.

೧೯೫೩ : ಗೆಳೆಯ ಚೆನ್ನಮಲ್ಲಪ್ಪ-ಮಧುರಚೆನ್ನ-೧೫ ಅಗಸ್ಟರಂದು ಮರಣ.

೧೯೫೪ : ಶ್ರೀರಾಮದಾಸರ ದರ್ಶನ.

೧೯೫೫ : ದಿಲ್ಲಿಗೆ ಕವಿ ಸಮ್ಮೇಳನಕ್ಕಾಗಿ ಹೋದದ್ದು.

೧೯೫೬	:	೬೦ನೇ ಹುಟ್ಟು ಹಬ್ಬ . ಧಾರವಾಡ ಆಕಾಶವಾಣಿ ಸಾಹಿತ್ಯ ಸಲಹಾಕಾರ, ಮಗ-ಪಾಂಡುರಂಗನ ವಿವಾಹ, ಡಾ|| ಕುವೆಂಪು ಅವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ.
೧೯೫೭	:	''ಅರಳು-ಮರಳು'' ಪ್ರಕಟಗೊಂಡದ್ದು, ಡಾ|| ರಂ. ಶ್ರೀಮುಗಳಿ ಯವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ.
೧೯೫೮	:	ಸಾಹಿತ್ಯ ಅಕಾಡೆಮಿ ಬಹುಮಾನ ಯಾರಿಗೂ ಸಿಗಲಿಲ್ಲ.
೧೯೫೮-೫೯	:	''ಅರಳು-ಮರಳು'' ಸಂಗ್ರಹಕ್ಕೆ ಸಾಹಿತ್ಯ ಅಕಾಡೆಮಿ ಬಹುಮಾನ, ಧರ್ಮಸ್ಥಳಕ್ಕೆ ಹೋದದ್ದು . 'ನಮನ', 'ಸಂಚಯ' ಪ್ರಕಟಗೊಂಡದ್ದು.
೧೯೬೦	:	ಡಾ|| ಕಾರಂತರಿಗೆ ಬಹುಮಾನ.
೧೯೬೧	:	ಡಾ|| ಗೋಕಾಕರಿಗೆ ಬಹುಮಾನ.

(ಇಲ್ಲಿಯವರೆಗಿನ ಜೀವನ ಘಟನಾವಳಿಗಳನ್ನು ದ.ರಾ.ಬೇಂದ್ರೆಯವರು ತಮ್ಮ ಆತ್ಮಚರಿತ್ರೆಗೆ ಅನುಬಂಧವಾಗಿ ಪ್ರಕಟಿಸಿದ್ದು ''ನಡೆದು ಬಂದ ದಾರಿ'' ಸಂ.೩ರಲ್ಲಿ. ಇದಕ್ಕೆ ಐತಿಹಾಸಿಕ ಮಹತ್ವವಿದೆ. ತಮ್ಮ ಸ್ನೇಹಿತರಿಗೆ ಸಿಕ್ಕ ಬಹುಮಾನ ಅಥವಾ ಅವರ ಜೀವನ ಘಟನೆಗಳು ತಮ್ಮ ಜೀವನದ ಪ್ರಮುಖ ಘಟನೆ ಎಂಬುದಾಗಿ ಬೇಂದ್ರೆ ಭಾವಿಸಿದ್ದು ಅನುಕರಣೀಯ. ಸಾಹಿತಿ-ಸಾಹಿತಿ-ಸ್ನೇಹ ಸಂಬಂಧವೇ ಸಂಸ್ಕೃತಿ.)

೧೯೬೨	:	ತುಮಕೂರಿನ ಪೌರಸಭೆಯ ಸನ್ಮಾನ.
೧೯೬೪	:	ಮೈಸೂರು ದಸರಾ ಮಹೋತ್ಸವ ಸನ್ಮಾನ.
೧೯೬೫	:	ಮರಾಠಿ ''ಸಂವಾದ'' ಕೃತಿಗೆ ಕೇಳಕರ ಪ್ರಶಸ್ತಿ.
೧೯೬೬	:	ಮೈಸೂರು ವಿಶ್ವ ವಿದ್ಯಾಲಯದಿಂದ ''ಗೌರವ ಡಾಕ್ಟರೇಟ್,'' ಹೈದ್ರಾಬಾದಿನ ಹಿಂದೀ ಪ್ರಚಾರ ಸಭಾದ 'ಸಾಹಿತ್ಯ ಆಚಾರ್ಯ' ಪ್ರಶಸ್ತಿ. ಶಿರಹಟ್ಟಿಯಲ್ಲಿ ೭೦ನೇ ಹುಟ್ಟು ಹಬ್ಬ, ಮೈಸೂರು ಸರ್ಕಾರದ (ಕರ್ನಾಟಕ) ಆಜನ್ಮ ವಿಶ್ರಾಂತಿ ವೇತನ. ಪತ್ನಿ ಶ್ರೀಮತಿ ಲಕ್ಷ್ಮೀಬಾಯಿಯವರ ನಿಧನ : ೧೭-೮-೧೯೬೬.
೧೯೬೮	:	ದಿಲ್ಲಿಯಿಂದ 'ಪದ್ಮಶ್ರೀ' ಪ್ರಶಸ್ತಿ . ಕರ್ನಾಟಕ ವಿಶ್ವ ವಿದ್ಯಾಲಯದಿಂದ ''ಗೌರವ ಡಾಕ್ಟರೇಟ್.''
೧೯೬೯	:	ಕೇಂದ್ರ ಸಾಹಿತ್ಯ ಅಕಾಡೆಮಿಯ 'ಫೆಲೊಶಿಪ್' ಗೌರವ-ದಿಲ್ಲಿ.
೧೯೭೨	:	ಪರ್ಯಾಯದಲ್ಲಿ ಉಡುಪಿ ಮಠದ ಪತಿಯಿಂದ 'ಕರ್ನಾಟಕ ಕವಿ ಕುಲ ತಿಲಕ' ಬಿರುದು. ೭೫ನೇ ಹುಟ್ಟು ಹಬ್ಬದ ಸವಿನೆನಪಿಗಾಗಿ ವರಕವಿ ಬೇಂದ್ರೆಯವರನ್ನು ಕುರಿತು ರಾಜ್ಯ ಸರ್ಕಾರದ ಸಾಕ್ಷಿ ಚಿತ್ರ ನಿರ್ಮಾಣ.
೧೯೭೩-೭೪	:	'ನಾಕುತಂತಿ' ಕವನ ಸಂಗ್ರಹಕ್ಕೆ ಜ್ಞಾನಪೀಠ ಪ್ರಶಸ್ತಿ ಪ್ರದಾನ.
೧೯೭೬	:	ವಾರಣಾಶಿ ಕಾಶೀ ವಿದ್ಯಾಪೀಠದಿಂದ ''ಗೌರವ ಡಾಕ್ಟರೇಟ್''
೨೬-೧೦-೮೧	:	ನಿರ್ವಾಣ - ಮುಂಬೈಯ ಹರಿಕಿಸನ್‌ದಾಸ ಆಸ್ಪತ್ರೆಯಲ್ಲಿ . ''ನಾವು ಬರತೇವಿನ್ನ ನೆನಪಿರಲಿ ತಾಯಿ, ನಂ ನಮಸ್ಕಾರ ನಿಮಗ''



ಡಾ.ದ.ರಾ.ಬೇಂದ್ರೆಯವರ ಸಾಹಿತ್ಯ ಕೊಡುಗೆ

ಕವನ ಸಂಗ್ರಹಗಳು-'ಅರಳು ಮರಳು' ಪೂರ್ವದಲ್ಲಿ - ೧೦

೧. ಕೃಷ್ಣಕುಮಾರಿ
೨. ಗರಿ
೩. ಸಖೀಗೀತ
೪. ಮೂರ್ತಿ
೫. ಕಾಮಕಸ್ತೂರಿ
೬. ಉಯ್ಯಾಲೆ
೭. ನಾದಲೀಲೆ
೮. ಕನ್ನಡ ಮೇಘದೂತ
೯. ಹಾಡು-ಪಾಡು
೧೦. ಗಂಗಾವತರಣ

ಕವನ ಸಂಗ್ರಹಗಳು-'ಅರಳು ಮರಳು' ಅನಂತರದಲ್ಲಿ - ೧೭

೧೧. ಸೂರ್ಯಪಾನ
೧೨. ಹೃದಯ ಸಮುದ್ರ
೧೩. ಮುಕ್ತಕಂಠ
೧೪. ಚೈತ್ಯಾಲಯ
೧೫. ಜೀವಲಹರಿ
೧೬. ಅರಳು ಮರಳು*
೧೭. ನಮನ
೧೮. ಸಂಚಯ
೧೯. ಉತ್ತರಾಯಣ
೨೦. ಮುಗಿಲ ಮಲ್ಲಿಗೆ
೨೧. ಯಕ್ಷಯಕ್ಷಿ
೨೨. ನಾಕುತಂತಿ**
೨೩. ಮರ್ಯಾದೆ
೨೪. ಶ್ರೀಮಾತಾ
೨೫. ಇದು ನಭೋವಾಣಿ
೨೬. ಮತ್ತೆ ಶ್ರಾವಣಾ ಬಂತು
೨೭. ಚತುರೋಕ್ತಿ ಮತ್ತು ಇತರ ಕವನಗಳು.

*ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ , **ಜ್ಞಾನಪೀಠ ಪ್ರಶಸ್ತಿ.

ಮರಣೋತ್ತರ ಕವನ ಸಂಕಲನಗಳು - ೮

೨೮. ಪರಾಕಿ
೨೯. ಕಾವ್ಯವೈಖರಿ
೩೦. ತಾ ಲೆಕ್ಕಣಿಕಿ ತಾ ದೌತಿ
೩೧. ಬಾಲಬೋಧೆ
೩೨. ಪ್ರತಿಬಿಂಬಗಳು
೩೩. ಶತಮಾನ
೩೪. ಭೂ ದೈವತಗಳು
೩೫. ಹೃದಯಗೀತ (ಬೇಂದ್ರೆ ಮರಾಠಿ ಗೀತಗಳ ಭಾವಾನುವಾದ)

ಆಯ್ದ ಕವನ ಸಂಕಲನಗಳು - ೧೦

೩೬. ಬಾ ಹತ್ತರ
೩೭. ವಿನಯ
೩೮. ಒಲವೆ ನಮ್ಮ ಬದುಕು
೩೯. ಚೈತನ್ಯದ ಪೂಜೆ
೪೦. ಶ್ರಾವಣ ಪ್ರತಿಭೆ
೪೧. ಕುಣಿಯೋಣು ಬಾ
೪೨. ಸಮರಸವೇ ಜೀವನ
೪೩. ನಾಳಿನಾ ಕನಸು
೪೪. ನೂರು ಮರ ನೂರು ಸ್ವರ ಒಂದೊಂದು ಅತಿ ಮಧುರ.
೪೫. ಬೇಂದ್ರೆ ಕಂಡ ರವೀಂದ್ರರು

(ವರಕವಿ ಡಾ॥ದ.ರಾ.ಬೇಂದ್ರೆ ಸಂಶೋಧನ ಸಂಸ್ಥೆಯ ಪ್ರಕಟಣೆಗಳು ೧೪ ಸಂಪುಟಗಳು)

೪೬. ನಮನ ಸಂಪುಟ
೪೭. ದರ್ಶನ ಸಂಪುಟ
೪೮. ವಿಕಾಸ ಸಂಪುಟ
೪೯. ವಿನ್ಯಾಸ ಸಂಪುಟ
೫೦. ತತ್ತ್ವ ಸಂಪುಟ
೫೧. ಸಿದ್ಧಾಂತ ಸಂಪುಟ
೫೨. ಶ್ರೀಮಾತಾರವಿಂದ ಪ್ರಜ್ಞಾಪ್ರಕಾಶ
೫೩. ಸಮಗ್ರ ಸಖೀಗೀತ

ಬೇಂದ್ರೆ ಗದ್ಯ ಸಾಹಿತ್ಯ ಸಂಪುಟಗಳು

೫೪. ದ. ರಾ. ಬೇಂದ್ರೆ ಸಮಗ್ರ ನಾಟಕ ಸಂಪುಟಗಳು ೯, ೧೦, ೧೧
೫೫. ಕಾವ್ಯೋದ್ಯೋಗ ಸಿದ್ಧಾಂತ ಸಂಪುಟ-೧೨
೫೬. ಸಾಹಿತ್ಯಯೋಗ ಸಿದ್ಧಾಂತ ಭಾಗ-೧ ಸಂಪುಟ-೧೩
೫೭. ಸಾಹಿತ್ಯಯೋಗ ಸಿದ್ಧಾಂತ ಭಾಗ-೨ ಸಂಪುಟ-೧೪

ವರಕವಿ ದ. ರಾ. ಬೇಂದ್ರೆ ಸಂಗೀತ ಅಕಾಡಮಿ ಪ್ರಕಟಣೆಗಳು-೧೫

ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ ಸಂಯೋಜನೆಗಳೊಂದಿಗೆ ಬೇಂದ್ರೆ ಗೇಯ ಗೀತಗಳ ಸಂಗ್ರಹಗಳು.

೫೮. ಅಂಬಿಕಾತನಯನ ಹಾಡಽ ಬೆಳದಿಂಗಳ ನೋಡಽ
೫೯. ನೋಡ್ಯಾನಽ ದಶಾವತಾರ ಅಂಬಿಕಾತನಯ ಹಾಡ್ಯಾನಽ
೬೦. ಅಂಬಿಕಾತನಯದತ್ತ ಬೇಂದ್ರೆ ಕಂಡ ಬೆನಕ
೬೧. ಅಂಬಿಕಾತನಯದತ್ತ ಬೇಂದ್ರೆ ಕಂಡ ಶ್ರಾವಣ
೬೨. ಅಂಬಿಕಾತನಯದತ್ತ ಬೇಂದ್ರೆ ಕಂಡ ಋತು ದರ್ಶನ
೬೩. ಅಂಬಿಕಾತನಯದತ್ತ ಬೇಂದ್ರೆ ಕಂಡ ಶ್ರೀಮಾತಾರವಿಂದರು
೬೪. ಅಂಬಿಕಾತನಯದತ್ತ ಬೇಂದ್ರೆ ಕಂಡ ನಾಳಿನಾ ನಾಳಿನಾ ಕನಸು
೬೫. ಅಂಬಿಕಾತನಯದತ್ತ ಬೇಂದ್ರೆ ಕಂಡ ಭಾವ ರಾಗ ಮಂಜರಿ
೬೬. ಅಂಬಿಕಾತನಯದತ್ತ ಬೇಂದ್ರೆ ಕಂಡ ನಾದ ನವನೀತ
೬೭. ಬೇಂದ್ರೆ ರಂಗ ಗೀತಗಳು
೬೮. ಅಂಬಿಕಾತನಯಹಾಡಿದನೆಂದರೆ ಹೂವುಗಳರಳುವವು
೬೯. ಇಂದಂದಿನದಲ್ಲೀ ಹಾಡು; ನಾಡಿದಿನ ಕನ್ನಡ ನಾಡು
೭೦. ಅಂಬಿಕಾತನಯದತ್ತರು ಕಂಡ ಭಾರತ ದರ್ಶನ
೭೧. ಅಂಬಿಕಾತನಯದತ್ತರು ಕಂಡ ಬೇಂದ್ರೆ ನಮನ ಗೀತಗಳು
೭೨. ಬೇಂದ್ರೆ ಸಂಗೀತ-ಸಿದ್ಧಾಂತ ಪ್ರಯೋಗ

ನಾಟಕಗಳು - ೧೬

೭೩. ದೆವ್ವನ ಮನೆ
೭೪. ಹಳೆಯ ಗೆಳೆಯರು
೭೫. ಸಾಯೋ ಆಟ
೭೬. ತಿರುಕರ ಪಿಡುಗು
೭೭. ಗೋಲ್
೭೮. ಉದ್ಧಾರ
೭೯. ನಗೆಯ ಹೊಗೆ
೮೦. ಮಂದೀ ಮದಿವಿ
೮೧. ಮಂದೀ ಮಕ್ಕಳು
೮೨. ಮಂದೀ ಮನಿ
೮೩. ಆ ಥರಾ ಈ ಥರಾ
೮೪. ಶೋಭನಾ
೮೫. ಜಾತ್ರೆ
೮೬. ಮಕ್ಕಳು ಅಡಗಿ ಮನೆ ಹೊಕ್ಕರೆ

೮೭. ತಲೆ ದಂಡ (ಬಸವಣ್ಣನವರ ಜೀವನ ಆಧರಿಸಿ) ೮೮. ಪ್ರತಿಮಾಗೃಹ (ಮಹಾಕವಿ ಭಾಸನ 'ಪ್ರತಿಮಾ' ನಾಟಕ ಆಧರಿಸಿ)

ಬೇಂದ್ರೆ ಮಾನಸ ನಾಟಕಗಳು - ೨

೮೯. ಮಿಸ್ ಫಾರ್ಚ್ಯೂನ್ - ಪ್ರೊ॥ ಕೆ. ಎಸ್. ಶರ್ಮಾ ವಿರಚಿತ

೯೦. ಕರೆ ಹೆಂಡತಿ ಆದರ ಖರೆ ಹೆಂಡತಿ - ಪ್ರೊ॥ ಎನ್. ಕೆ. ಕುಲಕರ್ಣಿ ವಿರಚಿತ

ಹರಟೆ, ನಗೆ, ಕಥೆ - ೨

೯೧. ನಿರಾಭರಣ ಸುಂದರಿ ೯೨. ಚೀನದ ಬಾಳು ಬದುಕು (ಅನುವಾದಿತ ಕಥಾ ಸಂಕಲನ)

ವಿಮರ್ಶೆ - ೧೧

೯೩. ಸಾಹಿತ್ಯ ಮತ್ತು ವಿಮರ್ಶೆ ೯೪. ಸಾಹಿತ್ಯ ಸಂಶೋಧನೆ

೯೫. ವಿಚಾರ ಮಂಜರಿ ೯೬. ಕವಿ ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ

೯೭. ಮಹಾರಾಷ್ಟ್ರ ಸಾಹಿತ್ಯ ೯೮. ಕಾವ್ಯೋದ್ಯೋಗ

೯೯. ಕುಮಾರವ್ಯಾಸ (ಪುಸ್ತಿಕೆ) ೧೦೦. ಸಾಹಿತ್ಯದ ವಿರಾಟ್ ಸ್ವರೂಪ

೧೦೧. ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು ೧೦೨. ಸಾಹಿತ್ಯ ಯೋಗ (ಆಯ್ದ ವಿಮರ್ಶ ಲೇಖನ ಸಂಗ್ರಹ)

೧೦೩. ಶ್ರೀ ಅರವಿಂದ ಯೋಗ, ಆಶ್ರಮ ಮತ್ತು ತತ್ತ್ವೋಪದೇಶ. (ಶ್ರೀ ಅರವಿಂದರನ್ನು ಕುರಿತು ಪರಿಚಯ ಪುಸ್ತಿಕೆ)

ಸಂಪಾದನೆ - ೬

೧೦೪. ನನ್ನದು ಈ ಕನ್ನಡ ನಾಡು ೧೦೫. ಹಕ್ಕಿ ಹಾರುತಿದೆ

೧೦೬. ಹೊಸಗನ್ನಡ ಕಾವ್ಯಶ್ರೀ ೧೦೭. ರವೀಂದ್ರ ಪ್ರಶಸ್ತಿ

೧೦೮. ಕನಕದಾಸ ಚತುಶ್ಶತಮಾನೋತ್ಸವ ಸಂಸ್ಮರಣ ಸಂಪುಟ ೧೦೯. ಚಂದ್ರಹಾಸ

ಸಂಪಾದಿತ ಪತ್ರಿಕೆಗಳು - ೪

೧೧೦. ವಾಗ್ಭೂಷಣ ೧೧೧. ಸ್ವಧರ್ಮ ೧೧೨. ಜಯ ಕರ್ನಾಟಕ ೧೧೩. ಜೀವನ

ಅನುವಾದ ಕನ್ನಡಕ್ಕೆ - ೬

೧೧೪. ಉಪನಿಷತ್ ರಹಸ್ಯ ಅಥವಾ ಭಾರತೀಯ ಅಧ್ಯಾತ್ಮ ಶಾಸ್ತ್ರ
ಪೀಠಿಕೆ - ರಂ. ರಾ. ದಿವಾಕರ ಹಾಗೂ ಶಂ. ಬಾ. ಜೋಶಿ

೧೧೫. ಭಾರತೀಯ ನವಜನ್ಮ ೧೧೬. ಗುರು ಗೋವಿಂದಸಿಂಗ

೧೧೭. ಕಬೀರ ವಚನಾವಲಿ ೧೧೮. ಭಗ್ನ ಮೂರ್ತಿ ೧೧೯. ನೂರೊಂದು ಕವನಗಳು

ಮರಾಠಿಯಲ್ಲಿ - ೬

೧೨೦. ಸಂವಾದ ೧೨೧. ವಿಠಲ ಸಂಪ್ರದಾಯ

೧೨೨. ಶಾಂತಲಾ (ಕಾದಂಬರಿ) ೧೨೩. ಸಂತ ಮಹಂತ ಪೂರ್ಣಸಂಘ ವಿಠಲ (ಪ್ರಬಂಧ)

೧೨೪. ವಿಠ್ಠಲ ಪಾಂಡುರಂಗ (ಕವನ ಸಂಗ್ರಹ) ೧೨೫. ಉಮಾಳಾ (೧೧೫ ಮರಾಠಿ ಕವನಗಳ ಸಂಗ್ರಹ)

ಇತರ - ೨

೧೨೬. ಮಾತೆಲ್ಲ ಜ್ಯೋತಿ (ಭಾಷಣ ಸಂಗ್ರಹ)
೧೨೭. ಮತ-ಧರ್ಮ ಮತ್ತು ಆಧುನಿಕ ಮಾನವ (ಭಾಷಣಗಳ ಸಂಗ್ರಹ).

ಇಂಗ್ಲಿಷ ಕೃತಿಗಳು - ೨

128. A Theory of Immortality
129. Language-Mathematics & Truth.

ಬೇಂದ್ರೆ ಕವನಗಳು ವಿವಿಧ ಭಾಷೆಗಳಲ್ಲಿ ಅನುವಾದ - ೮

130. Dr. D. R. Bendre - Four Strings - ಇಂಗ್ಲಿಷ ಭಾಷೆಯಲ್ಲಿ
131. ಚತುರ್ಮುಖ ಸೌಂದರ್ಯ, ಲೀಲೆ, ಕೀರ್ತಿ - ಜರ್ಮನ್ ಭಾಷೆಯಲ್ಲಿ
132. ಚಾರ್ ತಾರ್ - 'ನಾಕು ತಂತಿ'ಯ ಹಿಂದೀ ಅನುವಾದ
133. ಚಾರ ತಂತು - 'ನಾಕು ತಂತಿ'ಯ ಮರಾಠಿ ಅನುವಾದ
134. Spring Fire
135. Dreaming Tomorrow
136. Three one Act Plays
137. Sakheegeet

} Dr. K. Raghavendra Rao • Dr. Vaman Bendre, Dr. K. S. Sharma

ಪೂರಕ ಓದು - ೧೦

೧. ಕುವಲಯ ಕಂಡ ಅಂದತ್ತ - ಡಾ|| ಕೆ. ಎಸ್. ಶರ್ಮಾ
೨. ಸಂವಾದ ಕಂಡ ಅಂದತ್ತ - ಡಾ|| ವಾಮನ ಬೇಂದ್ರೆ
೩. ನಾ ಕಂಡ ಬೇಂದ್ರೆ - ಡಾ|| ಜೀವಿ ಕುಲಕರ್ಣಿ
೪. ಬೇಂದ್ರೆ ಸಮಗ್ರ ಕಾವ್ಯದರ್ಶನ - ಡಾ|| ಜೀವಿ ಕುಲಕರ್ಣಿ
೫. ಬೇಂದ್ರೆ ಕಾವ್ಯದಲ್ಲಿ ಆಧ್ಯಾತ್ಮದ ನೆಲೆ ಮತ್ತು ಆರ್ಷ ದೃಷ್ಟಿ - ಪ್ರೊ|| ಕೆ. ಎಸ್.ನಾರಾಯಣಾಚಾರ್ಯ
೬. ಕವಿವರ್ಯ ಬೇಂದ್ರೆ ನಿರೂಪಿಸಿದ ಸಾಹಿತ್ಯ ವಿಮರ್ಶಾ ಸೂತ್ರಗಳು - ಪ್ರೊ|| ಕೆ. ಎಸ್.ನಾರಾಯಣಾಚಾರ್ಯ
೭. ಬೇಂದ್ರೆ ಒಳನೋಟ - ಡಾ|| ಜೀವಿ ಕುಲಕರ್ಣಿ
೮. ದ. ರಾ. ಬೇಂದ್ರೆ ಸಮಗ್ರ ಕಾವ್ಯ ನಿಘಂಟು - ಡಾ|| ಬಿ. ಬಿ. ರಾಜಪುರೋಹಿತ
೯. ದ. ರಾ. ಬೇಂದ್ರೆ ಕಾವ್ಯದ ವ್ಯಾಕರಣ - ಡಾ|| ಬಿ. ಬಿ. ರಾಜಪುರೋಹಿತ
೧೦. ಬೇಂದ್ರೆ ಕಾವ್ಯದ ನುಡಿಗಟ್ಟು ಕೋಶ - ಡಾ|| ಬಿ. ಬಿ. ರಾಜಪುರೋಹಿತ

: ಪುಸ್ತಕಗಳು ದೊರೆಯುವ ಸ್ಥಳ :

''ಶ್ರೀಮಾತಾ ಪ್ರಕಾಶನ'',''ವಿಶ್ವಶ್ರಮ ಚೇತನ'',ಗೋಕುಲ ರಸ್ತೆ,ಬಸವೇಶ್ವರ ನಗರ, ಹುಬ್ಬಳ್ಳಿ.

ರವೀಂದ್ರ ಪುಸ್ತಕಾಲಯ, ಚಾಮರಾಜಪೇಟೆ, ಸಾಗರ - ೫೭೭ ೪೦೧,
ಶಿವಮೊಗ್ಗ ಜಿಲ್ಲೆ, ದೂರವಾಣಿ : ೦೮೧೮೩-೨೨೬೬೧೬ (ಕ).

ಗಂಗಾವತರಣ



ಅಂಬಿಕಾತನಯದತ್ತರ "ಗಂಗಾವತರಣ" ವನ್ನು "ಸಂದೇಶವಾಹಕ ಗೀತಗುಚ್ಛ" ಎಂದು ಬಣ್ಣಿಸುವುದು ಸೂಕ್ತವೆಂದು ತೋರುತ್ತದೆ. ಈ ಕವನ ಸಂಕಲನವು ಒಂದು "ಸಪ್ತಕ" ವಾಗಿದ್ದು, ಸಪ್ತವರ್ಣಗಳ - ಸಪ್ತಸ್ವರಗಳ ಸಂಗಮವಾಗಿ ರೂಪತಾಳಿದೆ. ವರಕವಿ ದ.ರಾ.ಬೇಂದ್ರೆಯವರು ಈ ಕವನಸಂಕಲನಕ್ಕೆ "ಗಂಗಾವತರಣ" ಎಂಬ ನಾಮವಿತ್ತಿರುವುದು ಅನ್ವರ್ಥವಾಗಿದೆ ಎಂದೇ ಹೇಳಬೇಕು. ಆಗಸದ ಕಾವ್ಯಗಂಗೆಯನ್ನು ಅಂಬಿಕಾತನಯದತ್ತ, ಭಗೀರತನಾಗಿ, ಭೂಮಿಗೆ "ಇಳಿದು" ಬರುವಂತೆ ಮಾಡಿ, ಈ "ಗಂಗಾವತರಣ" ದಿಂದ " ಸತ್ತ ಜನರನ್ನು ಎತ್ತು" ವಂತೆ ಮಾಡಿದ್ದಾರೆಂದರೆ, ಅದರಲ್ಲಿ ಯಾವ ಅತಿಶಯೋಕ್ತಿಯಿದೆ? "ಅವತಾರವೆಂದೆ ಎಂದಾರೆ ತಾಯಿ, ಈ ಅಧಃಪಾತವನ್ನೇ?" ಎಂಬ ಪ್ರಶ್ನೆಗೆ "ಗಂಗಾವತರಣ" ದಲ್ಲಿಯ ಗೀತ-ಗಂಗೆಯ ವಿಚಾರಪ್ರವಾಹ ಉತ್ತರ ನೀಡುತ್ತದೆ.

- ಪ್ರಕಾಶಕರು

ಡಾ|| ದ.ರಾ.ಬೇಂದ್ರೆ ಸಂಶೋಧನ ಸಂಸ್ಥೆ,
ಹುಬ್ಬಳ್ಳಿ.

ರಚನೆ: ರವಿ